ಜನಶಕ್ತಿ


ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಆರೆಸ್ಸೆಸ್ ದಾಳಿಗೊಳಗಾದ
ಕೇರಳ ಕವಿ
ಶ್ರೀಕುಮಾರ್



ಸಂಪುಟ 12 | ಸಂಚಿಕೆ 07 | ಫೆಬ್ರವರಿ 12–18, 2018 | ಪುಟ 16 | ರೂ.10/-   Web : www.janashakthi.co.in   e-mail : janashakthi2007@gmail.com





ತ್ರಿಪುರಾ : 8ನೇ ಎಡರಂಗ ಸರ್ಕಾರದತ್ತ



ಪ್ರಧಾನಿ ಹುದ್ದೆಯ ಘನತೆ ಕುಂದಿಸಿದ ಭಾಷಣ

ಬಿಸಿಯೂಟ ತಾಯಂದಿರು ಬೀದಿಯಲ್ಲಿ





ಬೀದರ್ : ಅತ್ಯಾಚಾರ ವಿರುದ್ಧ ಪ್ರತಿಭಟನೆ

6ನೇ ವೇತನ ಆಯೋಗ ಶಿಫಾರಸು : ಪ್ರತಿಭಟನೆ



ಏಕಕಾಲದಲ್ಲಿ ಚುನಾವಣೆ ಪ್ರಜಾಪ್ರಭುತ್ವ–ವಿರೋಧಿ



ಚುನಾವಣಾ ಬಾಂಡಿಗೆ ಸುಪ್ರಿಂ ಕೋರ್ಟಿನಲ್ಲಿ ಸಿಪಿಐ(ಎಂ) ಸವಾಲು

ಕೇಂದ್ರ ಸರಕಾರ ಮತ್ತು ಚುನಾವಣಾ ಆಯೋಗಕ್ಕೆ ಕೋರ್ಟ್ ನೋಟೀಸು

"ಎಫ್‌ಸಿಆರ್‌ಎ ಕಾಯ್ದೆ ಉಲ್ಲಂಘನೆಯ ಶಿಕ್ಷೆಯಿಂದ ಪಾರಾಗಲು ತಿದ್ದುಪಡಿ"– ಯೆಚುರಿ

ಈ ವರ್ಷದ ಬಜೆಟ್ ಮಂಡನೆಯಾದ ಮೇಲೆ ಮಂಡಿಸುವ ಬಜೆಟ್ ಪ್ರಸ್ತಾಪಗಳನ್ನೊಳಗೊಂಡ ಹಣಕಾಸು ಮಸೂದೆಯಲ್ಲಿ ಮೋದಿ ಸರಕಾರ ಮತ್ತೊಮ್ಮೆ ಗುಟ್ಟಾಗಿ ವಿದೇಶಿ ವಂತಿಗೆಗಳ ನಿಯಂತ್ರಣ ಕಾಯ್ದೆ(ಎಫ್‌ಸಿಆರ್‌ಎ) ಗೆ ತಿದ್ದುಪಡಿ ತಂದಿದೆ. ಈ ಮೂಲಕ ವಿದೇಶಗಳಿಂದ ಅಪಾರ ಹಣ ಪಡೆದು ಈ ಕಾನೂನಿನ ಉಲ್ಲಂಘನೆ ಮಾಡಿದ್ದಕ್ಕೆ ಅನುಭವಿಸಬೇಕಾದ ಶಿಕ್ಷೆಯಿಂದ ಬಿಜೆಪಿ ಮತ್ತು ಕಾಂಗ್ರೆಸ್‌ತಮ್ಮನ್ನು ಪಾರು ಮಾಡಿಕೊಳ್ಳಲು ಅವಕಾಶ ಕಲ್ಪಿಸಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದ್ದಾರೆ.

ಕಳೆದ ಬಜೆಟಿನಲ್ಲಿ ಚುನಾವಣಾ ಬಾಂಡುಗಳನ್ನು ನೀಡುವ ಸರಕಾರದ ಪ್ರಕಟಣೆಯನ್ನು ಪಶ್ನಿಸಿ ಸಿಪಿಐ(ಎಂ) ಸುಪ್ರಿಂ ಕೋಟಿನಲ್ಲಿ ಅರ್ಜಿ ಸಲ್ಲಿಸಿದ್ದು ದೇಶದ ಅತ್ಯುಚ್ಚ ನ್ಯಾಯಾಲಯ ಈ ಬಗ್ಗೆ ಸರಕಾರದಿಂದ ವಿವರಣೆ ಕೇಳಿ ನೋಟೀಸು ಜಾರಿ ಮಾಡಿದ ಹಿನ್ನೆಲೆಯಲ್ಲಿ ಯೆಚುರಿಯವರು ಫೆಬ್ರುವರಿ 3ರಂದು ಕರೆದ ಪತ್ರಿಕಾ ಸಮ್ಮೇಳನದಲ್ಲಿ ಈ ಮಾತು ಹೇಳಿದರು.

ಸುಪ್ರಿಂ ಕೋರ್ಟ್ ನೋಟೀಸು ಚುನಾವಣಾ ಆಯೋಗಕ್ಕೂ ಹೋಗಿದೆ. ಆಯೋಗ ಕಳೆದ ವರ್ಷ ಚುನಾವಣಾ ಬಾಂಡಿನ ಪ್ರಸ್ತಾಪ ಬಂದಾಗ ಅದನ್ನುವಿರೋಧಿಸಿ ಸರಕಾರಕ್ಕೆ ಪತ್ರ ಬರೆದಿತ್ತು. ಆದರೆ ಈಗ ಹೊಸ ಚುನಾವಣಾ ಆಯುಕ್ತರು ಬಂದಿರುವಾಗ ಅದು ಏನು ಉತ್ತರ ಕೊಡುತ್ತದೆ ಎಂದು ಕಾದು ನೋಡಬೇಕಾಗಿದೆ ಎಂದು ಹೇಳಿದ ಯೆಚುರಿ ಈ ಹಿನ್ನೆಲೆಯಲ್ಲಿ ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್ ವಂತಿಗೆಯ ಪ್ರಶ್ನೆ ಪಾರದರ್ಶಕವಾಗುವ ಬದಲು ಹೆಚ್ಚೆಚ್ಚು ನಿಷ್ಪಾರದರ್ಶಕವಾಗುತ್ತಿದೆ, ಈ ಕಾರ್ಪೊರೆಟ್ಟ್ ವಂತಿಗೆಗಳೇ ಭ್ರಷ್ಟಾಚಾರಕ್ಕೆ ಆಹ್ವಾನ ನೀಡುವಂತವು ಎಂದಿದ್ದಾರೆ.

"ಈ ಎರಡೂ ಪಕ್ಷಗಳು ವಿದೇಶಿ ಕಂಪನಿಗಳಿಂದ ಅಪಾರ ಹಣವನ್ನು ಪಡೆದಿವೆ. ಎಫ್‌ಸಿಆರ್‌ಎ ಕಾಯ್ದೆಯನ್ನು ಹಿಂದಿನಿಂದಲೇ ಅನ್ವಯವಾಗುವಂತೆ ತಿದ್ದುಪಡಿ ಮಾಡದಿದ್ದರೆ ಇವರು ಕಾಯ್ದೆಯ ಉಲ್ಲಂಘನೆಯ ವಿಚಾರಣೆಯನ್ನು ಎದುರಿಸಬೇಕಾಗಿತ್ತು. ಈ ತಿದ್ದುಪಡಿಯಿಂದಾಗಿ ಅದರಿಂದ ತಪ್ಪಿಸಿಕೊಂಡಿದ್ದಾರೆ" ಎಂದು ಯೆಚುರಿ ಹೇಳಿದರು.

ವಿದೇಶಿ ವಂತಿಗೆಗಳಿಂದ ಚುನಾವಣಾ ಬಾಂಡ್ ವರೆಗೆ –ಸತತವಾಗಿ ಮೂರು ಬಜೆಟ್‌ಗಳಲ್ಲಿ ಮೂರು ವಂಚನೆಗಳು

ಹೀಗೆಂದು ವಿಶ್ಲೇಷಕರೊಬ್ಬರು ಇದನ್ನು ವರ್ಣಿಸಿದ್ದಾರೆ. ಏಕೆಂದರೆ ಸತತವಾಗಿ ಕಳೆದ ಮೂರು ಬಜೆಟ್‌ಗಳಲ್ಲಿ ಸರಕಾರ ಬಜೆಟ್ ಪ್ರಸ್ತಾಪ ಗಳನ್ನೊಳಗೊಳ್ಳುವ 'ಹಣಕಾಸು ಮಸೂದೆ'ಯಲ್ಲಿ ಈ ಕುರಿತ ಅಂಶವನ್ನು ಮುಚ್ಚುಮರೆಯಿಂದ ಸೇರಿಸಿಕೊಂಡು ಬಂದಿದೆ. ಯೆಚುರಿಯವರೂ ತಮ್ಮ ಹೇಳಿಕೆಯಲ್ಲಿ ಇವನ್ನು ಪ್ರಸ್ತಾಪಿಸಿದರು.

2016ರಲ್ಲಿ ಮೋದಿ ಸರಕಾರ ವಿದೇಶಿ ವಂತಿಗೆಗಳ ನಿಯಂತ್ರಣ ಕಾಯ್ದೆ(ಎಫ್‌ಸಿಆರ್‌ಎ), 2010ಗೆ ತಿದ್ದುಪಡಿ ತಂದಿತು. 2017ರ ಬಜೆಟ್ ರಾಜಕೀಯ ಪಕ್ಷಗಳಿಗೆ ಹಣಕಾಸು ಬರುವುದನ್ನು ಪಾರದರ್ಶಕಗೊಳಿಸುವ ಹೆಸರಿನಲ್ಲಿ 'ಚುನಾವಣಾ ಬಾಂಡ್' ಗಳನ್ನು ಜಾರಿ ಮಾಡುವ ಪ್ರಸ್ತಾವವನ್ನು ಮಂಡಿಸಿತ್ತು. ಈ ವರ್ಷದ ಬಜೆಟಿನಲ್ಲಿ 1976ರಿಂದಲೇ ಅನ್ವಯವಾಗುವಂತೆ ಮಾಡಲು ಮತ್ತೊಂದು ಎಫ್‌ಸಿಆರ್‌ಎ ತಿದ್ದುಪಡಿಯನ್ನು ಸೇರಿಸಲಾಗಿದೆ.

ನಾಲ್ಕು ವರ್ಷಗಳ ಹಿಂದೆ ಮಾರ್ಚ್ 28, 2014ರಲ್ಲಿ ದಿಲ್ಲಿ ಹೈಕೋರ್ಟ್ ವಿದೇಶಿ ವಂತಿಗೆಗಳ ಕುರಿತ ಮೊಕದ್ದಮೆಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು 1976 ರ ಎಫ್‌ಸಿಆರ್‌ಎ ಕಾಯ್ದೆಯನ್ನು ಉಲ್ಲಂಘಿಸಿವೆ ಎಂದು ತೀರ್ಪು ನೀಡುತ್ತ, ಆರು ತಿಂಗಳೊಳಗೆ ಕಾನೂನು ಪ್ರಕಾರ ಕ್ರಮ ತಗೊಳ್ಳಬೇಕು ಎಂದು ಭಾರತದ ಚುನಾವಣಾ ಆಯೋಗಕ್ಕೆ ಹೇಳಿತು. ಚುನಾವಣಾ ಆಯೋಗ ಕೇಂದ್ರ ಗೃಹ ಮಂತ್ರಾಲಯಕ್ಕೆ ಈ ಬಗ್ಗೆ ಬರೆಯಿತು.

ಈ ನಡುವೆ ಕಾಂಗ್ರೆಸ್ ನೇತೃತ್ವದ ಸರಕಾರ ಹೋಗಿ ಬಿಜೆಪಿ ನೇತೃತ್ವದ ಸರಕಾರ ಬಂತು. ನಿರೀಕ್ಷಿಸಿದಂತೆ, ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಈ ತೀರ್ಪಿನ ವಿರುದ್ಧ ಸುಪ್ರಿಂ ಕೋರ್ಟ್‌ಗೆ ಅಪೀಲು ಹೋದವು.

2016 ರ ಬಜೆಟಿನಲ್ಲಿ 2010ರಲ್ಲಿ ಪುನರ್ರೂಪಿಸಿದ ಎಫ್‌ಸಿಆರ್‌ಎ ಗೆ ತಿದ್ದುಪಡಿ ಬಂದದ್ದು ಈ ಹಿನ್ನೆಲೆಯಲ್ಲಿ. ಈ ತಿದ್ದುಪಡಿ 'ಕಾಯ್ದೆಯಲ್ಲಿದ್ದ 'ವಿದೇಶಿ ಮೂಲ' ಎಂಬುದನ್ನು ಬಿಜೆಪಿ ಮತ್ತು ಕಾಂಗ್ರೆಸ್ ಹೈಕೋರ್ಟ್ ತೀರ್ಪಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವ ರೀತಿಯಲ್ಲಿ ನಿರೂಪಿಸಿತು. ಇದರ ಸಹಾಯದಿಂದ, ನವಂಬರ್ 2016ರಲ್ಲಿ ಸುಪ್ರಿಂ ಕೋರ್ಟಿನಲ್ಲಿ ಈ ಎರಡು ಪಕ್ಷಗಳ ಅಪೀಲು ವಿಚಾರಣೆಗೆ ಬಂದಾಗ, ಅವರ ವಕೀಲರುಗಳು 2016ರ ತಿದ್ದುಪಡಿಯ ನಂತರ ಈ ಕೇಸ್‌ಗೆ ಏನೂ ಅರ್ಥವುಳಿದಿಲ್ಲ ಎಂದು ಹೇಳಿದರು. ಆಗ ಮೂರು ಅಂಶಗಳನ್ನು ಆ ವಕೀಲರುಗಳ ಗಮನಕ್ಕೆ ತರಲಾಯಿತು– (1) ಎಫ್‌ಸಿಆರ್‌ಎ ಕಾಯ್ದೆ ಮೂಲತಃ 1976ರಲ್ಲಿ ಬಂದಿತ್ತು, (2) ಹೊಸದೊಂದು ಎಫ್‌ಸಿಆರ್‌ಎ 2010ರಲ್ಲಿ ಬಂತು, (3) ಬಿಜೆಪಿ ಮತ್ತು ಕಾಂಗ್ರೆಸ್ ವಿದೇಶಿ ವಂತಿಗೆಗಳನ್ನು ಪಡೆದದ್ದು 2010ರ ಮೊದಲಾದ್ದರಿಂದ, ಅದಕ್ಕೆ ಅನ್ವಯವಾಗುವದು ಎಫ್‌ಸಿಆರ್‌ಎ 1976. ಆದ್ದರಿಂದ ಕೇಸನ್ನು ಅದರ ಅಡಿಯಲ್ಲಿ ಇತ್ಯರ್ಥ ಮಾಡಬೇಕಾಗಿದೆ.

ಆಗ ಬಿಜೆಪಿ ಮತ್ತು ಕಾಂಗ್ರೆಸ್ ವಕೀಲರುಗಳು ತಮ್ಮ ಕಕ್ಷಿದಾರರೊಡನೆ ಈ ಕುರಿತು ಸಮಾಲೋಚಿಸಬೇಕಾಗಿದೆ ಎನ್ನುತ್ತ ಅಪೀಲನ್ನು ಹಿಂತೆಗೆದುಕೊಂಡರು, ಅಂದರೆ ಈಗ ದಿಲ್ಲಿ ಹೈಕೋರ್ಟ್ ತೀರ್ಪನ್ನು ಜಾರಿಗೆ ತಂದು ಈ ಎರಡೂ ಪಕ್ಷಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕಾಗಿತ್ತು. ಹಾಗೆ ಮಾಡದ್ದರಿಂದ ದಿಲ್ಲಿ ಹೈಕೋರ್ಟಿನಲ್ಲಿ ಕೇಂದ್ರ ಸರಕಾರದ ವಿರುದ್ಧ ನ್ಯಾಯಾಂಗ ನಿಂದನೆಯ ಅರ್ಜಿ ಹಾಕಲಾಯಿತು. ಕೇಂದ್ರ ಸರಕಾರದ ವಕೀಲರುಗಳು ಒಂದಿಲ್ಲೊಂದು ಕಾರಣ ಮುಂದೊಡ್ಡುತ್ತಿರುವುದರಿಂದ ಈ ಅರ್ಜಿ ಇನ್ನೂ ಇತ್ಯರ್ಥವಾಗದೆ ಉಳಿದಿದೆ.

2018ರ ಎಫ್‌ಸಿಆರ್‌ಎ ತಿದ್ದುಪಡಿ ಬಂದಿರುವುದು ಈ ಹಿನ್ನೆಲೆಯಲ್ಲಿ. ಇದು ಬಿಜೆಪಿ ಮತ್ತು ಕಾಂಗ್ರೆಸನ್ನು ಕಾನೂನು ಉಲ್ಲಂಘನೆಗೆ ಶಿಕ್ಷೆಯಿಂದ ಉಳಿಸುವ ಉದ್ದೇಶದಿಂದಲೇ ಎಂಬುದು ಸ್ಪಷ್ಟ. ಇದು 'ವಿದೇಶಿ ಮೂಲಗಳ' ನಿರೂಪಣೆಯನ್ನು 1976 ರಿಂದಲೇ ಅನ್ವಯ ವಾಗುವಂತೆ ಮಾಡುವ ತಿದ್ದುಪಡಿ. ಅಂದರೆ ತಮ್ಮ ಪಕ್ಷವನ್ನು(ಜತೆಗೆ ಅದು ಬಯಸದಿದ್ದರೂ ಅನಿವಾರ್ಯವಾಗಿ ಕಾಂಗ್ರೆಸನ್ನೂ) ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಹತಾಶ ಮೋದಿ ಸರಕಾರ ಈಗ ಅಸ್ತಿತ್ವದಲ್ಲೇ ಇಲ್ಲದ ಕಾಯ್ದೆಯೊಂದನ್ನು ತಿದ್ದುಪಡಿ ಮಾಡ ಹೊರಟಿದೆ!

ಈ ನಡುವೆ 2017ರ ಬಜೆಟಿನೊಂದಿಗೆ ಬಂದ

ಪುಟ 7 ನೋಡಿ

ತ್ರಿಪುರಾದಲ್ಲಿ ಬಿಜೆಪಿಯ ಭ್ರಷ್ಟ ಚುನಾವಣಾ ವರ್ತನೆಗಳ ಬಗ್ಗೆ ಚುನಾವಣಾ ಆಯೋಗಕ್ಕೆ ಪತ್ರ– ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಸಿಪಿಐ(ಎಂ) ಆಗ್ರಹ

ಫೆಬ್ರುವರಿ 8 ರಂದು ಸಿಪಿಐ(ಎಂ) ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯ ನೀಲೋತ್ಪಲ ಬಸು ಅವರು ಮುಖ್ಯ ಚುನಾವಣಾ ಆಯುಕ್ತರನ್ನು ಭೇಟಿ ಮಾಡಿ ತ್ರಿಪುರಾದಲ್ಲಿ ಶಾಂತಿಯುತವಾಗಿ, ನ್ಯಾಯಯುತವಾಗಿ ಮುಕ್ತ ಚುನಾವಣೆಗಳನ್ನು ನಡೆಸುವ ವಿಷಯವನ್ನು ಚರ್ಚಿಸಿದರು, ಮತ್ತು ಬಿಜೆಪಿ ಕೆಲವು ಭ್ರಷ್ಟ ಆಚರಣೆಗಳಲ್ಲಿ ತೊಡಗಿರುವುದನ್ನು ಆಯೋಗದ ಗಮನಕ್ಕೆ ತರುವ ಪತ್ರವೊಂದನ್ನು ಸಾಕ್ಷಿ ದಸ್ತಾವೇಜುಗಳೊಂದಿಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಕೋರಿಕೆಯೊಂದಿಗೆ ಸಲ್ಲಿಸಿದರು. ಸಿಪಿಐ(ಎಂ)ನ ಆತಂಕಗಳನ್ನು ಗಂಭೀರವಾಗಿ ಪರಿಶೀಲಿಸುವುದಾಗಿ ಮುಖ್ಯ ಚುನಾವಣಾ ಆಯುಕ್ತರು ಆಶ್ವಾಸನೆಯಿತ್ತರು.

ಆ ಪತ್ರದಲ್ಲಿ ಪಟ್ಟಿ ಮಾಡಿದ ಬಿಜೆಪಿಯ ಭ್ರಷ್ಟ ಕ್ರಮಗಳು ಹೀಗಿವೆ:

* ಬಿಜೆಪಿಯ ಸಾಮಾಜಿಕ ಮಾಧ್ಯಮ ಪುಟದಲ್ಲಿ ತ್ರಿಪುರಾದ ಅನಿವಾಸಿ ಮತದಾರರಿಗೆ ಅವರ ಚುನಾವಣಾ ಗುರುತು ಪತ್ರ ತೋರಿಸಿದರೆ ತ್ರಿಪುರಾಕ್ಕೆ ಹೋಗಲು ಪುಕ್ಕಟೆ ರೈಲು ಟಿಕೇಟ್ ಕೊಡಲಾಗುವುದು ಎಂಬ ಜಾಹೀರಾತು ಪ್ರಕಟಿಸಲಾಗಿದೆ, ಇದು ಪ್ರಧಾನ ಮಂತ್ರಿಗಳಿಂದ ಒಂದು 'ಕೊಡುಗೆ' ಎಂದೂ ಹೇಳಲಾಗಿದೆ.ಇದು ಜನತಾ ಪ್ರಾತಿನಿಧ್ಯ ಕಾಯ್ದೆಯ ಸ್ಪಷ್ಟ ಶಿಕ್ಷಾರ್ಹ ಉಲ್ಲಂಘನೆ.
* ಅಂಬೀಪುರ ವಿಧಾನಸಭಾ ಕ್ಷೇತ್ರದಲ್ಲಿ ನಡೆಸಿದ ಇಲೆಕ್ಟ್ರಾನಿಕ್ ಚುನಾವಣಾ ಯಂತ್ರದ ಪ್ರದರ್ಶನದಲ್ಲಿ ಯಾವ ಗುಂಡಿ ಒತ್ತಿದರೂ ಕಮಲದ ಚಿಹ್ನೆಗೇ ಮತ ಬೀಳುತ್ತಿತ್ತು. ಅಧಿಕಾರಿಗಳು ಯಂತ್ರ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಒಪ್ಪಿಕೊಂಡರು. ಆದರೂ ಯಂತ್ರ ಸರಿಯಾಗಿ ಕೆಲಸ ಮಾಡದಾಗಲೆಲ್ಲ ಕಮಲಕ್ಕೇ ಮತ ಬೀಳುವುದು ಆಶ್ಚರ್ಯಕರ. ನಿಜವಾದ ಮತದಾನದಲ್ಲಿ ಎಲ್ಲಿಯೂ ಹೀಗಾಗದಂತೆ ಮತದಾರರಲ್ಲಿ ವಿಶ್ವಾಸ ಮೂಡುವಂತೆ ಕ್ರಮ ಕೈಗೊಳ್ಳಬೇಕು, ಮತ್ತು ಮತಗಣನೆಯ ವೇಳೆಯಲ್ಲಿ ಕನಿಷ್ಟ 20% ವನ್ನು ಯಂತ್ರಕ್ಕೆ ಲಗತ್ತಿಸಿದ ಕಾಗದದಲ್ಲಿನ ದಾಖಲಾತಿಯೊಂದಿಗೆ ತಾಳೆ ಹಾಕಬೇಕು.
* ದೊಡ್ಡ ಸಂಖ್ಯೆಯಲ್ಲಿ ಹೊರಗಿನವರು ತ್ರಿಪುರಾವನ್ನು ಪ್ರವೇಶಿಸಿ ಅಗರ್ತಲಾದಲ್ಲಿ ನಾಲ್ಕು ಕಡೆ ಮತ್ತು ಖೊವೈ ಜಿಲ್ಲೆಯಲ್ಲಿ ಒಂದು ಕಡೆ ಠಿಕಾಣಿ ಹೂಡಿದ್ದಾರೆ ಎಂದು ಕಂಡುಬಂದಿದೆ. ತ್ರಿಪುರಾ ಒಂದು ಗಡಿರಾಜ್ಯವಾದ್ದರಿಂದ ಚುನಾವಣಾ ಆಯೋಗ ಮುಂದಾಗಿಯೇ ಶಾಂತಿಯುತ ಮತದಾನವನ್ನು ಬುಡಮೇಲು ಮಾಡುವ ಪ್ರಯತ್ನವನ್ನು ಮುಂಗಂಡು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಇದರಲ್ಲಿ ಗುಪ್ತಚರ ಮತ್ತು ಭದ್ರತಾಪಡೆಗಳ ಬಳಕೆಯೂ ಸೇರಿರಬೇಕು.
* ಬಿಜೆಪಿಯ ಏಳನೇ ವೇತನ ಆಯೋಗದ ಕುರಿತ ಪ್ರಚಾರ ಪುಸ್ತಿಕೆಯಲ್ಲಿ ರಾಜ್ಯಪಾಲರ ಭಾವಚಿತ್ರವಿದೆ. ಇದು ಒಪ್ಪಲಾಗದ ವರ್ತನೆ. ಇದನ್ನು ಸಾರ್ವಜನಿಕವಾಗಿ ಖಂಡಿಸಿ ಮುಟ್ಟುಗೋಲು ಹಾಕಿಕೊಳ್ಳಬೇಕು.
* ಒಬ್ಬ ಸ್ವತಂತ್ರ ನಿರ್ದೇಶಕರೆಂಬುವವರ 'ಲಾಲ್ ಸರ್ಕಾರ್' ಎಂಬ ವಿಡಿಯೋ ಚಿತ್ರವನ್ನು ಬಿಜೆಪಿ ಬಳಸುತ್ತಿದೆ ಎಂಬುದು ಕೂಡ ಆಘಾತಕಾರಿ. ಯಾವುದೇ ವೀಡಿಯೋ ಚಿತ್ರವನ್ನು ಮಾತ್ರವಲ್ಲ, ಅದರ ಟ್ರೇಲರ್‌ನ್ನು ಪ್ರಮಾಣ ಪತ್ರವಿಲ್ಲದೆ ತೋರಿಸಲು ಸಾಧ್ಯವಿಲ್ಲ. ಇದು ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆಯಾದ್ದರಿಂದ ಇದರ ಪ್ರದರ್ಶನವನ್ನು ನಿಲ್ಲಿಸಲು ಕ್ರಮ ಕೈಗೊಳ್ಳಬೇಕು.
* ಆಕಾಶವಾಣಿ/ ದೂರದರ್ಶನದಲ್ಲಿ ಅಧಿಕೃತವಾಗಿ ಪ್ರಸಾರವಾಗುವ ಭಾಷಣಗಳು ಮತ್ತು ವೀಡಿಯೊ ತುಣುಕುಗಳ ಪ್ರಮಾಣೀಕರಣದ ಕೆಲಸವನ್ನು ಸಾಮಾನ್ಯವಾಗಿ ಎಡ–ವಿರೋಧಿಯಾಗಿರುವ ಮಾಧ್ಯಮಕ್ಕೆ ಸೇರಿದ ಇಬ್ಬರು ಪತ್ರಕರ್ತರಿಗೆ ಒಪ್ಪಿಸಲಾಗಿದೆ ಎಂಬ ಸಂಗತಿ ಆಶ್ಚರ್ಯ ಉಂಟು ಮಾಡುವಂತದ್ದು. ಚುನಾವಣಾ ಪ್ರಕ್ರಿಯೆಯ ನಿಷ್ಪಕ್ಷಪಾತತೆ ಕಾಯ್ದುಕೊಳ್ಳಲು ಪ್ರಮಾಣೀಕರಣವನ್ನು ಆಕಾಶವಾಣಿ/ದೂರದರ್ಶನ ತಾವೇ ಮಾಡುವಂತಾಗಬೇಕು.

ರಫೇಲ್ ಯುದ್ಧವಿಮಾನ ವ್ಯವಹಾರವನ್ನು ಮರೆಮಾಚುತ್ತಿರುವದೇಕೆ?

'ವರ್ಗೀಕೃತ ಮಾಹಿತಿ' ಎಂಬುದು ಒಪ್ಪಲಾಗದ ನೆವ–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಫ್ರಾನ್ಸ್ ನಿಂದ ಖರೀದಿಸಲಿರುವ ರಫೇಲ್ ಯುದ್ಧ ವಿಮಾನಕ್ಕೆ ತೆರಬೇಕಾದ ಬೆಲೆ ಎಷ್ಟು ಎಂದು ಸಂಸತ್ತಿನಲ್ಲಿ ಕೇಳಿದ ಪ್ರಶ್ನೆಗೆ ಉತ್ತರ ನೀಡುತ್ತ, ರಕ್ಷಣಾ ಮಂತ್ರಿಗಳು ಇದನ್ನು ತಿಳಿಸಲು ಸಾಧ್ಯವಿಲ್ಲ, ಏಕೆಂದರೆ ಈ ಕುರಿತ ಎರಡು ಸರಕಾರಗಳ ನಡುವಿನ ಒಪ್ಪಂದದ ವಿವರಗಳು 'ವರ್ಗೀಕೃತ ಮಾಹಿತಿ' ಎಂದು ಹೇಳಿದ್ದಾರೆ. ಅಂದರೆ ಈ ಒಪ್ಪಂದ ಕುರಿತ ಮಾಹಿತಿಗಳನ್ನು ಅಧಿಕೃತ ವ್ಯಕ್ತಿಗಳಿಗೆ ಮಾತ್ರ ಕೊಡಬಹುದು, ಸಂಸತ್ ಸದಸ್ಯರು ಈ 'ಅಧಿಕೃತ ವ್ಯಕ್ತಿಗಳು' ನಿರೂಪಣೆಯಲ್ಲಿ ಬರುವುದಿಲ್ಲ ಎಂಬದು ಅವರ ಮಾತಿನ ಅರ್ಥ.

ಇದನ್ನು ಖಂಡಿತಾ ಒಪ್ಪಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಪ್ರಧಾನ ಮಂತ್ರಿಗಳ ಫ್ರಾನ್ಸ್ ಭೇಟಿ ಕಾಲದಲ್ಲಿ ಈ ಕುರಿತು ಮರುಚೌಕಾಸಿ ನಡೆಸಿ ಯಶಸ್ವಿಯಾಗಿ ವ್ಯವಹಾರವನ್ನು ಕುದುರಿಸಲಾಗಿದೆ ಎಂದು ಪ್ರಕಟಿಸಿದಂದಿನಿಂದಲೇ, ಈ ಮರುವ್ಯವಹಾರದಲ್ಲಿ ತೆರಬೇಕಾದ ಬೆಲೆ ಈ ಹಿಂದಿನ ಒಪ್ಪಂದದಲ್ಲಿ ನಿರ್ಧರಿಸಿದ್ದಕ್ಕಿಂತ ಬಹಳ ಹೆಚ್ಚು ಎಂದು ಆಪಾದಿಸುವ ಹಲವು ವರದಿಗಳು ಬಂದಿವೆ. ಈ ಹಿನ್ನೆಲೆಯಲ್ಲಿ ಭಾರತ ತೆರಲು ಒಪ್ಪಿದ ಬೆಲೆ ಎಷ್ಟೆಂದು ತಿಳಿಸದಿರಲು ರಕ್ಷಣಾ ಮಂತ್ರಿಗಳು ಇದು 'ವರ್ಗೀಕೃತ ಮಾಹಿತಿ' ಎಂದು ನೆವ ಒಡ್ಡಿರುವುದು ಸಮರ್ಥನೀಯವಲ್ಲ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಕೋಟಿಗಟ್ಟಲೆ ಡಾಲರುಗಳ ಒಂದು ರಕ್ಷಣಾ ವ್ಯವಹಾರವನ್ನು ರಹಸ್ಯವಾಗಿಡಲು ಸಾಧ್ಯವಿಲ್ಲ. ಸಂಸತ್ತು ದೇಶದ ಸಾರ್ವಭೌಮ ಅಧಿಕಾರಯುತ ಸಂಸ್ಥೆ. ಅದರಿಂದ ಮಾಹಿತಿಯನ್ನು ಈ ಸರಕಾರ ಮರೆಮಾಚುತ್ತಿರುವುದಾದರೂ ಏಕೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಪ್ರಶ್ನಿಸಿದೆ.

ರಾಷ್ಟ್ರದ ಖಜಾನೆಯ ಮೇಲೆ ಒಂದು ಅಗಾಧ ಮತ್ತು ಅಸಮರ್ಥನೀಯ ಹೊರೆಯನ್ನು ಸೃಷ್ಟಿಸಿರುವುದಷ್ಟೇ ಅಲ್ಲ, ನಮ್ಮ ರಕ್ಷಣಾ ವಲಯಕ್ಕೂ ಮತ್ತು ರಕ್ಷಣಾ ಉತ್ಪಾದನೆಯಲ್ಲಿ ತೊಡಗಿರುವ ಸಾರ್ವಜನಿಕ ವಲಯದ ಘಟಕಗಳಿಗೂ ಗಂಭೀರ ದುಷ್ಪರಿಣಾಮ ತರುವಂತದ್ದು ಎಂದು ಟೀಕಿಸಲ್ಪಟ್ಟಿರುವ ಒಂದು ವ್ಯವಹಾರದ ಬಗ್ಗೆ ಸಂಸತ್ತಿಗೆ ಮಾಹಿತಿ ನಿರಾಕರಿಸಿರುವುದನ್ನು ಒಪ್ಪಲು ಸಾಧ್ಯವಿಲ್ಲ. ಸರಕಾರ ಪಾರದರ್ಶಕತೆ ಮತ್ತು ಋಜುತ್ವದ ದೃಷ್ಟಿಯಿಂದ ಈ ಒಪ್ಪಂದ ಕುರಿತಾದ ಎಲ್ಲ ವಿವರಗಳನ್ನು ಸಂಸತ್ತಿಗೆ ಮತ್ತು ಜನತೆಗೆ ಬಹಿರಂಗ ಪಡಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಸಂಪಾದಕೀಯ

ಪ್ರಧಾನಿ ಪದವಿಯ ಘನತೆ ಕುಂದಿಸುವ ಭಾಷಣ

ಪ್ರಧಾನಿ ಮೋದಿ ಬೆಂಗಳೂರಿನಲ್ಲಿ ಫೆಬ್ರುವರಿ 4ರಂದು ನಡೆದ ರಾಜ್ಯ ಬಿಜೆಪಿಯ 84 ದಿನಗಳ ಪರಿವರ್ತನಾ ಯಾತ್ರೆಯ ಸಮಾರೋಪದಲ್ಲಿ ಮಾಡಿದ ಭಾಷಣ, ಪ್ರಧಾನಿ ಹುದ್ದೆಯ ಘನತೆಯನ್ನು ಇನ್ನಷ್ಟು ಕುಂದಿಸುವ ಮತ್ತು ಆ ಮೂಲಕ ರಾಜ್ಯ ಮತ್ತು ದೇಶದಲ್ಲಿ ಚುನಾವಣಾ ಪ್ರಚಾರದ ಮಟ್ಟದ ಕುಸಿತದ ಆತಂಕಕಾರಿ ಕೆಳಮಟ್ಟದ ಪ್ರತೀಕವಾಗಿದೆ. ಗುಜರಾತಿನ ವಿಧಾನಸಭೆ ಚುನಾವಣಾ ಪ್ರಚಾರದಲ್ಲಿ ಈಗಾಗಲೇ ಪಾತಾಳ ಕಚ್ಚಿದ್ದ ಪ್ರಧಾನಿ ಹುದ್ದೆಯ ಘನತೆ ಮತ್ತು ಚುನಾವಣಾ ಪ್ರಚಾರದ ಮಟ್ಟ, ಇದರ ನಂತರ ಮತ್ತಷ್ಟು ಕೆಳಗೆ ಹೋಗಿದೆ. ಪ್ರಧಾನಿಯವರ ಭಾಷಣ, ಆಧಾರರಹಿತ ಆರೋಪಗಳ, ಉತ್ಪ್ರೇಕ್ಷೆಗಳ, ಅರೆಸುಳ್ಳು ಹಸಿ ಸುಳ್ಳುಗಳ ಕಾಕ್-ಟೈಲ್ ಆಗಿತ್ತು. ಅದಕ್ಕೆ ಮುಖ್ಯಮಂತ್ರಿ ಮತ್ತು ಕಾಂಗ್ರೆಸ್ ಸಾಕಷ್ಟು ಘನತೆಯಿಂದ ಗಂಭೀರವಾಗಿಯೇ ಪ್ರತಿಕ್ರಿಯಿಸಿದರು.. ಅವುಗಳಲ್ಲಿ ಮೂರು ಪ್ರಮುಖ ಅಂಶಗಳನ್ನು ಮತ್ತು ಅವುಗಳಿಗೆ ಕಾಂಗ್ರೆಸ್ ಪ್ರತಿಕ್ರಿಯೆಯನ್ನು ವಿಶ್ಲೇಷಿಸುವುದು ಅಗತ್ಯ. ಅದೇ ಸಮಯದಲ್ಲಿ, ಪ್ರಧಾನಿ ಮಧ್ಯಪ್ರವೇಶ ಮಾಡಿ ಮಹದಾಯಿ ಸಮಸ್ಯೆ ಬಗೆಹರಿಸುವ ಬಗ್ಗೆ, ರೈತರ ಸಾಲ ಮನ್ನಾ ಮಾಡುವ ಬಗ್ಗೆ ಮಾತನಾಡುವುದರಿಂದ ತಪ್ಪಿಸಿಕೊಳ್ಳಲು, ಕಾಂಗ್ರೆಸ್ ಮೇಲೆ ದಾಳಿ ಸುಲಭ ಉಪಾಯ ಎಂಬುದು ಸರ್ವವಿದಿತ. ರಾಜ್ಯದ ಜನತೆಯ ಸಮಸ್ಯೆಗಳನ್ನು ಪರಿಹರಿಸಲು ಪ್ರಧಾನಿ ಅಥವಾ ಬಿಜೆಪಿಯ ಸಕಾರಾತ್ಮಕ ಕಾರ್ಯಕ್ರಮದ ಅಭಾವ ಹಾಗೂ 2014ರ ಚುನಾವಣಾ ಭರವಸೆಗಳನ್ನು ಈಡೇರಿಸಲು ಕೇಂದ್ರ ಸರಕಾರದ ಪೂರ್ಣ ವೈಫಲ್ಯ ಮರೆಮಾಚಲು ಸಹ ಇದು ಬಿಟ್ಟರೆ ಮೋದಿಗೆ ಬೇರೆ ದಾರಿಯೇ ಇಲ್ಲ ಎಂಬುದನ್ನು ಗಮನಿಸಬಹುದು.

ಮೊದಲನೆಯದಾಗಿ "ಎಲ್ಲಾ ಯೋಜನೆಗಳಲ್ಲೂ ಶೇ. 10 ರಷ್ಟು ಕಮಿಶನ್ ಪಡೆಯುವ ಸರ್ಕಾರ ಇಲ್ಲಿದೆ" ಎಂಬುದು ತೀರಾ ಉತ್ಪ್ರೇಕ್ಷೆಯದ್ದೂ ಹೌದು. ಆಧಾರರಹಿತ ಆರೋಪವೂ ಹೌದು. ಕಾಂಗ್ರೆಸ್ ಸರ್ಕಾರದಲ್ಲಿ ಭ್ರಷ್ಟಾಚಾರ ಇದೆ ಎಂಬುದರ ಬಗ್ಗೆ ಅನುಮಾನ ಇಲ್ಲ. ಆದರೆ 'ಎಲ್ಲಾ' ಯೋಜನೆಗಳಲ್ಲೂ 'ಶೇ.10 ಕಮಿಶನ್' ಎಂಬ ಬೀಸು ಆರೋಪವನ್ನು ಒಬ್ಬ ಪ್ರಧಾನಿ ಹೋಗಲಿ, ಯಾರಾದರೂ ಸೂಕ್ತ ಪುರಾವೆ ಒದಗಿಸದೆ ಮಾಡಬಹುದೇ? ಇದು ಎಷ್ಟು ಬೀಸು ಬೇಜವಾಬ್ದಾರಿ ಆರೋಪ ಎಂಬುದು 1–2 ದಿನಗಳಲ್ಲಿ ಹೊರಬಂತು. ಕೇಂದ್ರ ಸಚಿವ ಸದಾನಂದಗೌಡ ಕಮಿಶನನ್ನು 30ಕ್ಕೆ ಏರಿಸಿದರು! ಹಾಗಾದರೆ ಇದರಲ್ಲಿ ಯಾರದು ಮಾಹಿತಿ ಸರಿ ಯಾರದು ಸುಳ್ಳು?! ಪ್ರಧಾನಿ ಶೇ. 10 ಕಮಿಶನ್ ಎಂದು ಹೇಳಿದ್ದು ರಾಜ್ಯ ಸರಕಾರವನ್ನು "ಹೊಗಳಿದಂತಾಯಿತು" ಎಂದು ಕೆಲ ಬಿಜೆಪಿ ನಾಯಕರು (ಬಹುಶಃ ಯೋಜನೆಗಳಲ್ಲಿ ಎಷ್ಟು ಪರ್ಸೆಂಟ್ ಎಂಬುದರ ಬಗ್ಗೆ "ಅನುಭವ" ಇರುವವರು!) ಭಾವಿಸಿದ್ದರಿಂದ ಕಮಿಶನ್ ಏರಿಸಲಾಯಿತು ಎಂಬುದು ಜೋಕಿನ ವಸ್ತು ಆಯಿತು. ಕನಿಷ್ಟ ಒಂದಾದರೂ ನಿರ್ದಿಷ್ಟ ಪ್ರಕರಣದ ವಿವರ ಕೊಟ್ಟಿದ್ದರೆ ಇದನ್ನು ಒಪ್ಪಿಕೊಳ್ಳಬಹುದಿತ್ತು. ಮೋದಿ ಹೆಸರಿಸಿದ ಒಂದೇ ಪ್ರಕರಣ, ಕೈ ಬಿಡಲಾದ ಉಕ್ಕಿನ ಮೇಲ್ಸೇತುವೆ. ಈ ಪ್ರಕರಣದಲ್ಲೂ ಬಿಜೆಪಿ ಬೆಂಬಲಿಗ ಕಾಂಟ್ರಾಕ್ಟರ್ ಗೆ ಕಾಂಟ್ರಾಕ್ಟ್ ಸಿಗದ್ದರಿಂದ ಅದರ ವಿರುದ್ಧ "ಚಳುವಳಿ" ಮಾಡಲಾಯಿತು ಎಂಬ ಗಂಭೀರ ಆಪಾದನೆಯಿದೆ.



ಕೃಪೆ: ಪಿ. ಮಹಮ್ಮದ್, ವಿ.ಕ.

ಅದಿರಲಿ, ಭ್ರಷ್ಟಾಚಾರದ ಪ್ರಕರಣದಲ್ಲಿ ಜೈಲಿಗೆ ಹೋಗಿ ಬಂದ, ಮತ್ತು ಅದರ ಹಲವು ಪಟ್ಟು ಭ್ರಷ್ಟಾಚಾರ ಮಾಡಿಯೂ ಸಿಕ್ಕಿ ಹಾಕಿ ಕೊಳ್ಳದೆ ಈಗ ಬಿಜೆಪಿಗೆ ಸೇರಿದ್ದರಿಂಧ 'ಸ್ವಚ್ಛ'ರಾದ – ಇಬ್ಬರು ಮಾಜಿ ಮುಖ್ಯಮಂತ್ರಿಗಳನ್ನು ಅಕ್ಕ ಪಕ್ಕದಲ್ಲಿ ಇಟ್ಟುಕೊಂಡು ಇಂಥ ಬೀಸು ಆಪಾದನೆ ಮೋದಿ ಮಾತ್ರ ಮಾಡಬಲ್ಲರು. ಇದಕ್ಕೆ ಪ್ರತಿಕ್ರಿಯೆಯಾಗಿ ಕಾಂಗ್ರೆಸ್ ಅಮಿತ್ ಶಾ ಮಗನ ಭ್ರಷ್ಟಾಚಾರದ ಪ್ರಕರಣ, ಗುಜರಾತಿನಲ್ಲೂ ಕೇಂದ್ರದಲ್ಲೂ ಲೋಕಾಯುಕ್ತ ನೇಮಿಸದ ಬಗ್ಗೆ ಪ್ರಶ್ನೆಗಳನ್ನು ಎತ್ತಿದ್ದು ಸರಿಯಾಗಿಯೇ ಇತ್ತು. ಆದರೆ ಕರ್ನಾಟಕದ ಹೆಮ್ಮೆಯಾಗಬಹುದಾಗಿದ್ದ ಲೋಕಾಯುಕ್ತ ವ್ಯವಸ್ಥೆಯನ್ನು ಕಿತ್ತು ಹಾಕಿದ್ದು ಕಾಂಗ್ರೆಸ್ ಆಡಳಿತದ ಮೇಲೊಂದು ಕಪ್ಪುಚುಕ್ಕೆಯೇ. ಚುನಾವಣಾ ಬಾಂಡ್ ಕಾನೂನು ಮತ್ತು ಎಫ್.ಸಿ.ಆರ್.ಎ. ಕಾನೂನಿನ ಹಿಂದಿನ ತಾರೀಕಿನಿಂದ ತಿದ್ದುಪಡಿಗಳ ಮೂಲಕ ಬಿಜೆಪಿಗೆ ಬಂದ ಕಾನೂನುಬಾಹಿರ ವಿದೇಶೀ ಮತ್ತು ಸ್ವದೇಶೀ ಕಾರ್ಪೊರೆಟ್ ನಿಧಿಯ ಹಗರಣಗಳನ್ನು ಮುಚ್ಚಿ ಹಾಕುವುದರ ಬಗೆಗೂ ಪ್ರಶ್ನಿಸಿ, ಬಿಜೆಪಿ ಹಾಗೂ ಪ್ರಧಾನಿಯನ್ನು ಕಾಂಗ್ರೆಸ್ ಬಯಲು ಮಾಡಬಹುದಿತ್ತು. ಆದರೆ ಹಾಗೆ ಮಾಡಲಿಲ್ಲ, ಯಾಕೆಂದರೆ ಕಾಂಗ್ರೆಸ್ ಸಹ ಇವೆರಡು ಕ್ರಮಗಳ ಫಲಾನುಭವಿ.

ಇನ್ನೊಂದು ಮೋದಿ ಅಸ್ಪಷ್ಟವಾದ ಬೀಸು ಹೇಳಿಕೆ "ಕರ್ನಾಟಕಕ್ಕೆ ಬಿಜೆಪಿ 2 ಲಕ್ಷ ಕೋಟಿ ರೂ. ಯುಪಿಎ ಕೊಟ್ಟಿದ್ದರ (73 ಸಾವಿರ ಕೋಟಿ) 3 ಪಟ್ಟು ಕೊಡುಗೆ ಕೊಟ್ಟಿದೆ" ಎಂಬುದು. ಹಣಕಾಸು ಕಮಿಶನ್ ನಿರ್ಧರಿಸುವ ವಿವಿಧ ತೆರಿಗೆ ಮತ್ತು ಕರಗಳ ರಾಜ್ಯದ ಪಾಲು, ರಾಜ್ಯ ಯೋಜನೆಗೆ ಕೇಂದ್ರದ ನೆರವು, ಯೋಜನೇತರ ಅನುದಾನ ಮತ್ತು ಸಾಲಗಳು, ಕೇಂದ್ರದ ಮತ್ತು ಕೇಂದ್ರ ಪ್ರಾಯೋಜಿತ ಯೋಜನೆಗಳು– ಹೀಗೆ ಕನಿಷ್ಠ ನಾಲ್ಕು ರೀತಿಯಲ್ಲಿ ಕೇಂದ್ರದಿಂದ ರಾಜ್ಯಕ್ಕೆ ಹಣ ಬರುತ್ತದೆ. ಇಲ್ಲಿ ಅವರು ಯಾವುದರ ಬಗ್ಗೆ ಹೇಳುತ್ತಿದ್ದಾರೆ, ಎರಡೂ ಅಂಕೆಸಂಖ್ಯೆಗಳು ಅದೇ ಅಂಶಗಳಾ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ. ಅದೇನೇ ಇರಲಿ, ರಾಜ್ಯಕ್ಕೆ ಬರುವ ಹಣ ಕೇಂದ್ರ ಸರಕಾರದ ಅಥವಾ ಅಲ್ಲಿನ ಆಳುವ ಪಕ್ಷ/ರಂಗದ ಮೆಹರಬಾನಿಯೂ ಅಲ್ಲ. ಭಿಕ್ಷೆಯೂ ಅಲ್ಲ. ಅದು ರಾಜ್ಯದ ಜನತೆಯ ಹಕ್ಕು. ತೆರಿಗೆ ಮತ್ತು ಕರಗಳ ಭಾಗವಂತೂ ರಾಜ್ಯದ ಜನತೆಯಿಂದ ಸಂಗ್ರಹಿಸಿದ ಹಣದ ಭಾಗವೇ. ಅಲ್ಲದೆ ಯುಪಿಎ ಮತ್ತು ಬಿಜೆಪಿ ಸರಕಾರದ ಅವಧಿಗಳಲ್ಲಿ ನೀತಿ ಆಯೋಗ ಮತ್ತು ಜಿ.ಎಸ್.ಟಿ. ಜಾರಿಯೊಂದಿಗೆ ಸಾಕಷ್ಟು ಬದಲಾವಣೆಗಳೂ ಆಗಿವೆ. ಆದ್ದರಿಂದ ಈ ಎರಡು ಅವಧಿಗಳನ್ನು ವಸ್ತುನಿಷ್ಟವಾಗಿ ಹೋಲಿಸುವುದು ಕಷ್ಟ. ರಾಜ್ಯ ಸರಕಾರ ಸ್ಪಷ್ಟ ಪಡಿಸಿದಂತೆ, ಹದಿನಾಲ್ಕನೇ ಹಣಕಾಸು ಆಯೋಗದ ಮುನ್ಸೂಚನೆಯಂತೆ 2015–16, 2016–17 ಹಾಗೂ 2017–18 ರ ಮೂರು ವರ್ಷಗಳಲ್ಲಿ ರಾಜ್ಯಕ್ಕೆ 95,200 ಕೋಟಿ ರೂ. ಬರಬೇಕಿದೆ. ಆದರೆ, ವಾಸ್ತವವಾಗಿ ರಾಜ್ಯಕ್ಕೆ ಬಂದದ್ದು 84,500 ಕೋಟಿ ರೂ. ಮಾತ್ರ. ರಾಜ್ಯಕ್ಕೆ ಬರಬೇಕಾದ ಮೊತ್ತದಲ್ಲಿ 10,700 ಕೋಟಿ ರೂ ಕೊರತೆ ಇದೆ. ಇಡೀ ದೇಶದಲ್ಲಿಯೇ ತೆರಿಗೆ ಸಂಗ್ರಹಣೆಯಲ್ಲಿ ಶೇಕಡಾ 9.47 ರಷ್ಟು ಸಾಧನೆ ಮಾಡಿ ಮೂರನೇ ಸ್ಥಾನದಲ್ಲಿರುವ ಕರ್ನಾಟಕಕ್ಕೆ ಕೇಂದ್ರದಿಂದ ದೊರೆಯುತ್ತಿರುವ ತೆರಿಗೆಯ ಪಾಲು ಶೇಕಡಾ 4.65 ಮಾತ್ರ.

ಇದಲ್ಲದೆ, ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ (ರೇಗಾ, ಐ.ಸಿ.ಡಿ.ಎಸ್., ಇತ್ಯಾದಿ) ಒದಗಿಸುತ್ತಿರುವ ಅನುದಾನದ ಪ್ರಮಾಣವನ್ನು ಗಣನೀಯವಾಗಿ ಕಡಿತಗೊಳಿಸಲಾಗಿದೆ. ಸಮಾಜ ಕಲ್ಯಾಣ ಯೋಜನೆಗಳಡಿಯಲ್ಲಿ ವೃದ್ಧಾಶ್ರಮಗಳು, ಭಿಕ್ಷುಕರ ಪುನರ್ವಸತಿ ಕೇಂದ್ರಗಳು, ನಿರಾಶ್ರಿತ ಕೇಂದ್ರಗಳು, ಪರಿಶಿಷ್ಟ ಜಾತಿ/ಪಂಗಡ ಮತ್ತು ಹಿಂದುಳಿದ ವಿದ್ಯಾರ್ಥಿನಿಲಯಗಳಿಗಾಗಿ ಪ್ರತಿವರ್ಷ ರಾಜ್ಯಕ್ಕೆ ಕೊಡಬೇಕಿದ್ದ 65,714 ಟನ್ ಆಹಾರಧಾನ್ಯವನ್ನು ನಾಲ್ಕು ತಿಂಗಳಿಂದ ನಿಲ್ಲಿಸಿದೆ. ಸತತ ಬರ ಎದುರಿಸಿದ ಕರ್ನಾಟಕಕ್ಕೆ ಬರ ಪರಿಹಾರದಲ್ಲಿ ಸಹ ತಾರತಮ್ಯ ತೋರಿಸಿದೆ. ಈ ಅಂಶಗಳನ್ನು ಗಮನಿಸಿದರೆ ಕೇಂದ್ರದ ಬಿಜೆಪಿ ಸರಕಾರ ರಾಜ್ಯಕ್ಕೆ ವಿಶೇಷ "ಕೊಡುಗೆ" ನೀಡಿಲ್ಲ. ಮಾತ್ರವಲ್ಲ, ಇತರ ಬಿಜೆಪಿಯೇತರ ರಾಜ್ಯ (ಕೇರಳ, ತ್ರಿಪುರಾ ಇತ್ಯಾದಿ) ಸರಕಾರಗಳ ವಿರುದ್ಧ ತೋರಿಸಿದಂತೆ ಮಲತಾಯಿ ಧೋರಣೆ ತೋರಿಸಿದೆ ಎಂಬುದು ಸ್ಪಷ್ಟ. ಇವೆಲ್ಲದರಿಂದ ಈ ಬಗ್ಗೆ ಪ್ರಧಾನಿಯದ್ದು ಅಸ್ಪಷ್ಟ ಬೀಸು ಹೇಳಿಕೆಗಳು, ಅರೆ-ಸುಳ್ಳು, ಸುಳ್ಳುಗಳ ಮಿಶ್ರಣವೆಂಬುದು ಸ್ಪಷ್ಟ. ಇಲ್ಲೂ ಕಾಂಗ್ರೆಸ್ ಪ್ರಧಾನಿಯವರ ಹೇಳಿಕೆಯನ್ನು ಬಯಲು ಮಾಡಲು ಪ್ರಯತ್ನಿಸಿದ್ದರೂ, ಬಿಜೆಪಿ ಅಧಿಕಾರಕ್ಕೆ ಬಂದಂದಿನಿಂದ ಒಕ್ಕೂಟ ವ್ಯವಸ್ಥೆಯ ಹಾಗೂ ರಾಜ್ಯಗಳ ಆರ್ಥಿಕ ಸ್ವಾಯತ್ತತೆಗಳ ಮೇಲೆ ಮಾಡಿರುವ ದಾಳಿಗೆ ಮಾಡಬೇಕಿದ್ದಷ್ಟು ನೀತಿಯುತ ಪ್ರತಿರೋಧ ಒಡ್ಡಿಲ್ಲ. ಈಗಲೂ ಒಡ್ಡುತ್ತಿಲ್ಲ. ಏಕೆಂದರೆ ಒಕ್ಕೂಟ ವ್ಯವಸ್ಥೆಯ ಹಾಗೂ ರಾಜ್ಯಗಳ ಆರ್ಥಿಕ ಸ್ವಾಯತ್ತತೆಗಳ ಮೇಲೆ ದಾಳಿ ಕಾಂಗ್ರೆಸ್ ಆಡಳಿತಗಳ ನೀತಿಯೂ ಆಗಿತ್ತು. ಕಾಂಗ್ರೆಸ್ಸೇತರ ಸರಕಾರಗಳ ವಿರುದ್ಧ ಮಲತಾಯಿ ಧೋರಣೆ ಸಹ ಕಾಂಗ್ರೆಸ್ 'ಪರಂಪರೆ'ಯ ಭಾಗವೇ.

ಮೋದಿ ಮಾಡಿದ ಮತ್ತೊಂದು ಆರೋಪ "ಕಾನೂನು, ಸುವ್ಯವಸ್ಥೆ ಹದಗೆಟ್ಟಿದೆ. ಬಿಜೆಪಿ ಕಾರ್ಯಕರ್ತರ ಹತ್ಯೆಗಳು ಎಗ್ಗಿಲ್ಲದೆ ನಡೆಯುತ್ತಿದೆ. ಅಪರಾಧಗಳಲ್ಲಿ ರಾಜ್ಯ ಮುಂದಿದೆ." ಅಂತ. ಈ ಆಪಾದನೆಗೂ ಯಾವುದೇ ಸಾಕ್ಷ್ಯ, ಪುರಾವೆ ಒದಗಿಸುವ ಅಗತ್ಯವನ್ನು ಮೋದಿ ಕಾಣಲಿಲ್ಲ. ಕಾಂಗ್ರೆಸ್ ಪ್ರತಿಕ್ರಿಯಿಸಿದಂತೆ ಬಿಜೆಪಿ ಸರಕಾರ ಇರುವ ರಾಜ್ಯಗಳಿಗೆ ಹೋಲಿಕೆಯಲ್ಲಿ ಮೋದಿ ಅವರ ಹೇಳಿಕೆ ಹಸಿಸುಳ್ಳು ಎಂಬುದರ ಬಗ್ಗೆ ಅನುಮಾನವಿಲ್ಲ. ಎನ್.ಸಿ.ಆರ್.ಬಿ. ದ ಅಂಕಿ-ಅಂಶಗಳಂತೆ, ದೇಶದಲ್ಲಿ ಅತಿ ಹೆಚ್ಚು ಅಪರಾಧಗಳು ಅಂದರೆ ಶೇಕಡಾ 11.5 ರಷ್ಟು ದಾಖಲಾಗಿರುವುದು ಉತ್ತರ ಪ್ರದೇಶದಲ್ಲಿ. ನಂತರದ ಸ್ಥಾನ ಮಧ್ಯಪ್ರದೇಶ. ಈ ಎರಡೂ ರಾಜ್ಯಗಳಲ್ಲಿ ಭಾರತೀಯ ಜನತಾ ಪಕ್ಷದ ಸರ್ಕಾರಗಳೇ ಇವೆ. ಬಿಹಾರದಲ್ಲಿರುವ ಸಮ್ಮಿಶ್ರ ಸರ್ಕಾರದಲ್ಲಿ ಕೂಡಾ ಬಿಜೆಪಿ ಪಾಲುದಾರರು. ರಾಜಸ್ಥಾನ, ಮಹಾರಾಷ್ಟ್ರ, ಗುಜರಾತ್ ಮತ್ತು ಹರಿಯಾಣ ರಾಜ್ಯಗಳಲ್ಲೂ ಬಿಜೆಪಿ ಸರ್ಕಾರಗಳಿವೆ. ಇವೆಲ್ಲಕ್ಕಿಂತಲೂ ಕರ್ನಾಟಕದಲ್ಲಿ ಅಪರಾಧ ಪ್ರಮಾಣ ಕಡಿಮೆಯೇ ಇದೆ. ಕರ್ನಾಟಕದಲ್ಲಿ ಬಿಜೆಪಿ ಅಧಿಕಾರದ ಅವಧಿಯಲ್ಲಿ ಅಪರಾಧದ ಪ್ರಮಾಣ ಶೇಕಡಾ 6.7 ರಷ್ಟಿತ್ತು. ಈಗ ಶೇಕಡಾ 5 ಕ್ಕೆ ಇಳಿದಿದೆ, ಎಂದು ಕಾಂಗ್ರೆಸ್ ಪ್ರತಿಕ್ರಿಯಿಸಿದೆ.

ಆದರೆ ಅದೇ ಎನ್.ಸಿ.ಆರ್.ಬಿ. ದ ಅಂಕಿ-ಅಂಶಗಳ ಪ್ರಕಾರ 2017ರಲ್ಲಿ ಕರ್ನಾಟಕ ಕೋಮು ದಂಗೆ/ಪ್ರಕರಣಗಳ ಸಂಖ್ಯೆಯಲ್ಲಿ ಉತ್ತರ ಪ್ರದೇಶದ ನಂತರ ಎರಡನೇ ಸ್ಥಾನದಲ್ಲಿತ್ತು ಎಂಬುದನ್ನು ಮರೆಯುವಂತಿಲ್ಲ. ಇದರಲ್ಲಿ ಪ್ರಧಾನಿ ಅವರ ಪಕ್ಷದ್ದೇ ಪ್ರಧಾನ ಕೊಡುಗೆ ಇದೆ ನಿಜ. ಆದರೆ ಕೋಮು ಶಕ್ತಿಗಳನ್ನು ಕಟು ಕ್ರಮಗಳಿಂದ ಮಟ್ಟ ಹಾಕಿ ಕೋಮು ಪ್ರಕರಣ/ದಂಗೆಗಳನ್ನು ತಡೆಯುವುದರಲ್ಲಿ ಕಾಂಗ್ರೆಸ್ ವಿಫಲವಾಗಿದೆ. ಕಾಂಗ್ರೆಸ್ ಆಡಳಿತದ ಆರಂಭ ಕಾಲದಲ್ಲಿ ದಕ್ಷಿಣ ಕನ್ನಡಕ್ಕೆ ಸೀಮಿತವಾಗಿದ್ದ ಈ ಸಮಸ್ಯೆ ಇಡೀ ಕರಾವಳಿಗೆ, ಇಡೀ ರಾಜ್ಯಕ್ಕೆ ಹಬ್ಬಿದೆ. ಇದನ್ನು ತಡೆಯುವಲ್ಲಿ ರಾಜಕೀಯವಾಗಿಯೂ, ಆಡಳಿತಾತ್ಮಕವಾಗಿಯೂ ಸೋತಿದೆ, ಎಂಬುದೂ ಅಷ್ಟೇ ನಿಜ. ಮಾತ್ರವಲ್ಲ, ರಾಜಕೀಯ ಲಾಭಕ್ಕಾಗಿ ಕಾಂಗ್ರೆಸ್ ಮುಸ್ಲಿಂ ಮೂಲಭೂತವಾದಿ ಸಂಘಟನೆಗಳನ್ನು ಓಲೈಸುತ್ತಿದೆ ಎಂಬುದು ಸಹ ನಿಜ. ಅದು ಮಾತ್ರವಲ್ಲ, ದಲಿತರು, ಮುಸ್ಲಿಮರು, ಮಹಿಳೆಯರ ಮೇಲೆ ದೌರ್ಜನ್ಯಗಳು ಕೊಲೆಗಳು ಹಾಗೂ ಅಪರಾಧ ಪ್ರಕರಣಗಳೂ ಹೆಚ್ಚಾಗುತ್ತಿದ್ದು ಸಾಮಾನ್ಯ ನಾಗರಿಕನ ದೃಷ್ಟಿಯಲ್ಲಿ ಕಾನೂನು, ಸುವ್ಯವಸ್ಥೆ ಹದಗೆಟ್ಟಿದೆ ಎಂಬುದು ನಿಜ.

ಹೀಗೆ ಪ್ರಧಾನಿಯವರ ಭಾಷಣ ಆಧಾರರಹಿತ ಆರೋಪಗಳ, ಉತ್ಪ್ರೇಕ್ಷೆಗಳು, ಅರೆಸುಳ್ಳು ಹಸಿ ಸುಳ್ಳುಗಳ ಕಾಕ್-ಟೈಲ್ ಆಗಿತ್ತು. ಬಿಜೆಪಿಯ ಚುನಾವಣಾ ಪ್ರಚಾರವೂ ಇದೇ ದಾಟಿಯಲ್ಲಿ ಮುಂದುವರೆಯಲಿದೆ. ಕಳೆದ 70 ವರ್ಷಗಳಲ್ಲಿ ಕಾಂಗ್ರೆಸ್ ಅನುಸರಿಸಿದ ಬೂರ್ಜ್ವಾ-ಭೂಮಾಲಕ ವರ್ಗಗಳ ಪರ ನೀತಿಗಳು ಹಾಗೂ, ಕಳೆದ 25 ವರ್ಷಗಳಿಂದ ಅನುಸರಿಸಿದ ನವ-ಉದಾರವಾದಿ-ಕೋಮು-ಧ್ರುವೀಕರಣದ ನೀತಿಗಳೇ ಇಂದಿನ ಹೆಚ್ಚಿನ ಸಮಸ್ಯೆಗಳ ಮೂಲ. ಬಿಜೆಪಿಯ ಕೇಂದ್ರ ಮತ್ತು ರಾಜ್ಯ ಸರಕಾರಗಳು ತೀವ್ರವಾಗಿ ಇದೇ ನೀತಿಗಳನ್ನು ಮುಂದುವರೆಸುತ್ತಿವೆ. ಈ ನೀತಿಗಳನ್ನು ಧೃಢವಾಗಿ ವಿರೋಧಿಸುತ್ತಾ, ಕಾಂಗ್ರೆಸಿನ ಈ ಪಾರಂಪರಿಕ ನೀತಿಗಳನ್ನು ಬಿಟ್ಟು ಕೊಟ್ಟು ಬದಲಿ ನೀತಿಗಳನ್ನು ಜನತೆಯ ಮುಂದೆ ಇಡದಿದ್ದರೆ, ಇಂತಹ ಆಕ್ರಾಮಕ ಪ್ರಚಾರವನ್ನು ಎದುರಿಸಲು ಸಾಧ್ಯವಿಲ್ಲ, ಎಂಬುದನ್ನು ಕಾಂಗ್ರೆಸ್ ಮನಗಾಣಬೇಕು.

6ನೇ ವೇತನ ಆಯೋಗದ ಶಿಫಾರಸ್ಸಿನ ವಿರುದ್ಧ ರಾಜ್ಯ ನೌಕರರ ಪ್ರತಿಭಟನೆ

ಬೆಂಗಳೂರಿನ ಬಹುಮಹಡಿ ಕಟ್ಟಡದ ಮುಂಭಾಗದಲ್ಲಿ 6ನೇ ವೇತನ ಆಯೋಗವು ನೀಡಿರುವ ವರದಿಯನ್ನು ವಿರೋಧಿಸಿ, ಫೆಬ್ರುವರಿ 1ರಂದು ಪ್ರತಿಭಟನೆಯು ನಡೆಯಿತು. ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಅಧ್ಯಕ್ಷರಾದ ಮಹದೇವಯ್ಯ ಮಠಪತಿಯವರ ನೇತೃತ್ವದಲ್ಲಿ ರಚಿತವಾಗಿದ್ದ ಸುಮಾರು 50 ವೃಂದ/ಸಂಘಗಳ 'ಜಂಟಿ ಕ್ರಿಯಾ ಸಮಿತಿ"ಯು ಈ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದು, ಆಯೋಗದ ಅಧ್ಯಕ್ಷರಾದ ಶ್ರೀ ಎಂ.ಆರ್. ಶ್ರೀನಿವಾಸ ಮೂರ್ತಿಯವರ ಪ್ರತಿಕೃತಿ ಮತ್ತು ಆಯೋಗದ ವರದಿಯನ್ನು ದಹನ ಮಾಡುವ ಮುಖಾಂತರ ನೌಕರರು ಆಕ್ರೋಶವನ್ನು ವ್ಯಕ್ತಪಡಿಸಿದರು. ಸಚಿವಾಲಯ ನೌಕರರ ಸಂಘ, ರಾಜ್ಯ ಎನ್.ಪಿ.ಎಸ್ ನೌಕರರ ಸಂಘ. ವಿಧಾ ಸಭೆ/ಪರಿಷತ್ ಸಚಿವಾಲಯ ನೌಕರರ ಸಂಘ, ಕೆ.ಎ.ಟಿ ನೌಕರರ ಸಂಘ. ಖಜಾನೆ ಇಲಾಖೆ ನೌಕರರ ಸಂಘ. ರಾಜ್ಯ ಅಂಗವಿಲಕ ನೌಕರರ ಸಂಘ ಮುಂತಾದ 50 ಸಂಘಟನೆಗಳು ಭಾಗವಹಿಸಿದ್ದವು

ಕರ್ನಾಟಕ ರಾಜ್ಯ 6ನೇ ವೇತನ ಆಯೋಗವು ದಿನಾಂಕ 31.01.2018ರಂದು ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿದ್ದು, ರಾಜ್ಯದಲ್ಲಿನ 5.20 ಲಕ್ಷ ನೌಕರರಿಗೆ ವೇತನದಲ್ಲಿ 30% ರಷ್ಟು ಏರಿಕೆಯನ್ನು ಶಿಫಾರಸ್ಸು ಮಾಡಲಾಗಿದೆಯೆಂದು ತಿಳಿಸಿದೆ. ರಾಜ್ಯ ಸರ್ಕಾರವು 6ನೇ ವೇತನ ಆಯೋಗವನ್ನು ರಚಿಸಿದಾಗ ನೌಕರರು ಅಪಾರ ನಿರೀಕ್ಷೆ ಹೊಂದಿದ್ದು, ಸರ್ಕಾರದ ತೀರ್ಮಾನವನ್ನು ಒಕ್ಕೂಟವು ಸೇರಿದಂತೆ ಎಲ್ಲ ನೌಕರ ಸಂಘಟನೆಗಳು ಸ್ವಾಗತಿಸಿದ್ದವು. ಆದರೆ, ಪ್ರಸ್ತುತ ಸಲ್ಲಿಕೆಯಾಗಿರುವ ರಾಜ್ಯ 6ನೇ ವೇತನ ಆಯೋಗದ ವರದಿಯು ವಾಸ್ತವಿಕತೆಯಿಂದ ಬಹಳ ದೂರದಲ್ಲಿದ್ದು, ನೌಕರರ ಸಂಕಷ್ಟಗಳನ್ನು ಸ್ಪಂದಿಸುವ ಬದಲು ಕೊಳ್ಳಿ ಇಟ್ಟಿದೆ. ಎಂದು ರಾಜ್ಯ ಸರ್ಕಾರಿ ನೌಕರರ 'ಜಂಟಿ ಕ್ರಿಯಾ ಸಮಿತಿ' ಟೀಕಿಸಿದೆ.



6ನೇ ವೇತನ ಆಯೋಗದ ನೌಕರ-ವಿರೋಧಿ ಶಿಫಾರಸ್ಸುಗಳನ್ನು ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಜಂಟಿ ಕ್ರಿಯಾ ಸಮಿತಿಯು ತೀವ್ರವಾಗಿ ಖಂಡಿಸಿದ್ದು, ಕೇಂದ್ರ ಸರ್ಕಾರಿ ನೌಕರರಿಗೆ ಸರಿಸಮಾನವಾದ ವೇತನ ಸೌಲಭ್ಯ ನೀಡುವಂತೆ ಆಗ್ರಹಿಸಿದೆ. ಕ್ರಿಯಾ ಸಮಿತಿ ಶಿಫಾರಸುಗಳಲ್ಲಿ ಹಲವು ಗಂಭೀರ ನ್ಯೂನತೆಗಳನ್ನು ಎತ್ತಿ ತೋರಿಸಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರ ನಡುವಿನ ವ್ಯತ್ಯಾಸ:

ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರ ನಡುವಿನ ವೇತನದ ವ್ಯತ್ಯಾಸವು 67%ರಷ್ಟಿದ್ದು, ಪ್ರಸ್ತುತ ಆಯೋಗವು ಮಾಡಿರುವ ಕನಿಷ್ಠ ಶಿಫಾರಸ್ಸಿನಿಂದ ಈ ವೇತನ ವ್ಯತ್ಯಾಸ/ ಅಂತರ ಇನ್ನಷ್ಟು ದೊಡ್ಡದಾಗುತ್ತಾ ಹೋಗುತ್ತದೆ. ಅಲ್ಲದೇ, ಮನೆ ಬಾಡಿಗೆ ಭತ್ಯೆಯಲ್ಲಿ ಶೇ. 6ರಷ್ಟು ಕಡಿತಗೊಳಿಸಿರುವುದರಿಂದ ವಾಸ್ತವ ಏರಿಕೆಯು 30% ಬದಲಿಗೆ ಕೇವಲ 24% ಮಾತ್ರ ಆಗಿದೆ.

ಮೂಲ ವೇತನದಲ್ಲಿ ಅನ್ಯಾಯ:

ಕೇಂದ್ರ ಸರ್ಕಾರಿ ನೌಕರರ ಕನಿಷ್ಠ ವೇತನ ರೂ. 18,000/- ಇದ್ದರೆ, ಗರಿಷ್ಠ ವೇತನ ರೂ.2,50,000 ಆಗಿದೆ ಇದರೊಂದಿಗೆ ಕನಿಷ್ಠ 10% ರಷ್ಟು ತುಟ್ಟಿಭತ್ಯೆಯನ್ನು ನೀಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಒಕ್ಕೂಟವು ಕನಿಷ್ಠ ವೇತನವನ್ನು ರೂ. 21,000/-ಕ್ಕೆ ನಿಗದಿಗೊಳಿಸಬೇಕೆಂದು ಆಗ್ರಹಿಸಿತ್ತು. ಆದರೆ, ಪ್ರಸ್ತುತ ವರದಿಯು ನೀಡಿರುವ ಪ್ರಕಾರ, ರಾಜ್ಯ ನೌಕರರ ಕನಿಷ್ಠ ವೇತನ 17,000/- ಮತ್ತು ಗರಿಷ್ಠ ವೇತನ 1,50,600/- ಆಗಿದೆ. ಇದರೊಂದಿಗೆ ಪ್ರಸ್ತುತ ಇದ್ದ 45.25ರ ತುಟ್ಟಿಭತ್ಯೆಯನ್ನು ವಿಲೀನಗೊಳಿಸಿ ವೇತನ ಪರಿಷ್ಕರಣೆ ಮಾಡಿದೆ.

ಮನೆ ಬಾಡಿಗೆ ಭತ್ಯೆ:

ಪ್ರಸ್ತುತ ಇರುವ 30%, 20%, ಮತ್ತು 10% ಮನೆ ಬಾಡಿಗೆ ಭತ್ಯೆಯನ್ನು 24%, 16% ಮತ್ತು 8%ರಷ್ಟಕ್ಕೆ ಇಳಿಸಲಾಗಿದ್ದು, ಇದರಿಂದ ನೌಕರರಿಗೆ ನೀಡುತ್ತಿರುವ ಸೌಲಭ್ಯವನ್ನು ಕಡಿತಗೊಳಿಸಲಾಗಿದೆ.

ವೈದ್ಯಕೀಯ ಸೇವೆ

ಆಂಧ್ರ ಮತ್ತು ತೆಲಂಗಾಣ ರಾಜ್ಯಗಳಲ್ಲಿಯಂತೆ, ನಗದು-ರಹಿತ ವೈದ್ಯಕೀಯ ಸೇವೆ ಒದಗಿಸಲು ಯೋಜನೆ ರೂಪಿಸುವಂತೆ ಒತ್ತಾಯಿಸಲಾಗಿತ್ತು. ಆದರೆ, ಇದನ್ನು ಉಪೇಕ್ಷಿಸಲಾಗಿದೆ.

ಕರ್ನಾಟಕದಲ್ಲಿ ಆಯವ್ಯಯದಲ್ಲಿ ವೇತನದ ಪಾಲು ಅತಿ ಕಡಿಮೆ

ಆರ್.ಬಿ.ಐ ಅಂಕಿ ಅಂಶದ ಪ್ರಕಾರ, ಒಟ್ಟಾರೆ ಆಯವ್ಯಯದಲ್ಲಿ ವೇತನದ ಪಾಲು ಕರ್ನಾಟಕದಲ್ಲಿ ಶೇ. 18.18 ಇದ್ದರೆ, ಆಂಧ್ರ ಶೇ. 31,94, ಕೇರಳ ಶೇ. 33.2, ಮಹಾರಾಷ್ಟ್ರ ಶೇ. 35.51 ಮತ್ತು ತಮಿಳುನಾಡು ಶೇ. 30.73 ಇದೆ. ಪ್ರಸ್ತುತ ವೇತನ ಪರಿಷ್ಕರಣೆಯಿಂದಾಗಿ ಅಂದಾಜಿಸಿರುವ ರೂ. 10,508 ಕೋಟಿ ಹೆಚ್ಚುವರಿ ಮೊತ್ತವನ್ನು ಪರಿಗಣಿಸಿದರೆ ರಾಜ್ಯದ ಒಟ್ಟಾರೆ ಆಯವ್ಯಯದಲ್ಲಿ ವೇತನದ ಒಟ್ಟಾರೆ ಪಾಲು ಕೇವಲ 19% ಮಾತ್ರ ಆಗುತ್ತದೆ.

ನೂತನ ಪಿಂಚಣಿ ಯೋಜನೆ:

ಆಯೋಗವು ನೂತನ ಪಿಂಚಣಿ ಯೋಜನೆಯ ನೌಕರರಿಗೆ ಮರಣ ಮತ್ತು ನಿವೃತ್ತಿ ಉಪದಾನವನ್ನು ವಂತಿಗೆ ರೂಪದಲ್ಲಿ ಪಾವತಿಸಲು ಶಿಫಾರಸ್ಸು ಮಾಡಲಾಗಿದೆ. ನೂತನ ಪಿಂಚಣಿ ಯೋಜನೆಯನ್ನು ರದ್ದುಪಡಿಸಿ, ಹಿಂದೆ ಇದ್ದ ನಿಶ್ಚಿತ ಪಿಂಚಣಿ ಯೋಜನೆಯನ್ನು ಮರುಸ್ಥಾಪಿಸುವುದು ಒಕ್ಕೂಟದ ಬೇಡಿಕೆಯಾಗಿತ್ತು.

6ನೇ ವೇತನ ಆಯೋಗದ ಪ್ರಕಾರ ರಾಜ್ಯದಲ್ಲಿ 7.73 ಲಕ್ಷ ಮಂಜೂರಾದ ಹುದ್ದೆಗಳಿದ್ದು, ಈ ಪೈಕಿ 5.22 ಲಕ್ಷ ನೌಕರರು ಸೇವೆಯಲ್ಲಿದ್ದಾರೆ. ಅಂದರೆ ಶೇ. 33 ರಷ್ಟು ಹುದ್ದೆಗಳು ಖಾಲಿಯಿದ್ದು, ಈ ಹುದ್ದೆಗಳನ್ನು ತುಂಬುವ ಕುರಿತು ಆಯೋಗವು ಚಕಾರ ಎತ್ತಿಲ್ಲ. ಅದರ ಬದಲಿಗೆ, ಆಡಳಿತ ಸುಧಾರಣೆ ಹೆಸರಿನಲ್ಲಿ ಇನ್ನಷ್ಟು ಹುದ್ದೆಗಳನ್ನು ಕಡಿತಗೊಳಿಸುವ ಸಲುವಾಗಿ ಇನ್ನೂ 3 ತಿಂಗಳು ಹೆಚ್ಚಿನ ಕಾಲಾವಕಾಶ ಪಡೆದಿದೆ. 6ನೇ ವೇತನ ಆಯೋಗವು ರಾಜ್ಯ ಸರ್ಕಾರಿ ನೌಕರರ ಪ್ರಸ್ತುತ ಬೇಡಿಕೆಗಳ ಬಗ್ಗೆ ಪ್ರಾಮಾಣಿಕವಾಗಿ ಪರಿಶೀಲಿಸಿ ಶಿಫಾರಸ್ಸುಗಳನ್ನು ಮಾಡದೇ, ಒಕ್ಕೂಟವು ಸೇರಿದಂತೆ ಇತರೆ ವೃಂದ ನೌಕರ ಸಂಘಗಳು ನೀಡಿದ್ದ ಮನವಿಯನ್ನು ಕಿಂಚಿತ್ತೂ ಪರಿಗಣಿಸದೇ, ರಾಜ್ಯ ಸರ್ಕಾರದ ಆಯವ್ಯಯ ಹಂಚಿಕೆಯನ್ನು ಮಾತ್ರವೇ ಪರಿಗಣಿಸಿ ಶಿಫಾರಸ್ಸು ಮಾಡಿರುವುದು ದುರದೃಷ್ಟಕರ ಎಂದು ಜಂಟಿ ಕ್ರಿಯಾ ಸಮಿತಿ ಪ್ರತಿಭಟನೆಯ ಮೊದಲು ಬಿಡುಗಡೆ ಮಾಡಿದ ಪತ್ರಿಕಾ ಹೇಳಿಕೆಯೊಂದರಲ್ಲಿ ಟೀಕಿಸಿದೆ.

ಪಕ್ಷದಿಂದ ಬಿ.ಎಂ.ಭಟ್ ಉಚ್ಚಾಟನೆ

ಪಕ್ಷದ ಕಳೆದ ಸಾಲಿನ ರಾಜ್ಯ ಸಮಿತಿ ಸದಸ್ಯರೂ, ದ.ಕ.ಜಿಲ್ಲಾ ಸಮಿತಿ ಸದಸ್ಯರೂ, ಬೆಳ್ತಂಗಡಿ ತಾಲೂಕು ಸಮಿತಿ ಕಾರ್ಯದರ್ಶಿಗಳೂ ಆಗಿದ್ದ ಬಿ.ಎಂ.ಭಟ್ ಅವರ ಪಕ್ಷ ವಿರೋಧಿ ಚಟುವಟಿಕೆಗಳಿಗಾಗಿ, ಅವರನ್ನು ದಿ:13-01-2018 ರಂದು ನಡೆದ ಪಕ್ಷದ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿಯು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟನೆ ಮಾಡಿರುತ್ತದೆ.

ದಿ:03-02-2018 ರಂದು ನಡೆದ ಪಕ್ಷದ ಕರ್ನಾಟಕ ರಾಜ್ಯ ಸಮಿತಿ ಸಭೆಯು ಬಿ.ಎಂ.ಭಟ್ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಿದ ದ.ಕ.ಜಿಲ್ಲಾ ಸಮಿತಿಯ ಶಿಸ್ತುಕ್ರಮವನ್ನು ಅನುಮೋದಿಸಿದೆ.

'ದಕ್ಷಿಣ ಕನ್ನಡದ ಮೇಲೆ ವಿಶೇಷವಾಗಿ ಕಣ್ಣಿಡಿ'

'ದಕ್ಷಿಣ ಕನ್ನಡದ ಮೇಲೆ ವಿಶೇಷವಾಗಿ ಕಣ್ಣಿಡಿ' ಎಂದು ಹಿರಿಯ ಹೋರಾಟಗಾರರಾದ ಎಚ್.ಎಸ್.ದೊರೆಸ್ವಾಮಿ ಹೇಳಿರುವುದು 'ಗೌರಿ ಕೊಲೆಗಾರರನ್ನು ದಕ್ಷಿಣ ಕನ್ನಡದಲ್ಲಿ ಹುಡುಕಿ' ಎಂದು ಹೇಳಿದಂತೆ ಗೆಳೆಯ ಜೋಗಿ ಅವರಿಗೆ ಕೇಳಿದ್ದು ಹೇಗೆ ಎನ್ನುವ ಕುತೂಹಲ ನನಗೆ. ಇದರಿಂದ ಜೋಗಿ ಅವರ ಮನಸ್ಸಿಗೆ ನೋವಾಗಿದೆಯಂತೆ. ಆಡಿದ ಮಾತು ಕೇಳುವ ಕಿವಿ ಸೇರುವಾಗ ಅದರ ಶಬ್ಧ, ಅರ್ಥ ಬದಲಾಗುತ್ತಿದೆಯಲ್ಲಾ, ಇದೇ ಇಂದಿನ ದಕ್ಷಿಣ ಕನ್ನಡದ ಸಮಸ್ಯೆ ಇದನ್ನು ಗಮನಿಸಿಯೇ ಆ ಹಿರಿಯ ಜೀವ 'ಕಣ್ಣಿಡಿ' ಎಂದು ಹೇಳಿರಬೇಕೇನೋ?

ಕಣ್ಣಿಡಲು ಹೇಳಿದ ದೊರೆಸ್ವಾಮಿ ಮಾತಿನಿಂದ ವೇದಿಕೆಯಲ್ಲಿ ಜತೆಯಲ್ಲಿಯೇ ಇದ್ದ ನನಗೂ ನೋವಾಗಿತ್ತು, ಒಂದು ಕ್ಷಣ ಮುಖಮುಚ್ಚಿಕೊಳ್ಳಬೇಕೆನಿಸಿದ್ದೂ ನಿಜ, ಆದರೆ ನೋವಿನ ಕಾರಣ ಬೇರೆ. ದಕ್ಷಿಣ ಕನ್ನಡದ ಮೇಲೆ ಸದಾ ಹೊರಗಿನವರು ಕಣ್ಣಿಡುತ್ತಿದ್ದರು, ಇದಕ್ಕೂ ಕಾರಣ ಬೇರೆ. ಅಂಡರ್ ವರ್ಲ್ಡ್ ನಿಂದ ಮಿಸ್ ವರ್ಲ್ಡ್ ವರೆಗಿನ ಖ್ಯಾತಿ -ಕುಖ್ಯಾತಿಗಳೇನು ಕಡಿಮೆಯೇ?

ನಾನು ಒಂದಷ್ಟು ವರ್ಷ ಕರ್ನಾಟಕದಿಂದ ಹೊರಗಿದ್ದೆ, ಪ್ರಾರಂಭದಲ್ಲಿ ಬೇರೆ ರಾಜ್ಯದ ಜನ ಸಿಕ್ಕಿ ನನ್ನೂರು ತಿಳಿದೊಡನೆ 'ದ.ಕ.ಮಂದಿ ಬುದ್ದಿವಂತರು, ಉದ್ಯಮಶೀಲರು, ಸಾಹಸಿಗಳು..ಎಂದೆಲ್ಲಾ ಬಣ್ಣಿಸುತ್ತಿದ್ದಾಗ ನಾನು ಬೀಗುತ್ತಿದ್ದೆ. ಎಲ್ಲರಿಗೂ ನಮ್ಮ ಮೇಲೆ ಕಣ್ಣು ಎನ್ನುವುದೇ ಖುಷಿ, ಹಾಗಿತ್ತು ಕಣ್ಣು ಕುಕ್ಕುವಂತಹ ಸಂಸ್ಕೃತಿ. ಇದಕ್ಕೆ ಯಾರ ದೃಷ್ಟಿ ಬಿತ್ತೋ ಏನೋ?

ಆದರೆ ಇತ್ತೀಚಿನ ವರ್ಷಗಳಲ್ಲಿ ಬೇರೆ ರಾಜ್ಯದ ಜನರಿಗೆ ನನ್ನೂರು ಮಂಗಳೂರು ಎಂದು ತಿಳಿದೊಡನೆ ಅವರು ಹೇಳುವುದು, ಕೇಳುವುದೇ ಬೇರೆ

'ನಿಮ್ಮಲ್ಲಿ ನೂರಕ್ಕೆ ನೂರು ವಿದ್ಯಾವಂತರಂತೆ, ಹೀಗಿದ್ದರೂ ಬೇರೆಬೇರೆ ಧರ್ಮದ ಹುಡುಗ-ಹುಡುಗಿಯರು ಪರಸ್ಪರ ಮಾತನಾಡಬಾರದಂತೆ, ಹುಡುಗಿಯರು ಪಬ್-ಹೊಟೇಲ್ ಗೆ ಹೋದರೆ ಹೊರಗೆಳೆದು ತಂದು ಹೊಡೆಯುತ್ತಾರಂತೆ, ಇಂಟರ್ ರಿಲೀಜನ್ ಮ್ಯಾರೇಜ್ ನಡೆದರೆ ಗಲಾಟೆ ಅಂತೆ,. ಕ್ಷುಲಕ ಕಾರಣಕ್ಕೆ ಧರ್ಮದ ಹೆಸರು ಹೇಳಿಕೊಂಡು ಹೊಡೆದು ಸಾಯಿಸ್ತಾರಂತೆ. ಯಾವ ಉಡುಪು ತೊಡಬೇಕು, ಏನು ತಿನ್ನಬೇಕು ಎಂದು ಫರ್ಮಾನು ಹೊರಡಿಸ್ತಾರಂತೆ.. ಸಿಕ್ಕಾಪಟ್ಟೆ ಡ್ರಗ್ಸ್ ಅಂತೆ...' ಎಂದು ಕೊನೆಯಿಲ್ಲದ ಪ್ರಶ್ನೆಗಳ ಸರಮಾಲೆಯನ್ನು ನನ್ನ ಕುತ್ತಿಗೆಗೆ ನೇತುಹಾಕುತ್ತಾರೆ.

ಈ ಪ್ರಶ್ನೆಗಳಿಗೆ ಉತ್ತರಿಸಲಾಗದೆ ಅವಮಾನದಿಂದ ನಾನು ತಲೆತಗ್ಗಿಸಿ ಅವರಿಂದ ತಪ್ಪಿಸಿಕೊಂಡು ಹೊರಟುಹೋಗುತ್ತೇನೆ. ಜೋಗಿಯವರಂತೆ #iamdakshinakannadiga ಎಂದು ಹೇಳಲು ಮುಜುಗರವಾಗುತ್ತದೆ, ಧೈರ್ಯವೂ ಬರುವುದಿಲ್ಲ.

ದೀಪಕ್ ರಾವ್, ಬಶೀರ್ ಅವರ ಕೊಲೆಗಡುಕರ, ನಡುರಸ್ತೆಯಲ್ಲಿ ಹೆಣ್ಣುಮಕ್ಕಳ ಮೈ ಮೇಲೆ ಕೈ ಹಾಕುವ ಪುಂಡರ, ಹಿಂದು-ಮುಸ್ಲಿಮರ ನಡುವೆ ದ್ವೇಷದ ಕಿಚ್ಚು ಹಚ್ಚುತ್ತಲೇ ಇರುವ ಕಲ್ಲಡ್ಕ ಮನಸ್ಸುಗಳ ಜತೆನಿಂತು ನಾನುದಕ್ಷಿಣ ಕನ್ನಡಿಗ ಎಂದು ಹೆಮ್ಮೆಯಿಂದ ಹೇಗೆ ಹೇಳಲು ಸಾಧ್ಯ?

ಇದು ನಾನು ಬೆಳೆದ, ಕಂಡ ಊರಲ್ಲ.

ಹೆಮ್ಮೆ ಪಡುವ ಕಾಲವೊಂದಿತ್ತು. ನಾವು ಜಾತಿ,ಧರ್ಮ, ಲಿಂಗದ ಭೇದವಿಲ್ಲದೆ ಎಲ್ಲರೂ ಒಟ್ಟಿಗೆ ಹೋಗಿ ಐಸ್ ಕ್ರೀಮ್ ಪಾರ್ಲರ್ ನಲ್ಲಿ ಗಡ್ ಬಡ್ ತಿನ್ನುತ್ತಿದ್ದೆವು, ಮುಸ್ಲಿಮ್ ವಿದ್ಯಾರ್ಥಿನಿಯರ ತಲೆಮೇಲೆ ಬುರ್ಖಾನು ಇರಲಿಲ್ಲ, ಹಿಂದು ವಿದ್ಯಾರ್ಥಿಗಳ ಹಣೆ ಮೇಲೆ ಕೇಸರಿ ನಾಮವೂ ಇರಲಿಲ್ಲ.ಶಿರ್ವ-ಶಂಕರಪುರದ ಕ್ರಿಶ್ಚಿಯನರು ಬೆಳೆದ ಮಲ್ಲಿಗೆಯನ್ನು ಬ್ಯಾರಿಗಳಿಗೆ ಮಾರಾಟ ಮಾಡುತ್ತಿದ್ದರು, ಹಿಂದು ಹೆಣ್ಣುಮಕ್ಕಳು ಬ್ಯಾರಿಗಳಿಂದ ಖರೀದಿಸಿ ಮುಡಿಯುತ್ತಿದ್ದರು. ಬಪ್ಪ ಬ್ಯಾರಿ ದುರ್ಗಾಪರಮೇಶ್ವರಿ ದೇವಿಗೆ ದೇವಸ್ಥಾನ ಕಟ್ಟಿದ್ರು, ಅಲಿ ಎಂಬ ಮುಸ್ಲಿಮ್ ಭೂತವನ್ನು ಹಿಂದುಗಳು ಆರಾಧಿಸುತ್ತಿದ್ದರು. ಕ್ರಿಶ್ಚಿಯನರ 'ಸಾಂತ್ ಮಾರಿ'ಗೆ ಹಿಂದು-ಮುಸ್ಲಿಮರು ಕಿಕ್ಕಿರಿದು ತುಂಬುತ್ತಿದ್ದರು. ಕಂಕನಾಡಿಯ ಕೋಸ್ತರ ಹೊಟೇಲ್ ನ ಬೀಫ್ ಸ್ಟಿಕ್, ಹಂಪನಕಟ್ಟೆಯ ಪಿರೇರಾ ಹೊಟೇಲ್ ನ ಪೋರ್ಕ್ ಎಲ್ಲವೂ ಜಾತಿ-ಧರ್ಮದ ಭೇದ ಇಲ್ಲದೆ ಎಲ್ಲರ ಹೊಟ್ಟೆ ಸೇರುತ್ತಿತ್ತು. ಇಂತಹದ್ದೊಂದು ಬಹುಸಂಸ್ಕೃತಿಯ ಮೇಲೆ ಎಲ್ಲರ ಅಸೂಯೆಯ ಕಣ್ಣಿದ್ದದ್ದು ನಿಜ.

ನಾನು ಮತ್ತು ಜೋಗಿ ನಮ್ಮ ಪ್ರಾರಂಭದ ಕಷ್ಟದ ದಿನಗಳಲ್ಲಿ ಒಂದೇ ರೂಮಿನಲ್ಲಿದ್ದವರು. ಬ್ರಾಹ್ಮಣರಾದ ಜೋಗಿ ಮನಸ್ಸಿಗೆ ನೋವುಂಟುಮಾಡಬಾರದೆಂದು ನಾನು ಊಟಕ್ಕೆ ಟೊಮೇಟೋ ಸಾರು ಮಾಡಿದರೆ, ನನ್ನ ರುಚಿ ಕೆಡಿಸಬಾರದೆಂದು ಜೋಗಿ ಅದೇ ಸಾರಿಗೆ ಒಂದು ಮೊಟ್ಟೆ ಒಡೆದು ಹಾಕುತ್ತಿದ್ದರು. ಇಂತಹದ್ದೊಂದು ಅನುಪಮ ಸ್ನೇಹದ ಸೆಲೆಯನ್ನು ನನ್ನೆದೆಯಲ್ಲಿ ಉಕ್ಕಿಸಿದ್ದ ಅಂದಿನ ದಕ್ಷಿಣ ಕನ್ನಡದ ನೆಲದ ಬಗ್ಗೆ ನನಗೆ ಹೆಮ್ಮೆಯಿದೆ.

ಕ್ಷಮಿಸು ಗೆಳೆಯ, ಜೀವಜೀವಗಳ ನಡುವೆ ದ್ವೇಷಾಸೂಯೆಯ ಕಿಚ್ಚು ಹಚ್ಚುವ ಇಂದಿನ ದಕ್ಷಿಣ ಕನ್ನಡದ ನೆಲದ ಬಗ್ಗೆ ನಿನ್ನಂತೆ ಹೆಮ್ಮೆ ಪಡಲಾರೆ. ಕಣ್ಣಿಡಲು ಹೇಳಿದವರನ್ನು ದ್ವೇಷಿಸಲಾರೆ. ಆ ಮಾತನ್ನು ನನ್ನೆದೆಯೊಳಗಿನ ಪ್ರಶ್ನೆಯಾಗಿಸಿ ಉತ್ತರ ಹುಡುಕಲು ಪ್ರಯತ್ನಿಸುವೆ. ಒಮ್ಮೆ ನಿಮ್ಮ ಮನೆಗೆ ಬಂದು ಮೊಟ್ಟೆ ಹಾಕಿದ ಟೊಮೇಟೋ ಸಾರಿನಲ್ಲಿ ಊಟ ಮಾಡುವ ಆಸೆ ನನಗೆ.

–ದಿನೇಶ್ ಅಮೀನ್ ಮಟ್ಟು

ಬೀದರ್ ಅತ್ಯಾಚಾರ–ಕೊಲೆ ಖಂಡನೆ


ಕೋಲಾರ


ಬೀದರ್

ಸಾವಿರಾರು ಜನತೆಯ ಹೆಜ್ಜೆಗಳು ನೆಲಕೆ ಬರವಣಿಗೆ ಮೂಡಿಸಿದವು. ಏನಂತ? ಅತ್ಯಾಚಾರಿ ಕೊಲೆಗಡುಕನಿಗೆ ಶಿಕ್ಷೆಗಾಗಿ, ಈ ಪ್ರಕರಣವು ಕೋಮುಪ್ರಚೋದನೆಗೆ ದುರ್ಬಳಕೆ ಮಾಡುತ್ತಿರುವ ಬಿಜೆಪಿಯ ಕ್ರೌರ್ಯ ಖಂಡಿಸಿ, ಕೋಮುಸೌಹಾರ್ದತೆ ಗಟ್ಟಿಗೊಳಿಸಲು ಹೋರಾಟದ ಸಾಗರಕೆ ನದಿಗಳಾಗಿ ಧುಮ್ಮಿಕ್ಕಿದರು. ಇದು ನಡೆದದ್ದು ಬೀದರ ನಗರದಲ್ಲಿ.

ಭಾಲ್ಕಿ ತಾಲೂಕಿನ ಕೋಸಂ ಗ್ರಾಮದ ಯುವತಿ ಮೇಲಿನ ಅತ್ಯಾಚಾರ, ಕೊಲೆ ಖಂಡಿಸಿ ಫೆಬ್ರುವರಿ 8ರಂದು ಬೀದರದಲ್ಲಿ ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು. ವಿವಿಧ ಸಂಘಟನೆಗಳು, ಹಲವು ಕಾಲೇಜುಗಳ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಜತೆಗೂಡಿದ್ದರು.

ನಗರದ ಗಣೇಶ ಮೈದಾನದಲ್ಲಿ ಸೇರಿದ್ದ ಸಾವಿರಾರು ಪ್ರತಿಭಟನಾಕಾರರು ರ‍್ಯಾಲಿಯ ಮೂಲಕ ಮೋಹನ್ ಮಾರ್ಕೆಟ್ ಮಾರ್ಗವಾಗಿ ಜಿಲ್ಲಾಧಿಕಾರಿ ಕಚೇರಿ ತಲುಪಿದರು. ಜನವಾದಿ ಮಹಿಳಾ ಸಂಘಟನೆಯ ಮುಖಂಡರುಗಳಾದ ಕೆ. ನೀಲಾ, ಮೀನಾಕ್ಷಿ ಬಾಳಿ, ಕೆ.ಎಸ್.ಲಕ್ಷ್ಮಿ ಮತ್ತಿತರ ಪ್ರಮುಖರು ಮಾತನಾಡಿ ಪ್ರಕರಣದ ತನಿಖೆಯನ್ನು ತ್ವರಿತ ಗತಿಯಲ್ಲಿ ನಡೆಸಿ, ಆರೋಪಿಗೆ ಶಿಕ್ಷೆ ಕೊಡಬೇಕೆಂದು ಆಗ್ರಹಿಸಿದರು.

ಕೊಲೆಗಾರನಿಗೆ ತ್ವರಿತ ನ್ಯಾಯಾಲಯದ ಮೂಲಕ ಬೇಗ ಕಠಿಣ ಶಿಕ್ಷೆಯಾಗಬೇಕು, ಅತ್ಯಾಚಾರ ಕೊಲೆ ಪ್ರಕರಣಗಳನ್ನು ಕೋಮು ಪ್ರಚೋದನೆಗೆ ಬಳಸಿಕೊಳ್ಳುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಜಿಲ್ಲೆಯಲ್ಲಿ ಮಹಿಳೆಯರ ಸುರಕ್ಷತತೆಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಸಭೆ ಕರೆದು ತುರ್ತು ಕ್ರಮಗಳನ್ನು ಜಿಲ್ಲಾಡಳಿತ ಘೋಷಿಸಬೇಕು. ಪೋಲಿಸ್ ಇಲಾಖೆಯನ್ನು ಲಿಂಗ ಸಂವೇದನಗೊಳಿಸಬೇಕು. ನ್ಯಾಯಮೂರ್ತಿ ವರ್ಮಾ ಸಮಿತಿಯ ಶಿಫಾರಸುಗಳನ್ನು ಕೂಡಲೇ ಜಾರಿಗೊಳಿಸಬೇಕು. ಎಂದು ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಎಸ್.ಎಫ್.ಐ., ಡಿವೈಎಫ್.ಐ., ಬಿವಿ ಸಂಘ, ಎ.ಆರ್.ಡಿ.ಯು., ಸಮರಸ, ಕಾರ್ಮೆಲ್ ಸೇವಾ ಕೇಂದ್ರ, ಭೂಮರೆಡ್ಡಿ ಕಾಲೇಜು, ಜ್ಞಾನಸುಧಾ ಶಿಕ್ಷಣ ಸಂಸ್ಥೆ, ಮಾನವ ಬಂಧುತ್ವ ವೇದಿಕೆ, ಸವಿತಾ ಸಮಾಜ, ಸುಗ್ರಾಮ ಚುನಾಯಿತ ಪ್ರತಿನಿಧಿಗಳ ಒಕ್ಕೂಟ ಮುಂತಾದ ಹಲವು ಸಂಘಟನೆ ಸಂಸ್ಥೆಗಳ ಪ್ರಮುಖರು ಪ್ರತಿಭಟನೆಯಲ್ಲಿ ಪಾಲುಗೊಂಡಿದ್ದರು.

ಇಂತಹ ಸಭೆಗಳು ರಾಜ್ಯದಾದ್ಯಂತ ನಡೆಯುತ್ತಿರುವ ವರದಿಗಳು ಬಂದಿವೆ. ಬೀದರ್ ಜಿಲ್ಲೆಯ ಕೋಸಂ ನಲ್ಲಿ ಯುವತಿಯ ಮೇಲೆ ಅತ್ಯಾಚಾರ ಮತ್ತು ಕೊಲೆ ಖಂಡಿಸಿ ಫೆ.9 ರಂದು ಜನವಾದಿ ಮಹಿಳಾ ಸಂಘಟನೆ ಕೋಲಾರ ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದರು. ಜಿಲ್ಲಾ ಕಾರ್ಯದರ್ಶಿ ವಿಜಯ ಕುಮಾರಿ, ಜಿಲ್ಲಾ ಸಮಿತಿ ಸದಸ್ಯರು ಮಂಜುಳಮ್ಮ, ವಿಜಯಲಕ್ಷ್ಮೀ, ಶಿಲ್ಪಾ, ಮಾಲಾ, ಎಸ್.ಎಫ್.ಐ. ವಿದ್ಯಾರ್ಥಿನಿಯರ ಉಪಸಮಿತಿ ಗಾಯತ್ರಿ, ಮುಂತಾದವರು ಭಾಗವಹಿಸಿದ್ದರು.

ಕಾನ–ಜೋಕಟ್ಟೆ ರಸ್ತೆ ದುರಸ್ತಿ ಒತ್ತಾಯಿಸಿ ರಸ್ತೆತಡೆ

ಗುಂಡಿಮಯವಾಗಿರುವ ಸುರತ್ಕಲ್ ಸಮೀಪದ ಕಾನ ಪ್ರದೇಶದಿಂದ ಜೋಕಟ್ಟೆಯನ್ನು ಸಂಪರ್ಕಿಸುವ ಎಸ್.ಇ.ಝೆಡ್. ಕಾರಿಡಾರ್ ರಸ್ತೆಯನ್ನು ತಕ್ಷಣ ದುರಸ್ತಿಗೊಳಿಸುವಂತೆ ಒತ್ತಾಯಿಸಿ ಕಾನ ಜಂಕ್ಷನ್ ನಲ್ಲಿ ಡಿ.ವೈ.ಎಫ್.ಐ. ಸುರತ್ಕಲ್, ಜೋಕಟ್ಟೆ ಘಟಕಗಳ ವತಿಯಿಂದ ಕಾನ ಜಂಕ್ಷನ್ ನಲ್ಲಿ ರಸ್ತೆತಡೆ ಪ್ರತಿಭಟನೆ ನಡೆಯಿತು.

ರಸ್ತೆ ತಡೆಯಲ್ಲಿ ಭಾಗವಹಿಸಿದ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಡಿ.ವೈ.ಎಫ್.ಐ. ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ಎಸ್.ಇ.ಝೆಡ್., ಎಂ.ಆರ್.ಪಿ.ಎಲ್. ಮುಂತಾದ ಕೈಗಾರಿಕೆಗಳಿಂದ ಊರು ಅಭಿವೃದ್ದಿಗೊಳ್ಳುತ್ತದೆ, ಯುವಜನರಿಗೆ ಉದ್ಯೋಗ ದೊರಕುತ್ತದೆ ಎಂಬ ಭ್ರಮೆಯನ್ನು ಬಿತ್ತಲಾಗಿತ್ತು. ಆದರೆ ಎಂ.ಆರ್.ಪಿ.ಎಲ್. ನಿಂದಾಗಿ ಊರು ನರಕವಾಗಿದೆ. ಯುವಜನರಿಗೆ ಉದ್ಯೋಗದ ಭರವಸೆ ಪೂರ್ಣವಾಗಿ ಸುಳ್ಳಾಗಿದೆ. ಅಭಿವೃದ್ದಿಯ ಬದಲಿಗೆ ಪರಿಸರ ಮಲಿನಗೊಂಡು ಜನರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿದೆ. ಸಾರ್ವಜನಿಕ ರಸ್ತೆಗಳು ಕೈಗಾರಿಕಾ ಕಂಪೆನಿಗಳ ದೈತ್ಯ ವಾಹನಗಳ ಓಡಾಟದಿಂದ ಪೂರ್ಣವಾಗಿ ಹದಗೆಟ್ಟಿದೆ. ವರ್ಷಕ್ಕೆ ಸಾವಿರಾರು ಕೋಟಿ ಲಾಭಗಳಿಸುವ ಎಸ್.ಇ.ಝೆಡ್., ಎಂ.ಆರ್.ಪಿ.ಎಲ್. ಗಳು ಕನಿಷ್ಟ ತಾವು ಬಳಸುತ್ತಿರುವ ರಸ್ತೆಗಳ ದುರಸ್ತಿಗೂ ಕ್ರಮ ಕೈಗೊಳ್ಳುತ್ತಿಲ್ಲ. ಇದರಿಂದ ಕೈಗಾರಿಕಾ ಘಟಕಗಳ ಸುತ್ತಲಿನ ಗ್ರಾಮಗಳ ಜನರ ಬದುಕು ನರಕ ಸದೃಶವಾಗಿದೆ. ಇಂತಹ ದುಸ್ಥಿತಿಗೆ ಕಾರಣವಾಗಿರುವ ಬೃಹತ್ ಕೈಗಾರಿಕೆಗಳನ್ನು ಹದ್ದುಬಸ್ತಿನಲ್ಲಿಡಬೇಕಾದ ಜನಪ್ರತಿನಿಧಿಗಳು ಮೌನ ವಹಿಸಿರುವುದು ಕಂಪೆನಿಗಳಿಗೆ ಕಡಿವಾಣ ಇಲ್ಲದಂತಹ ಸ್ಥಿತಿ ನಿರ್ಮಿಸಿದೆ ಎಂದು ಆರೋಪಿಸಿದರು.

ಪ್ರತಿಭಟನಾಕಾರರ ಆಗ್ರಹಕ್ಕೆ ಮಣಿದು ಎಸ್.ಇ.ಝೆಡ್. ಮತ್ತು ಎಂ.ಆರ್.ಪಿ.ಎಲ್. ನ ಅಧಿಕಾರಿಗಳು ಸ್ಥಳಕ್ಕೆ ಬಂದು ಪ್ರತಿಭಟನಾಕಾರರ ಮನವಿ ಸ್ವೀಕರಿಸಿದರು. ಇಂದಿನಿಂದಲೇ ರಸ್ತೆ ದುರಸ್ಥಿ ಆರಂಭಿಸುವುದಾಗಿ ಸ್ಪಷ್ಟ ಭರವಸೆ ನೀಡಿದರು. ಆ ನಂತರ ಪ್ರತಿಭಟನಾಕಾರರು ರಸ್ತೆ ತಡೆಯನ್ನು ಕೈಬಿಟ್ಟರು.

ರಸ್ತೆ ತಡೆಯ ನೇತೃತ್ವವನ್ನು ಡಿ.ವೈ. ಎಫ್.ಐ. ಜಿಲ್ಲಾಧ್ಯಕ್ಷ ಬಿ ಕೆ ಇಮ್ತಿಯಾಜ್, ಸ್ಥಳೀಯ ಸಮಿತಿಯ ಪ್ರಮುಖರಾದ ಶ್ರೀನಾಥ್ ಕುಲಾಲ್, ಶ್ರೀನಿವಾಸ ಹೊಸಬೆಟ್ಟು, ಮಕ್ಸೂದ್, ಸಲೀಂ ಶ್ಯಾಡೊ, ಅಜ್ಮಲ್ ಕಾನ, ಕರುಣಾಕರ ಶೆಟ್ಟಿ, ಆಬೂಬಕ್ಕರ್ ಬಾವಾ ಜೋಕಟ್ಟೆ, ಇಕ್ಬಾಲ್ ಜೋಕಟ್ಟೆ, ಸಿಲ್ವಿಯಾ ಜೋಕಟ್ಟೆ, ರಹೀಂಕಾನ, ಬೆನೆಟ್ ಡಿಸೋಜ, ರಾಜು ಜೋಕಟ್ಟೆ ಮತ್ತಿತರರು ವಹಿಸಿದ್ದರು.

ಕೇಳಿಸಿದ್ದು

ಗುಲಾಬಿ ಬಣ್ಣದ ಸಾಂಕೇತಿಕತೆ ಆಚೆಗೆ ದಕ್ಕಿದ್ದು ಏನು?

ಲಿಂಗತ್ವ ಸಂವೇದನಾಶೀಲ ಬಜೆಟಿಂಗ್.. ..ಎಂದರೆ, ಮಹಿಳೆಯರಿಗಾಗಿ ಬರೀ ಹಣಕಾಸು ಹಂಚಿಕೆ ಮಾಡುವುದಲ್ಲ. ಲಿಂಗತ್ವದ ಕನ್ನಡಿಯಲ್ಲಿ ಬಜೆಟನ್ನು ಪರಿಶೀಲನೆಗೆ ಒಳಪಡಿಸುವುದು.

... ಹೀಗಾಗಿ ಗುಲಾಬಿ ಬಣ್ಣದ ಮುಖಪುಟ ಸಾಂಕೇತಿಕತೆಗಷ್ಟೇ ಸೀಮಿತ. ಬಜೆಟ್ ಹಂಚಿಕೆ ಪ್ರಸ್ತಾವಗಳಲ್ಲಿ ಈ ಲಿಂಗತ್ವ ಸಂವೇದನೆಯ ಕಾಳಜಿ ಎದ್ದು ಕಾಣಿಸುವುದಿಲ್ಲ ಎಂಬುದು ವಿವರಗಳನ್ನು ಗಮನಿಸಿದಲ್ಲಿ ತಿಳಿಯುತ್ತದೆ.

ಒಟ್ಟು ಬಜೆಟ್ ವೆಚ್ಚಕ್ಕೆ ಹೋಲಿಸಿದಲ್ಲಿ, ಲಿಂಗತ್ವ ಬಜೆಟ್ ಪ್ರಮಾಣ ಕೇವಲ ಶೇ 4.9ರಷ್ಟಿದೆ. ಈ ಪ್ರಮಾಣ ಇತ್ತೀಚಿನ ವರ್ಷಗಳಲ್ಲಿ ಇಳಿಕೆ ಕಾಣುತ್ತಿದೆ ಎಂಬುದು ಅಂಕಿಅಂಶಗಳಿಂದ ವ್ಯಕ್ತ. 2017–18ರ ಕೇಂದ್ರ ಬಜೆಟಿನಲ್ಲಿ ಮಹಿಳೆ ಮೇಲಿನ ವೆಚ್ಚದ ಪ್ರಮಾಣ ಶೇ 5.26ರಷ್ಟಿತ್ತು. 2013 –14ರ ಯುಪಿಎ ಆಡಳಿತ ಅವಧಿಯಲ್ಲಿ ಈ ಪ್ರಮಾಣ ಶೇ 5.83ರಷ್ಟಿತ್ತು. .. ..

ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ತಮ್ಮ ಬಜೆಟ್ ಭಾಷಣದಲ್ಲಿ ಅನೇಕ ಬಾರಿ ಮಹಿಳೆ ಪದ ಉಚ್ಚರಿಸುತ್ತಾ ಮಹಿಳಾ ಕಾಳಜಿ ಬಿಂಬಿಸುವಂತೆ ಕಂಡರು. ಹೀಗಿದ್ದೂ 2018–19ರ ಒಟ್ಟು ಪ್ರಸ್ತಾವಿತ ಬಜೆಟ್ ವೆಚ್ಚ ಹಂಚಿಕೆಯಲ್ಲಿ ಶೇ 1ರಷ್ಟು ಪ್ರಮಾಣ ಮಾತ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯಕ್ಕೆ ದಕ್ಕಿದೆ. .. ..

ಮಹಿಳಾ ಸಬಲೀಕರಣ ಯೋಜನೆಗಳಿಗಾಗಿ ಹಣ ಹಂಚಿಕೆಯಷ್ಟೇ ಸಾಕಾಗುವುದಿಲ್ಲ. ಅದು ವೆಚ್ಚವಾಗುವ ರೀತಿಯೂ ಮುಖ್ಯ ಎಂಬುದಕ್ಕೆ 'ನಿರ್ಭಯಾ ನಿಧಿ' ಉದಾಹರಣೆ. ಮಹಿಳೆ ಸುರಕ್ಷತೆ ಹಾಗೂ ಭದ್ರತೆಗಾಗಿ ಸ್ಥಾಪಿಸಿರುವ ಈ ನಿಧಿ ಸೂಕ್ತ ರೀತಿಯಲ್ಲಿ ಬಳಕೆಯಾಗದೆ ಟೀಕೆಗಳಿಗೆ ಒಳಗಾಗಿರುವುದರಿಂದ ಈಗ 'ನಿರ್ಭಯಾ ನಿಧಿ' ಬಳಕೆ ವಿಚಾರ ಸುಪ್ರೀಂ ಕೋರ್ಟ್ ಪರಿವೀಕ್ಷಣೆಯ ವ್ಯಾಪ್ತಿಗೆ ಸೇರಿದೆ. ಈ ನಿಧಿಯಲ್ಲಿದ್ದ ರೂ. 3100 ಕೋಟಿಯಲ್ಲಿ ಕಳೆದ ವರ್ಷ ಆಗಸ್ಟ್ ವರೆಗೆ ಕೇವಲ ರೂ. 264 ಕೋಟಿ ವ್ಯಯಿಸಲಾಗಿದೆ ಎಂದು ವರದಿಯಾಗಿತ್ತು. ಹೀಗಿದ್ದೂ ಈ ಬಳಕೆಯಾಗದ ನಿಧಿಗೆ ಈ ವರ್ಷವೂ ರೂ. 378.75 ಕೋಟಿ ಸೇರಿಸಲಾಗಿದೆ. ಯೋಜನೆಗಳ ವಿನ್ಯಾಸ ಹಾಗೂ ಅವುಗಳ ಸಕಾಲಿಕ ಹಾಗೂ ಪರಿಣಾಮಕಾರಿ ಜಾರಿಗೂ ಸಮಾನ ಗಮನ ನೀಡುವುದು ಮುಖ್ಯವಾದದ್ದು ಎಂಬುದು ಇಲ್ಲಿರುವ ಪಾಠ.

.. .. ಪ್ರಧಾನಮಂತ್ರಿ ಮಾತೃ ವಂದನಾ ಯೋಜನೆ (ಪಿಎಂಎಂವಿವೈ) ವಿಚಾರವನ್ನೇ ತೆಗೆದುಕೊಳ್ಳಿ. ಅಸಂಘಟಿತ ವಲಯದ ದುಡಿಯುವ ಮಹಿಳೆಯರಿಗೆ ಹೆರಿಗೆ ಸೌಲಭ್ಯ ಇಲ್ಲ. ಹೀಗಾಗಿ ಆ ಸಂದರ್ಭದಲ್ಲಿನ ವೇತನ ನಷ್ಟಕ್ಕೆ ಪರಿಹಾರವಾಗಿ ರೂ. 6000 ನೀಡುವ ಯೋಜನೆ ಇದು .. .. ನಿಗದಿಪಡಿಸಿದ ಹಣದಲ್ಲಿ ಬಳಕೆ ಆಗಿರುವುದು ಕೇವಲ ಶೇ 2. ಕಳೆದ ವರ್ಷ ಈ ಯೋಜನೆಗೆಂದೇ ರೂ. 2700 ಕೋಟಿ ತೆಗೆದಿರಿಸಲಾಗಿತ್ತು.

ಈಗ 2018–19ರ ಈ ವರ್ಷದ ಮುಂಗಡಪತ್ರದಲ್ಲಿ ಕೇವಲ ರೂ. 2400 ಕೋಟಿಯನ್ನು ಈ ಯೋಜನೆಗಾಗಿ ತೆಗೆದಿರಿಸಲಾಗಿದೆ. ಈಗಾಗಲೇ ಈ ಯೋಜನೆ ಅಡಿ ಫಲಾನುಭವಿಗಳ ಸಂಖ್ಯೆಯನ್ನು ಅರ್ಧಕ್ಕೆ ಇಳಿಸಲಾಗಿದೆ ಎಂಬುದು ನಮಗೆ ಗೊತ್ತಿರುವ ಸಂಗತಿ. ಕಳೆದ ವರ್ಷ ಮೇ ತಿಂಗಳಲ್ಲೇ ಎರಡು ಮಕ್ಕಳ ಹೆರಿಗೆಗಳಿಗೆ ಬದಲಾಗಿ ಮೊದಲ ಮಗುವಿನ ಹೆರಿಗೆಗೆ ಮಾತ್ರ ಈ ಯೋಜನೆಯನ್ನು ಸರ್ಕಾರ ಸೀಮಿತಗೊಳಿಸಿದ್ದು ನೆನಪಿದೆಯಲ್ಲವೇ? ಆದರೆ ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ ಪ್ರಕಾರ, ಇದು ಗರ್ಭಿಣಿ ಹಾಗೂ ಹಾಲೂಡಿಸುವ ತಾಯಂದಿರ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಎಂಬಂಥ ಟೀಕೆಗಳಿಗೆ ಸರ್ಕಾರ ಸ್ಪಂದಿಸಿಲ್ಲ. 2013ರಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ ಜಾರಿಗೊಳಿಸಿದಾಗ ಒಂದೇ ಮಗು ನೀತಿ ಅಸ್ತಿತ್ವದಲ್ಲಿರಲಿಲ್ಲ ಎಂಬುದು ಇಲ್ಲಿ ಗಮನಿಸ ಬೇಕಾದ ಅಂಶ.


.. ..

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು (ನರೇಗಾ) ಗ್ರಾಮೀಣ ಮಹಿಳೆಯರಿಗೆ ಸಾಮಾಜಿಕ ಭದ್ರತೆ ನೀಡುವಲ್ಲಿ ಮುಖ್ಯ ಪಾತ್ರ ವಹಿಸುತ್ತಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಕಳೆದ ಅನೇಕ ವರ್ಷಗಳಲ್ಲಿ ಈ ಯೋಜನೆಯ ಲಾಭವನ್ನು ಹೆಚ್ಚಿನ ಮಹಿಳೆಯರು ಪಡೆದುಕೊಳ್ಳುತ್ತಿದ್ದಾರೆ. ಆದರೂ ಈ ಯೋಜನೆಗೆ ಕಳೆದ ಸಾಲಿನಲ್ಲಿ ನೀಡಿದ್ದಷ್ಟೇ – 55,000 ಕೋಟಿ ಹಣವನ್ನೇ ಈ ಸಾಲಿನ ಬಜೆಟಿನಲ್ಲೂ ಹಂಚಿಕೆ ಮಾಡಲಾಗಿದೆ. ಕೃಷಿ ಹಾಗೂ ಗ್ರಾಮೀಣ ಭಾರತಕ್ಕೆ ಈ ಬಾರಿಯ ಬಜೆಟ್ನಲ್ಲಿ ಒತ್ತು ನೀಡಲಾಗಿದೆ. ಆದರೆ ಸ್ತ್ರೀಮಯವಾಗುತ್ತಿರುವ ಕೃಷಿಲೋಕದ ವಾಸ್ತವಗಳನ್ನು ಗಣನೆಗೆ ತೆಗೆದುಕೊಂಡಿಲ್ಲದ ವೈರುಧ್ಯಗಳೂ ಕಣ್ಣಿಗೆ ರಾಚುತ್ತವೆ.

ಈ ಅಂಶಗಳನ್ನೆಲ್ಲಾ ಗಮನಿಸಿಸುತ್ತಿದ್ದರೆ, ರಾಷ್ಟ ಹಾಗೂ ರಾಜ್ಯಗಳ ಮಟ್ಟಗಳಲ್ಲಿ ಲಿಂಗತ್ವ ಸಂವೇದನಾಶೀಲ ಬಜೆಟ್ ಸಾಂಸ್ಥಿಕರಿಸಲು ಪ್ರಯತ್ನಗಳನ್ನು ಮಾಡುವುದು ಅಗತ್ಯ ಎನಿಸುತ್ತದೆ. ಅನುಷ್ಠಾನ, ಉಸ್ತುವಾರಿ ಹಾಗೂ ಮೌಲ್ಯಮಾಪನದಲ್ಲಿ ಲಿಂಗತ್ವ ವಿಶ್ಲೇಷಣೆ ಅನ್ವಯಿಸಿ ಬಲವರ್ಧನೆ ಮಾಡುವುದು ಇಲ್ಲಿ ಮುಖ್ಯ. ವೆಚ್ಚ ಹಾಗೂ ಅದರಿಂದಾಗುವ ಲಾಭಗಳನ್ನು ನಿರಂತರವಾಗಿ ಗಮನಿಸುತ್ತಿರಬೇಕು. ಈ ಹೆಜ್ಜೆಗಳು ಇಲ್ಲದಿದ್ದಲ್ಲಿ ಬಜೆಟ್ ಕಸರತ್ತು ಮಹಿಳೆಗೆ ಹೆಚ್ಚಿನದೇನೂ ನೀಡದು.

– ಸಿ.ಜಿ. ಮಂಜುಳಾ (ಪ್ರಜಾವಾಣಿ, ಫೆ. 7)

ವಿಕಾಸವಾದದ ಪಿತಾಮಹ ಡಾರ್ವಿನ್



ಫೆಬ್ರುವರಿ 12 ಜೀವ ವಿಕಾಸವಾದದ ಪಿತಾಮಹನಾದ ಮಹಾನ್ ವಿಜ್ಞಾನಿ ಡಾರ್ವಿನನ 209ನೇ ಜನ್ಮದಿನ. ಇತ್ತೀಚಿಗಷ್ಟೇ ಕೇಂದ್ರ ಮಂತ್ರಿಯೊಬ್ಬರು ವಿಕಾಸವಾದ ಸತ್ಯವಲ್ಲ. ಶಾಲೆಯಲ್ಲಿ ಕಲಿಸಬಾರದು ಎಂದು ತಾಕೀತು ಮಾಡಿದ್ದರು. ಅದಕ್ಕೆ ನಾಗೇಶ ಹೆಗಡೆಯವರ ಪ್ರತಿಕ್ರಿಯೆ ಹಿಂದಿನ ಸಂಚಿಕೆಗಳಲ್ಲಿ ಓದಿದ್ದೀರಿ. ಡಾರ್ವಿನನ ಜೀವನ ಮತ್ತು ಸಂಶೋಧನೆ-ಸಾಧನೆ ಬಗೆಗೆ ಲೇಖನದ ಭಾಗ-1 ಇಲ್ಲಿದೆ. ಇಲ್ಲಿ ಜೀವನದ ಬಗ್ಗೆ ಇದೆ. ಮುಂದಿನ ಭಾಗ-2ರಲ್ಲಿ ಅವರ ಸಂಶೋಧನೆ-ಸಾಧನೆ ಬಗೆಗೆ ಇರುತ್ತದೆ.

ಅಹಮದ್ ಹಗರೆ, ಹಾಸನ

ಜಗತ್ತನ್ನು ಬದಲಾಯಿಸುವಲ್ಲಿ ವಿಜ್ಞಾನದ ಪಾತ್ರ ಅನನ್ಯ. ಮಾನವ ಹುಟ್ಟಿದಾಗಿನಿಂದಲೂ ಮಾನವನ ಉಗಮ ಹೇಗಾಯಿತು ಎಂದು ತಲೆ ಕೆಡಿಸಿಕೊಳ್ಳುತ್ತಲೇ ಬಂದ. ನೆಮ್ಮದಿಗಾಗಿ ದೇವರನ್ನು ಸೃಷ್ಟಿಸಿ ಅವನ ಮಕ್ಕಳು ಎಂದು ಕೊಳ್ಳಲಾರಂಬಿಸಿದ. ಈ ಹುಟ್ಟಿಗೆ ಧರ್ಮ ಗ್ರಂಥಗಳ ಮೊರೆ ಹೋದ. ಈ ಹುಟ್ಟಿನ ಮೂಲ ದೇವರು ಎಂಬುದನ್ನು ಸಾವಿರಾರು ಪಂಡಿತರು ಅಲ್ಲಗಳೆಯುತ್ತಾ ಬಂದರು. ಆದರೆ ಸಾಬೀತು ಮಾಡಲು ತಿಣುಕಾಡಿದರು. 19ನೆ ಶತಮಾನದಲ್ಲಿ ಮಾನವ ದೇವರ ಸೃಷ್ಟಿಯಲ್ಲ. ವಿಕಾಸವಾಗಿ ಬಂದ ಕೂಸು, ಮಂಗನಿಂದ ಮಾನವ ಎಂದು ನಿರೂಪಿಸಿ ಜಗತ್ತನ್ನು ನಿದ್ರೆಯಿಂದ ಎಬ್ಬಿಸಿ ಜಗತ್ತಿನ ನಡೆಯ ತಿರುವನ್ನು ಬದಲಿಸಿದ ಮಹಾನುಭಾವ ಚಾರ್ಲ್ಸ್ ಡಾರ್ವಿನ್, ನನ್ನ ಅಚ್ಚುಮೆಚ್ಚಿನ ವಿಜ್ಞಾನಿಗಳಲ್ಲಿ ಅಗ್ರಪಂಕ್ತಿಯಲ್ಲಿ ನಿಲ್ಲುವ ವಿಜ್ಞಾನಿ.

ಬಾಲ್ಯ ಮತ್ತು ಶಿಕ್ಷಣ :

ಬ್ರಿಟನ್ನಿನ ಷ್ರೂಸ್ಬರಿ ನಗರದ ಪ್ರಖ್ಯಾತ ಮತ್ತು ಮಾನವಂತ ವೈದ್ಯ ರಾಬರ್ಟ ಡಾರ್ವಿನ್ ಮತ್ತು ಅವರ ಸುಸಂಸ್ಕೃತ ಜಾಣೆ ಮಡದಿ ಸುಸಾನ ಇವರ ಕಿರಿಯ ಪುತ್ರ ಚಾರ್ಲ್ಸ ಡಾರ್ವಿನ್ 1809 ಫೆಬ್ರವರಿ 12 ರಂದು ಜನನ. ಕಿರಿಯ ಮಗ ಡಾರ್ವಿನ್‌ಗೆ ಚಿಕ್ಕಂದಿನಿಂದಲೂ ಅಕ್ಷರಾಭ್ಯಾಸ ಮತ್ತು ಪ್ರಾಣಿ-ಪಕ್ಷಿಗಳಲ್ಲಿ ಪ್ರೀತಿ, ಕರುಣೆ ಕಲಿಸಿ ಆಸಕ್ತಿ ಮೂಡಿಸಿದ ಆತ್ಮೀಯ ಶಿಕ್ಷಕಿಯಾಗಿದ್ದಳು ತಾತಯಿ ಸುಸಾನ. ಡಾರ್ವಿನ್‌ಗೆ 9 ವರ್ಷ ತುಂಬುವ ಮೊದಲೇ ತಾಯಿಯ ಮರಣ, ಅಪ್ಪ ಹಾಗೂ ಅಣ್ಣಂದಿರ ಆರೈಕೆಯಲ್ಲೆ ಬೆಳೆಯುವ ಅನಿವಾರ್ಯತೆ ಬಂತು. ಆದರೆ ತಾಯಿಯಿಂದ ಬಂದ ಪ್ರಕೃತಿ ಪ್ರೇಮ ಲಭಿಸಲಿಲ್ಲ. ಶಾಲಾ ಕಲಿಕೆ ಹಂತ ರುಚಿಸಲಿಲ್ಲ. ಅಲ್ಲಿನ ವ್ಯಾಕರಣ, ಗಣಿತ ಬೋರಾಗತೊಡಗಿತು. ಆದರೆ ರಸಾಯನಶಾಸ್ತ್ರ ಆಸಕ್ತಿಯನ್ನು ಹುಟ್ಟಿಸಿತು. ಕಾರಣ ಇಷ್ಟೆ. ವಿವಿಧ ರಾಸಾಯನಿಕಗಳನ್ನು ಬೆರೆಸಿದಾಗ ಅವುಗಳ ರೂಪ ಬದಲಾಗುವುದನ್ನು ನೋಡಲು ಅವನಿಗೆ ರೋಮಂಚನ ಗೊಳಿಸುತ್ತಿದ್ದವು ಈ ಆಸಕ್ತಿಯೇ ಅವನ್ನು ತುಂಟ ಹುಡುಗನನ್ನಾಗಿಸಿತು. ಶಾಲೆಯ ಗೋಡೆ, ಇತರೆ ಹುಡುಗರ ಪುಸ್ತಕದ ಆಕಾರ ಈತನಿಂದ ಬದಲಾಗುತ್ತಿದ್ದರಿಂದ ಈತನಿಗೆ ಬ್ಯಾಡ್ ಬಾಯ್ ಪಟ್ಟ ಅಂಟಿತ್ತು.ಮಗನ ಮೊಂಡುತನದ ಕಾರಣ ಎಲ್ಲರ ಅಸಡ್ಡೆಗೆ ಗುರಿಯಾದದ್ದು ಅಪ್ಪನಿಗೆ ಬಹಳ ಆತಂಕ, ಬೇಸರ ಹಾಗೂ ವೇದನೆಯಾಗಿತ್ತು.

1825ರಲ್ಲಿ ವೈದ್ಯಕೀಯ ಶಿಕ್ಷಣಾಭ್ಯಾಸಕ್ಕಾಗಿ ಮಗನನ್ನು ಎಡಿನ್‌ಬರೋ ವಿಶ್ವವಿದ್ಯಾಲಯ ಸೇರಿಸಿದರು. ಇಲ್ಲಿಯೂ ಇದೇ ಕ್ವತೆ. ಆ ಕಾಲದಲ್ಲಿ ಪ್ರಜ್ಞೆ ತಪ್ಪಿಸಿ ಶಸ್ತ್ರಕ್ರಿಯೆ ನಡೆಸುವ ವಿಧಾನ ತಿಳಿದಿರಲಿಲ್ಲ. ರೋಗಿಗಳ ಆರ್ತನಾದ, ನರಳಾಟ ಕಂಡು ಡಾರ್ವಿನ್‌ಗೆ ಆಸ್ಪತ್ರೆ ಒಂದು ಕಟುಕರ ಕಸಾಯಿಕಾನೆ ತರಹ ಕಾಣಿಸಿತು. ವಿದ್ಯೆಯಲ್ಲಿ ನಿರಾಸಕ್ತಿ ಬೆಳೆದು ಪರೀಕ್ಷೆಯಲ್ಲಿ ಫೇಲಾದ. ವೈದ್ಯ ವೃತ್ತಿಗೆ ಗುಡ್‌ಬೈ ಹೇಳಿದ. ಆದರೆ ಅಲ್ಲಿನ ಪ್ರಕೃತಿ ವಿಜ್ಞಾನಿ ಜೇಮ್ಸನ್‌ರ ಪಾಠ ಮತ್ತು ಪುಸ್ತಕಗಳು ಡಾರ್ವಿನ್ನನ ಪ್ರಕೃತಿ ನೋಡುವ ಧಾಟಿಯನ್ನೇ ಬದಲಾಯಿಸಿತು.

ಡಾರ್ವಿನ್ನನ ಓದಿನಲ್ಲಿನ ನಿರಾಸಕ್ತಿ ಕಂಡು ದುಃಖಿಸಿದ ಆತನ ತಂದೆ ಇವನನಿಗೆ ಪಾದ್ರಿ ಒಂದೇ ಗ್ಯಾರಂಟಿ ಎಂದು ಅತ್ತೂ ಕರೆದು, ಬ್ಲಾಕ್ ಮೇಲ್ ಮಾಡಿ ಕೇಂಬ್ರಿಡ್ಜ್ ಕ್ರೈಸ್ಟ್ ಕಾಲೇಜಿಗೆ ಸೇರಿಸಿದರು. ಪಾದ್ರಿಯಾದರೆ ಹಳ್ಳಿಗಾಡು ಸುತ್ತಾಡಬಹುದು ಎಂದು ಬಹಳ ಆಸಕ್ತಿಯಿಂದಲೇ ಕಾಲೇಜಿಗೆ ಸೇರಿದ. ಇಲ್ಲಿ ಬಹಳ ಉತ್ಸಾಹದಿಂದ ದೈವಶಾಸ್ತ್ರ, ಧರ್ಮಶಾಸ್ತ್ರ ಮತ್ತು ತರ್ಕಶಾಸ್ತ್ರ ಗಳನ್ನು ಕಲಿತ. ಅಗ ಧರ್ಮದ ಮರ್ಮ ಅವನಿಗೆ ಸ್ಪಷ್ಟವಾಗಿ ಅರ್ಥವಾಯಿತು, ನಿಖರವಾಗಿ ಜನರನ್ನು ನಿಬ್ಬೆರಗಾಗುವಂತೆ ವಿಷಯ ಮಂಡಿಸುವ ಕಲೆಯನ್ನ ಇಲ್ಲೇ ಕಲಿತ. ಯಾವ ವ್ಯಾಕರಣ ಶಿಕ್ಷಣ, ಯಾವ ವೈದ್ಯ ಶಿಕ್ಷಣ ತನ್ನ ಸಮಸ್ಯೆಗೆ ಉತ್ತರ ಕೊಡಲು ಸಾಧ್ಯವಾಗಲಿಲ್ಲವೋ, ಆ ಪ್ರಶ್ನೆಗೆ ಉತ್ತರ ಧರ್ಮಶಾಸ್ತ್ರ ಕಲಿವಾಗ ಡಾರ್ವಿನನಿಗೆ ಲಭಿಸಿತು. ಅಲ್ಲಿಂದಲೇ ಈ ಸೃಷ್ಠಿ ರಹಸ್ಯದ ಗುಟ್ಟನ್ನು ಚರ್ಚಿನ ಗೋಡೆಗಳೊಳಗಿಂದ ಜನರ ಮನದಾಳದೊಳಗೆ ಬಿತ್ತರಿಸುವ ಚೈತನ್ಯ ಪಡೆದ. ಧರ್ಮಶಾಸ್ತ್ರದ ಗೊಡ್ಡುಗಳನ್ನು ಮೀರಿ ಜೇಮ್ಸನ್ನರ ಪ್ರಕೃತಿ ವೀಕ್ಷಣೆಗೆ ತಾರ್ಕಿಕ ನೆಲೆಗಟ್ಟನ್ನು ಕಂಡು ಕೊಂಡ. ಭೂ ವಿಜ್ಞಾನಿ ಸೈಡ್ವಿಕ್ ಮತ್ತು ಸಸ್ಯ ವಿಜ್ಞಾನಿ ಡಾ.ಹನ್ಸಲೋರ ಪ್ರಭಾವದಿಂದ 1831ರಲ್ಲಿ ಬಿ.ಎ. ಪದವಿಗಳಿಸಿದ. ಪದವೀಧರನಾದ. ಡಾರ್ವಿನ್ ಮತ ಪ್ರಚಾರ ಮಾಡುವ ಪಾದ್ರಿಯಾಗದೆ ಕಾನನ ಗರ್ಭದೊಳಗೆ ತಲ್ಲೀನನಾಗಿ ಚಿಟ್ಟೆ, ಜೀರುಂಡೆಗಳ ಜೊತೆ ಹಾಡಿ ಕುಣಿಯಲಾರಂಬಿಸಿದ.


ಅನ್ವೇಷಣೆ

ಆ ಕಾಲಘಟ್ಟದಲ್ಲಿ ಇಂಗ್ಲೆಂಡಿನ ಸಾಮ್ರಾಜ್ಯಶಾಹಿ ಧೋರಣೆ ಜಗತ್ತಿನ ನಾನಾ ದೇಶಗಳ ನೆಮ್ಮದಿಯಿಚಿದ ಇರಲು ಬಿಡುತ್ತಿರಲಿಲ್ಲ. ತನ್ನ ಲೂಟಿಕೋರ ನೀತಿಗೆ ಹೊಸ ಹೊಸ ದೇಶಗಳನ್ನು ಕಂಡುಹಿಡಿಯುವುದು ಮತ್ತು ಅಲ್ಲಿನ ಸಂಪನ್ಮೂಲವನ್ನು ಹುಡುಕುವುದಕ್ಕಾಗೇ ತಂಡಗಳು ಇದ್ದವು. ಈ ಹಿನ್ನೆಲೆಯಲ್ಲಿ ಹೊಸ ಹೊಸ ದೇಶಗಳನ್ನು ಕಂಡುಹಿಡಿಯುವುದು ಅನಿವಾರ್ಯವಾಗಿತ್ತು. ಈ ಹಿನ್ನೆಲೆಯಲ್ಲೇ ಎಚ್. ಎಂ.ಎಸ್. ಬಿಗಲೆ ಎನ್ನುವ ಹಡಗು ವಿಶ್ವ ಪರ್ಯಟನೆ ಹ್ರೆರಟಿತ್ತು, ಇದರ ಉದ್ದೇಶ ಜಗತ್ತಿನ ವಿವಿಧ ದೇಶಗಳ ಪ್ರಾಕೃತಿಕ ಸಂಪತ್ತುಗಳನ್ನು ಸರ್ವೇಕ್ಷಿಸುವುದು ಆಗಿತ್ತು. ಆದ್ದರಿಂದ ಪ್ರಯಾಣಕ್ಕೆ ನುರಿತ ಮತ್ತು ಆಸಕ್ತ ಯುವ ಪ್ರಕೃತಿ ತಜ್ಞರು ಬೇಕಾಗಿತ್ತು. ಆಗ ಡಾ.ಹನ್ಸಲೋ ಡಾರ್ವಿನ್ ಹೆಸರು ಸೂಚಿಸಿದರು. ತಂದೆಯಿಂದ ನಕಾರ. ಸೋದರಮಾವನ ಮಧ್ಯಸ್ಥಿಕೆಯಿಂದ ಸಾಹಸ ಯಾತ್ರೆಗೆ ಮಗನನ್ನು ಕಳುಹಿಸಲು ಇಲ್ಲದ ಮನಸ್ಸಿನಿಂದ ತಂದೆ ಒಪ್ಪಿಗೆ ನೀಡಿದ. ಆದರೆ ಪರ್ಯಟನಾ ತಂಡದ ಕ್ಯಾಪ್ಟನ್ ಫಿಡ್ಜರಾಯ್ ಡಾರ್ವಿನ್ನನನ್ನು ಯಾತ್ರೆಗೆ ಸೇರಿಸಿಕೊಳ್ಳಲು ತಕರಾರು ಮಾಡಿದ. ಕಾರಣ ಇಷ್ಟೇ ಫಿಡ್ಜರಾಯ್ ಒಬ್ಬ ಮೂಢನಂಬಿಕೆಯ ಮನುಷ್ಯ. ದಪ್ಪ ಮೂಗಿನ ವ್ಯಕ್ತಿಗಳಿಂದ ಸಾಹಸ ಯಾತ್ರೆಗೆ ಅಪಶಕುನ, ಅಪಾಯ ಎಂದು ಪೂರ್ವಗ್ರಹ ಪೀಡಿತನಾಗಿ ನಂಬಿದ್ದ. ಈ ಮಹಾನುಭಾವನಿಗೆ ಡಾ.ಹನ್ಸಲೋ ಡಾರ್ವಿನ್‌ನ ಆಸಕ್ತಿ, ಜ್ಞಾನ, ಮಹತ್ವಾಕಾಂಕ್ಷೆ ಯನ್ನು ಮನದಟ್ಟು ಮಾಡಿಸಿ, ನಿನ್ನ ನಂಬಿಕೆ ಮೌಢ್ಯದ್ದು ಎಂದು ವಿವರಿಸಿ ಪ್ರಯಾಸ ಪಟ್ಟು ಒಪ್ಪಿಸಲು ವಾರವೇ ಹಿಡಿಯಿತು. ಜೀವನದಲ್ಲಿ ಮೊದಲ ಬಾರಿಗೆ ಒಲ್ಲದ ಮನಸ್ಸಿನಿಂದಲೇ ಒಪ್ಪಿಕೊಳ್ಳಲೇ ಬೇಕಾಗಿ ಬಂತು. ಒಲ್ಲದ ಮನಸ್ಸಿನಿಂದಲೇ ಒಪ್ಪಿದ. ಆದರೆ ಡಾರ್ವಿನ್ ಜೊತೆ ಮಾತುಕತೆ ಮಾಡುತ್ತಿರಲಿಲ್ಲ. ಯಾವುದೇ ಜವಾಬ್ದಾರಿಯನ್ನೂ ಸಹ ನೀಡುತ್ತಿರಲಿಲ್ಲ.

ಅಂತು-ಇಂತು 1831 ಡಿಸೆಂಬರ್ 27 ಎಚ್. ಎಂ.ಎಸ್. ಬಿಗಲೆ ಸಮುದ್ರಯಾನ ಆರಂಭಿಸಿತು. ಅಟ್ಲಾಂಟಿಕ್ ಸಾಗರವನ್ನು ದಾಟಿ ಫೆಬ್ರುವರಿ 1832 ದ.ಅಮೇರಿಕಾದ ಬಹಿಯ ಪ್ರಾಂತ ತಲುಪಿತು ಸಾಗರ ಕಿನಾರೆಯ ಈ ಪ್ರದೇಶದಲ್ಲಿ ಡಾರ್ವಿನನಿಗೆ ಅಲ್ಲಿನ ಪ್ರಾಣಿ-ಪಕ್ಷಿ ಸಂಕುಲ, ಕ್ರಿಮಿ-ಕೀಟ, ಗಿಡ-ಮರಗಳ ಹಾಗೂ ತನ್ನೂರಿನ ಸಂಕುಲಗಳ ನಡುವಿನ ಭಿನ್ನತೆ ನೋಡಿ ಆಶ್ಚರ್ಯ ಹಾಗೂ ಸಂತೋಷವಾಯಿತು. ಉತ್ಸಾಹ ಇಮ್ಮಡಿಯಾಯಿತು. ಹಲವಾರು ತಿಂಗಳ ಅಧ್ಯಯನದ ಬಳಿಕ ಏಪ್ರಿಲ್ 1832 ರವೇಳೆಗೆ ನೌಕೆ ರಿಯೊಡಜನ್ಯೆರೋ ತಲುಪಿತು. ಅಲ್ಲಿ ಜನ ನಿಬಿಡ ಪ್ರದೇಶಗಳಲ್ಲಿ ಅಧ್ಯಯನ ನಡೆಸಲಾರಂಬಿಸಿದ. ಇಲ್ಲಿನ ಅಮಾನವೀಯ ಘಟನೆಯೊಂದು ತನ್ನ ಜೀವನದುದ್ದಕ್ಕೂ ಮರೆಯಲಾಗದ ನೋವನ್ನು ನೀಡಿತು. ಆ ನಗರದ ಬೀದಿ ಬೀದಿ ಗಳಲ್ಲಿ ಮನುಷ್ಯರನ್ನು ಪ್ರಾಣಿಗಳ ರೀತಿ [ಹಸುವಿನ ಬದಲಾಗಿ ಮನುಷ್ಯರನ್ನು ಗಾಡಿಗೆ, ಬೇಸಾಯಕ್ಕೆ ಕಟ್ಟಿ ಎಳೆಯುತ್ತಿದ್ದ ರೀತಿ, ಗುಲಾಮರಂತೆ ಸಂತೆಯಲ್ಲಿ ಮಾರಾಟ ಮಾಡುತ್ತಿದ್ದ ರೀತಿ] ಹೀನಾಯವಾಗಿ ಬಳಸುತ್ತಿದ್ದ ರೀತಿ ಈತನನ್ನು ಮಮ್ಮಲ ಮರುಗಿಸಿತು. ಇದೊಂದು ಮಾನವನ ನಾಗರೀಕತೆಗೆ ಮಸಿ ಬಳಿಯುವ ಪದ್ಧತಿ ಎಂದು ವಾದ ಮಾಡಿದ. ಬಹುಶಃ ಈ ದೃಶ್ಯವೇ ಕಾರ್ಲ್ ಮಾರ್ಕ್ಸನ ಜೊತೆ ಸರಣಿಯಾಗಿ ಸಂವಾದಿಸುವ ಚಿಂತನೆಯನ್ನು ನೀಡಿತೇನೋ. [ಮಾರ್ಕ್ಸ ಮತ್ತು ಡಾರ್ವಿನ್ ತಮ್ಮ ತಮ್ಮ ಅನಿಸಿಕೆ ಹಾಗೂ ಚಟುವಟಿಕೆಯ ಸಾರವನ್ನು ಸುಧೀರ್ಘವಾಗಿ ಹಂಚಿಕೊಂಡ ದಾಖಲೆಗಳಿವೆ. ಮಾತ್ರವಲ್ಲ ಜರ್ಮನ್ ಬಾಷೆಯೇ ಗೊತ್ತಿಲ್ಲದ ಡಾರ್ವಿನ್ನನ ಮುಖ್ಯ ಲೈಬ್ರರಿಯಲ್ಲಿ ದ ಕ್ಯಾಪಿಟಲ್ ಪುಸ್ತಕ ಇತ್ತು ಎಂದು ಡಾರ್ವಿನ್ನನ ಜೀವಸಂಕುಲಗಳ ಉಗಮವನ್ನು ಕನ್ನಡಕ್ಕೆ ಭಾಷಾಂತರಿಸಿದ ಜಿ.ಪುಟ್ಟಸ್ವಾಮಿ ತಮ್ಮ ಕೃತಿಯಲ್ಲಿ ನಮೂದಿಸಿದ್ದಾರೆ] ನಂತರ ಇಡೀ ದಕ್ಷಿಣ ಅಮೇರಿಕಾ ಸುತ್ತು ಹಾಕಿ ಬ್ರೆಝಿಲ್‌ನ ದುರ್ಗಮ ಅರಣ್ಯವನ್ನು ಸುತ್ತಾಡಿ ಅಲ್ಲಿದ್ದ ಜೀವ ಸಂಕುಲಗಳನ್ನೆಲ್ಲಾ ಅಭ್ಯಾಸ ಮಾಡಿದ. ಅಲ್ಲಿ ಸಿಕ್ಕ ಪಳೆಯುಳಿಕೆಗಳು ಮತ್ತು ಈಗಿನ ಬದುಕುಳಿದ ಜೀವಿಗಳ ಪಳೆಯುಳಿಕೆಗಳು ಒಂದಕ್ಕೊಂದು ಸಾಮ್ಯತೆ ಇರುವುದನ್ನು ಗುರುತಿಸಿದ. ಬೈಬಲ್‌ನಲ್ಲಿ ಹೇಳಿದ ಸೃಷ್ಟಿ ಸಿದ್ಧಾಂತದ ಮೇಲೆ ಬಲವಾದ ಅನುಮಾನ ಬರಲಾರಂಬಿಸಿತು. 1835 ಸೆಪ್ಟೆಂಬರ್ ವೇಳೆಗೆ ಗ್ಯಾಲಪಾಗಸ್ ದ್ವೀಪ ಸಮೂಹ ತಲುಪಿತು ಬಿಗಲೆ. ತನ್ನ ಇಡೀ ಸಂಶೋಧನೆಯ ಸಾಕ್ಷಿಗಳ ಮಹಾಪೂರವೇ ಇಲ್ಲಿ ದೊರೆಯಿತು. ವಿವಿಧ ಜಾತಿಗಳ ಕೀಟ ಸಮೂಹ, ಸಸ್ಯ ಸಂಕುಲ, ಹವಳದ ದಿಬ್ಬ, ಲಕ್ಷಾಂತರ ವರ್ಷಗಳ ಅತಿ ಪ್ರಾಚೀನ ಜೀವಿಗಳ ಪಳೆಯುಳಿಕೆಗಳ ಭಂಡಾರವೇ ಇಲ್ಲಿ ದೊರೆಯಿತು. ಬಹಳ ಎಚ್ಚರಿಕೆಯಿಂದ ಎಲ್ಲವನ್ನು ಅಧ್ಯಯನ ಮಾಡಿ ಪಟ್ಟಿ ಮಾಡಿಬರೆದುಕೊಂಡ. ಸಿಕ್ಕ ಪಳೆಯುಳಿಕೆಗಳನ್ನೆಲ್ಲಾ ಆರಿಸಿಕೊಂಡ. ಕಲಾವಿದರ ಸಹಾಯದಿಂದ ಚಿತ್ರ ಸಹ ಬರೆಸಿಕೊಂಡ. ಇವನ ಶ್ರದ್ಧೆ, ಶಿಸ್ತು, ಸಂಯಮ, ಆಸಕ್ತಿ, ಸಂಗ್ರಹಣೆ ಹಾಗೂ ನಿರೂಪಣಾ ಸಾಮರ್ಥ್ಯ ನೋಡಿ ಇಡೀ ತಂಡ ಮಂತ್ರ ಮುಗ್ಧತೆಯಿಂದ ಸಮ್ಮೋಹಗೊಂಡು ಅವನಲ್ಲೇ ಲೀನವಾಗಿತ್ತು. ಯಾತ್ರೆಯ ಕ್ಯಾಪ್ಟನ್ ಡಾರ್ವಿನ್ನನ ಅಕ್ಷರಶಃ ಅಭಿಮಾನಿಯೇ ಆಗಿಹೋಗಿದ್ದ. ಗ್ಯಾಲಪಾಗಸ್ ದ್ವೀಪದಲ್ಲಿನ ಹಸಿರು ಕಾಡು ಅದರಲ್ಲಿನ ಚಿತ್ರ-ವಿಚಿತ್ರ ಕೀಟ, ಪಕ್ಷಿ ಸಂಕುಲಗಳು ಡಾವಿನ್ನನನ್ನು ಬೆಕ್ಕಸ ಬೆರಗಾಗಿಸಿ, ಬೈಬಲ್ ಒಂದು ಸುಳ್ಳಿನ ಕಂತೆ ಎಂದು ಬೊಟ್ಟು ಮಾಡಿ ಜಗತ್ತಿಗೆ ತೋರಿಸಿದ. ಅಲ್ಲಿನ ಪ್ರಕೃತಿ ಅಧ್ಯಯನ ನಡೆಸಿ ಜೀವ ಪ್ರಬೇಧಗಳ ಸೃಷ್ಠಿಯಲ್ಲಿ ಪರಿಸರದ ಪಾತ್ರ ಗ್ರಹಿಸಿದ. ನ್ಯೂಜಿಲ್ಯಾಂಡ್, ಆಸ್ರೇಲಿಯಾದ ಕಾಡುಗಳನ್ನೆಲ್ಲಾ ಜಾಲಾಡಿ ಅಗಾಧ ಪ್ರಮಾಣದಲ್ಲಿ ಸಾಕ್ಷಿಗಳನ್ನು ಹೊತ್ತುಕೊಂಡು ಬಿಗಲೆ 1836 ಅಕ್ಟೋಬರ್ 3ನೇ ತಾರೀಕು ಬ್ರಿಟನಿಗೆ ಹಿಂತಿರುಗಿತು.

5 ವರ್ಷಗಳ ಈ ವಿಶ್ವ ಪರ್ಯಟನೆಯಲ್ಲಿ ಡಾರ್ವಿನ್ ಸಾಧಾರಣ ಬಿ.ಎ. ಪದವೀದರ ಹೋಗಿ ಮಹಾನ್ ಮೇಧಾವಿ ವಿಜ್ಞಾನಿಯಾಗಿ ರೂಪುಗುಂಡಿದ್ದ. ಯಾತ್ರೆಯ ಅಪ್ಪಟ ಮಹಾ ಮೂಢ ಕ್ಯಾಪ್ಟನ್ ಫ್ರಿಡ್‌ಮನ್ ಡಾರ್ವಿನ್ ವಿಷಯವಾಗಿ ತಾನು ಅವೈಜ್ಞಾನಿಕವಾಗಿ ಜಗಳವಾಡಿದ್ದ ಡಾ.ಹನ್ಸ್‌ಲೋ ರವರಿಗೆ ಕೃತಜ್ಞತೆ ಹೇಳಿ "ನಾನು ನನ್ನ ಅವಿವೇಕಿತನಕ್ಕೆ ಶರಣಾಗಿ ಸೋಲದಿದ್ದಿದ್ದರೆ ಇಂತಹ ಮಹಾನ್ ಪರ್ಯಟನೆಯ ಸಾರ್ಥಕತೆಯನ್ನು ಅಟ್ಲಾಂಟಿಕ್ ಸಾಗರದ ತಳ ಸೇರಿಸಿಬಿಡುತ್ತಿದ್ದೆ. ನನ್ನನ್ನೆಂದೂ ನಾನು ಕ್ಷಮಿಸಿಕೊಳ್ಳಲು ಸಾಧ್ಯವಿರುತ್ತಿರಲಿಲ್ಲ, ಇತಿಹಾಸವೂ ಕ್ಷಮಿಸುತ್ತಿರಲಿಲ್ಲ. ನನ್ನ ಜೀವಮಾನದ ಅತ್ಯಂತ ಸಾರ್ಥಕದ ಪರ್ಯಟನೆ ಮಾಡಿ ನನ್ನ ಹೆಸರನ್ನು ಚಿರಸ್ಥಾಯಿಯಾಗಿಸಿದ ಡಾರ್ವಿನನೇ ನನ್ನ ಕ್ಯಾಪ್ಟನ್" ಎಂದು ಮಾರ್ಮಿಕವಾಗಿ ನುಡಿದಿದ್ದಾನೆ.

(ಮುಂದಿನ ಭಾಗದಲ್ಲಿ ಸಂಶೋಧನೆ-ಸಾಧನೆ ಬಗೆಗೆ)





ಲೋಕಸಭೆ ಮತ್ತು ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆಗಳ ಗೀಳು ಪ್ರಜಾಪ್ರಭುತ್ವದ ಮೇಲೆ ಇನ್ನೊಂದು ಪ್ರಹಾರ

ಚುನಾಯಿತ ಸದನಕ್ಕೆ ಒಂದು ಅಚಲ ಅವಧಿಯಿರಬೇಕು ಮತ್ತು ಸರಕಾರಕ್ಕೆ ಸ್ಥಿರತೆಯಿರಬೇಕು ಎನ್ನುವುದು ನವ-ಉದಾರವಾದಿ ವ್ಯವಸ್ಥೆಗೆ ಅನುರೂಪವಾಗಿರುವ ಒಂದು ಗೀಳು.

ಭಾರತ ರಾಜಕೀಯ ವೈವಿಧ್ಯತೆ ಇರುವ ಒಂದು ವಿಶಾಲ ದೇಶ. ಇಲ್ಲಿ ರಾಜಕೀಯ ಪ್ರಜಾಪ್ರಭುತ್ವ ತಾಳಿಕೆ ಪಡೆಯಬೇಕಾದರೆ ಅದು ಒಂದು ಒಕ್ಕೂಟ ವ್ಯವಸ್ಥೆಯೊಳಗೆ ಮಾತ್ರವೇ ಸಾಧ್ಯ.

"ಒಂದು ದೇಶ, ಒಂದು ಸಂಸ್ಕೃತಿ, ಒಂದು ಭಾಷೆ" ಇರಬೇಕೆನ್ನುವ ಬಿಜೆಪಿಯ "ಒಂದು ದೇಶ, ಒಂದು ಚುನಾವಣೆ" ಎಂಬುದು ಕೇಂದ್ರೀಕೃತ ಸರ್ವಾಧಿಕಾರಶಾಹಿಯನ್ನು ತರುವ ಘೋಷಣೆಯಷ್ಟೇ.



ಪ್ರಕಾಶ ಕಾರಟ್

ಪ್ರಧಾನ ಮಂತ್ರಿಗಳು ಮತ್ತು ಬಿಜೆಪಿ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆಗಳನ್ನು ಜಾರಿಗೆ ತರುವ ಆತುರದಲ್ಲಿದ್ದಾರೆ. ರಾಷ್ಟ್ರಪತಿಗಳು ಸಂಸತ್ತನ್ನು ಉದ್ದೇಶಿಸಿ ಮಾಡಿದ ತಮ್ಮ ಭಾಷಣದಲ್ಲಿ ಏಕಕಾಲದಲ್ಲಿ ಚುನಾವಣೆಯ ಬಗ್ಗೆ ಒಂದು ನಿರಂತರ ಚರ್ಚೆ ನಡೆಸಬೇಕು, ಅದರಿಂದ ರಾಜಕೀಯ ಪಕ್ಷಗಳು ಈ ಪ್ರಶ್ನೆಯ ಮೇಲೆ ಒಂದು ಒಮ್ಮತಕ್ಕೆ ಬರಲು ಸಾಧ್ಯವಾಗಬೇಕು ಎಂದಿದ್ದಾರೆ.

ಆಗಾಗ ಚುನಾವಣೆಗಳನ್ನು ನಡೆಸುವುದು ದೇಶದ ಖಜಾನೆಯ ಮೇಲೆ ಅಪಾರ ಖರ್ಚಿನ ಹೊರೆ ಹಾಕುತ್ತದೆಯಾದ್ದರಿಂದ ಚುನಾವಣೆಗಳು ಏಕಕಾಲದಲ್ಲೇ ನಡೆಯಬೇಕೆಂಬುದು ಇಂತವರ ತರ್ಕ. ಚುನಾವಣೆಗಳ ಮೊದಲು ಬರುವ 'ಮಾದರಿ ನೀತಿ ಸಂಹಿತೆ' ಅಭಿವೃದ್ಧಿ ಚಟುವಟಿಕೆಗಳಿಗೆ ಅಡ್ಡಿಯುಂಟು ಮಾಡುತ್ತವೆ ಎಂದೂ ವಾದಿಸಲಾಗುತ್ತಿದೆ. ಅಲ್ಲದೆ, ಪ್ರತಿವರ್ಷ ಚುನಾವಣೆಗಳ ಸರಣಿ ಮಾನವ ಸಂಪನ್ಮೂಲಗಳ ಮೇಲೂ ಭಾರೀ ಹೊರೆ ಎನ್ನಲಾಗುತ್ತಿದೆ.

ಸಂಸತ್ತಿಗೆ ಮತ್ತು ರಾಜ್ಯ ವಿಧಾನಸಭೆಗೆ ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸಬೇಕೆಂಬುದನ್ನು ವಿರೋಧಿಸುವ ತರ್ಕಗಳು ತಾಂತ್ರಿಕ ಸ್ವರೂಪದವುಗಳಲ್ಲ, ಅಥವ ಅದು ಕಾರ್ಯಸಾಧ್ಯವಲ್ಲ ಎಂಬುದಕ್ಕೂ ಅಲ್ಲ. ಇದು ಮೂಲಭೂತವಾಗಿ ಪ್ರಜಾಪ್ರಭುತ್ವ –ವಿರೋಧಿ ಮತ್ತು ಸಂದೀಯ ಪ್ರಜಾಪ್ರಭುತ್ವದ ಬುಡಕ್ಕೇ ಪ್ರಹಾರ ಮಾಡುವಂತದ್ದು ಎಂಬುದೇ ಪ್ರಧಾನ ಆಕ್ಷೇಪ.

ಲೋಕಸಭೆಗೆ ಮತ್ತು ರಾಜ್ಯ ವಿಧಾನ ಸಭೆಗಳಿಗೆ ಚುನಾವಣೆಗಳು ಒಟ್ಟಿಗೇ ನಡೆಸುವುದೆಂದರೆ ಸರಕಾರಗಳು ಶಾಸಕಾಂಗಕ್ಕೆ ಜವಾಬುದಾರರಾಗಿರಬೇಕು ಎಂಬ ಸಂವಿಧಾನಿಕ ವ್ಯವಸ್ಥೆಯನ್ನು ಕೆಡಿಸಿದಂತಾಗುತ್ತದೆ. ಸಂವಿಧಾನದ ಪ್ರಕಾರ ಒಂದು ಸರಕಾರ ಅವಿಶ್ವಾಸ ನಿಲುವಳಿಯಲ್ಲಿ ಸೋತರೆ, ಅಥವ ಒಂದು ಮಸೂದೆಗೆ ಬಹುಮತ ಪಡೆಯದಿದ್ದರೆ ರಾಜೀನಾಮೆ ಕೊಡಬೇಕಾಗುತ್ತದೆ. ಆಗ ಪರ್ಯಾಯ ಸರಕಾರ ರಚಿಸುವುದು ಸಾಧ್ಯವಿಲ್ಲದಿದ್ದರೆ, ಸದನವನ್ನು ವಿಸರ್ಜಿಸಿ ಮಧ್ಯಂತರ ಚುನಾವಣೆ ನಡೆಸಬೇಕು. ಸಂವಿಧಾನದಲ್ಲಿ ಲೋಕಸಭೆಗೆ ಅಥವ ರಾಜ್ಯ ವಿಧಾನ ಸಭೆಗಳಿಗೆ ಒಂದು ಅಚಲ ಅವಧಿಯನ್ನು ಪ್ರತಿಷ್ಠಾಪಿಸಿಲ್ಲ.

ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸಲು ಸಂವಿಧಾನದಲ್ಲಿ ತಿದ್ದುಪಡಿಗೆ ವಿವಿಧ ಸಲಹೆ-ಸೂಚನೆಗಳನ್ನು ಕೊಡಲಾಗುತ್ತಿದೆ. ಅವುಗಳಲ್ಲಿ ನೀತಿ ಆಯೋಗ ಬಿಡುಗಡೆ ಮಾಡಿದ ಚರ್ಚಾ ಪ್ರಬಂಧದಲ್ಲಿ ಸಲಹೆ ಮಾಡಿರುವ ಒಂದು ಸಲಹೆ ಹೀಗಿದೆ: ಲೋಕಸಭೆಯನ್ನು ವಿಸರ್ಜಿಸಲು ಸಾಧ್ಯವಿಲ್ಲದಿದ್ದರೆ, ಮತ್ತು ಲೋಕಸಭೆಯ ಉಳಿದ ಅವಧಿ ಸಾಕಷ್ಟು ದೀರ್ಘವಿಲ್ಲದಿದ್ದರೆ, ಆಗ ರಾಷ್ಟ್ರಪತಿಗಳು ದೇಶದ ಆಡಳಿತವನ್ನು ಅವರು ನೇಮಿಸುವ ಒಂದು ಮಂತ್ರಿಮಂಡಳದ ನೆರವಿನಿಂದ ಮುಂದಿನ ಸದನವನ್ನು ರಚಿಸುವ ವರೆಗೆ ಮುಂದುವರೆಸಿಕೊಂಡು ಹೋಗಲು ವ್ಯವಸ್ಥೆ ಕಲ್ಪಿಸಬಹುದು. ಈ ಘಾತುಕ ಪ್ರಸ್ತಾವ ರಾಷ್ಟ್ರಪತಿಗಳನ್ನು ಕಾರ್ಯಾಂಗದ ಮುಖ್ಯಸ್ಥರನ್ನಾಗಿ ಮಾಡುತ್ತದೆ. ಇದು ಹಿಂಬಾಗಿಲಿನಿಂದ ಕಾರ್ಯಕಾರಿ ರಾಷ್ಟ್ರಪತಿಯನ್ನು ತರುವ ಪ್ರಯತ್ನ.

ಇದರ ಒಂದು ಉಪ ಸಲಹೆ ಎಂದರೆ, ಸದನದ ವಿಸರ್ಜನೆಯ ವೇಳೆಯಲ್ಲಿ ಉಳಿದ ಅವಧಿ ಬಹಳ ದೀರ್ಘವಿದ್ದರೆ, ಹೊಸ ಚುನಾವಣೆಗಳನ್ನು ನಡೆಸಬೇಕು, ಆದರೆ ಅದರ ಅವಧಿ ಹಿಂದಿನ ಸದನದ ಉಳಿದ ಅವಧಿಯಾಗಿರುತ್ತದೆ. ಅಂದರೆ , ಉದಾಹರಣೆಗೆ, ಸದನದ ವಿಸರ್ಜನೆ ನಡೆಯುವಾಗ ಅದಕ್ಕೆ ಎರಡು ವರ್ಷಗಳಾಗಿದ್ದರೆ, ಚುನಾವಣೆ ಉಳಿದ ಮೂರು ವರ್ಷಗಳ ಅವಧಿಗೆ ಮಾತ್ರ ನಡೆಯುತ್ತದೆ. ಅಂದರೆ,ಮೂರು ವರ್ಷಗಳಲ್ಲೇ ಮತ್ತೊಂದು ಚುನಾವಣೆ ನಡೆಯಬೇಕು. ಇದರಿಂದ ಲೋಕಸಭಾ ಚುನಾವಣೆಗಳ ಸಂಖ್ಯೆ ಹೆಚ್ಚುತ್ತದೆ, ಇದು ಯಾವ ಕಾರಣಕ್ಕೆ ಏಕಕಾಲಕ್ಕೆ ಚುನಾವಣೆಗಳು ನಡೆಯಬೇಕು ಎಂದು ಪ್ರತಿಪಾದಿಸಲಾಗುತ್ತೋ ಆ ಉದ್ದೇಶವನ್ನೇ ವಿಫಲಗೊಳಿಸುತ್ತದೆ.

ಅದೇ ರೀತಿಯಲ್ಲಿ ರಾಜ್ಯ ವಿಧಾನಸಭೆಯ ವಿಸರ್ಜನೆಯ ಅಗುವಾಗ ಅದರ ಅವಧಿಯ ಬಹುಪಾಲು ಮುಗಿದು ಹೋಗಿದ್ದರೆ, ಉಳಿದ ಅವಧಿಯಲ್ಲಿ ರಾಜ್ಯಪಾಲರು ರಾಜ್ಯವನ್ನು ನಡೆಸುತ್ತಾರೆ . ಅಂದರೆ ಕೇಂದ್ರ ಸರಕಾರದ ಆಳ್ವಿಕೆಯೆಂದು ಅರ್ಥ.

ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳ ಚುನಾವಣೆಗಳನ್ನು ಒಟ್ಟಿಗೆ ನಡೆಸುವುದಕ್ಕೆ ಪ್ರಸ್ತಾವಿಸಿರುವ ಇನ್ನೊಂದು ದಾರಿಯೆಂದರೆ, ಕೆಲವು ವಿದಾನಸಭೆಗಳ ಅವಧಿಯನ್ನು ವಿಸ್ತರಿಸುವುದು, ಅಥವ ಇನ್ನು ಕೆಲವು ವಿಧಾನಸಭೆಗಳ ಅವಧಿಯನ್ನು ಕಡಿತ ಮಾಡುವುದು. ಉದಾಹರಣೆಗೆ, ನೀತಿ ಆಯೋಗದ ಪ್ರಸ್ತಾವದ ಪ್ರಕಾರ ತ್ರಿಪುರಾ ವಿಧಾನಸಭೆಯ ಅವಧಿಯಲ್ಲಿ 15 ತಿಂಗಳ ಕಡಿತಮಾಡಬೇಕು ಮತ್ತು ಇನ್ನೊಂದೆಡೆಯಲ್ಲಿ ಪ್ರಸಕ್ತ ಬಿಹಾರ ವಿಧಾನಸಭೆಯ ಅವಧಿಯನ್ನು 13 ತಿಂಗಳು ವಿಸ್ತರಿಸಬೇಕು. ವಿಧಾನಸಭೆಯ ಅವಧಿಯನ್ನು ಕಡಿತ ಮಾಡುವುದಾಗಲೀ, ವಿಸ್ತರಿಸುವುದಾಗಲೀ, ಎರಡೂ ಅತ್ಯಂತ ಪ್ರಜಾಪ್ರಭುತ್ವ-ವಿರೋಧಿ ಕ್ರಮ, ಇದು ತಮ್ಮ ಶಾಸಕರನ್ನು ಆರಿಸುವ ನಾಗರಿಕರ ಮೂಲ ಹಕ್ಕಿನ ಉಲ್ಲಂಘನೆಯಾಗುತ್ತದೆ.

ಶಾಸನ ಸಭೆಗಳಿಗೆ ಕಾರ್ಯಾಂಗದ ಜವಾಬುದಾರಿಕೆಯನ್ನು ನಿರ್ಬಂಧಿಸಲು ಮತ್ತು ಸದನದ ಅವಧಿಯನ್ನು ಅಚಲಗೊಳಿಸಲು ವಿವಿಧ ಕಾರ್ಯತಂತ್ರಗಳನ್ನು ಮುಂದಿಡಲಾಗುತ್ತಿದೆ. ಇವುಗಳಲ್ಲಿ ಒಂದು- ಅವಿಶ್ವಾಸ ನಿಲುವಳಿಯೊಂದನ್ನು ಮಂಡಿಸುವಾಗ, ಅದರ ಜೊತೆಗೇ ಸದನದ ಹೊಸ ಮುಖಂಡನನ್ನು ಚುನಾಯಿಸುವ ನಿಲುವಳಿಯನ್ನು ಕೂಡ ಮಂಡಿಸಬೇಕು ಎಂದು. ಇದರ ಅರ್ಥ ಒಂದು ಸರಕಾರವನ್ನು ಮತ ಚಲಾಯಿಸಿ ಇಳಿಸಬಹುದಾದ ಶಾಸಕರ ಹಕ್ಕನ್ನು ಅವರು ಹೊಸದೊಂದು ಸರಕಾರವನ್ನು ಚುನಾಯಿಸಬೇಕು ಎಂಬ ಶರತ್ತಿಗೆ ಒಳಪಡಿಸಲಾಗುತ್ತದೆ.

ಸದನಕ್ಕೊಂದು ಅಚಲ ಅವಧಿಯಿರಬೇಕು ಮತ್ತು ಸ್ಥಿರತೆಯಿರಬೇಕು ಎನ್ನುವುದು ನವ-ಉದಾರವಾದಿ ವ್ಯವಸ್ಥೆಗೆ ಅನುರೂಪವಾಗಿರುವ ಒಂದು ಗೀಳು.

ಯಾವುದೇ ಸರಕಾರವನ್ನು ಮತದಾನದ ಮೂಲಕ ಕೆಳಗಿಳಿಸುವ ಚುನಾಯಿತ ಶಾಸಕರು ಮತ್ತು ಲೋಕಸಭೆಯ ಸದಸ್ಯರ ಹಕ್ಕನ್ನು ನಿರ್ಬಂಧಿತಗೊಳಿಸುವುದು ಸಾಧ್ಯವಿಲ್ಲ, ಮತ್ತು ಸದನದಲ್ಲಿ ಸ್ಥಿರ ಬಹುಮತವನ್ನು ಪಡೆದಿರುವ ಒಂದು ಆಳುವ ಪಕ್ಷ ಸದನವನ್ನು ವಿಸರ್ಜಿಸಿ ಅವಧಿಗಿಂತ ಮೊದಲು ಚುನಾವಣೆ ನಡೆಸಬೇಕು ಎಂದು ಶಿಫಾರಸು ಮಾಡುವ ಅದರ ಹಕ್ಕನ್ನು ಕೂಡ ಕಡಿತ ಮಾಡಲು ಸಾಧ್ಯವಿಲ್ಲ.

ಭಾರತ ರಾಜಕೀಯ ವೈವಿಧ್ಯತೆ ಇರುವ ಒಂದು ವಿಶಾಲ ದೇಶ. ಇಲ್ಲಿ ರಾಜಕೀಯ ಪ್ರಜಾಪ್ರಭುತ್ವ ತಾಳಿಕೆ ಪಡೆಯಬೇಕಾದರೆ ಅದು ಒಂದು ಒಕ್ಕೂಟ ವ್ಯವಸ್ಥೆಯೊಳಗೆ ಮಾತ್ರವೇ ಸಾಧ್ಯ.

ಬಿಜೆಪಿ "ಒಂದು ದೇಶ, ಒಂದು ಸಂಸ್ಕೃತಿ, ಒಂದು ಭಾಷೆ" ಯಲ್ಲಿ ನಂಬಿಕೆಯಿಟ್ಟಿರುವ ರೀತಿಯಲ್ಲೇ "ಒಂದು ದೇಶ, ಒಂದು ಚುನಾವಣೆ" ಎಂಬುದು ಅದರ ಘೋಷವಾಕ್ಯವಾಗಿದೆ. ಸಂವಿಧಾನದಲ್ಲಿ ಕೈಯಾಡಿಸುವ ಏಕಕಾಲದಲ್ಲಿ ಚುನಾವಣೆಯ ಪರಿಕಲ್ಪನೆ ಕೇಂದ್ರೀಕೃತ ಸರ್ವಾಧಿಕಾರಶಾಹಿಯನ್ನು ಪ್ರೋತ್ಸಾಹಿಸುತ್ತದಷ್ಟೇ. ಇದನ್ನು ಖಡಾಖಂಡಿತವಾಗಿ ವಿರೋಧಿಸಬೇಕು.

ಎಫ್‌ಸಿಆರ್‌ಎ ಉಲ್ಲಂಘನೆಯ ಶಿಕ್ಷೆಯಿಂದ ಪಾರಾಗಲು ತಿದ್ದುಪಡಿ- ಯೆಚುರಿ

ಪುಟ 2 ರಿಂದ

ಹಣಕಾಸು ಕಾಯ್ದೆಯಲ್ಲಿ ಚುನಾವಣಾ ಬಾಂಡ್‌ನ ಪರಿಕಲ್ಪನೆಯನ್ನು ಸೇರಿಸಲು ನಾಲ್ಕು ಶಾಸನಗಳನ್ನು, ಭಾರತ ರಿಝರ್ವ್ ಬ್ಯಾಂಕ್ ಕಾಯ್ದೆ 1934, ಜನತಾ ಪ್ರಾತಿನಿಧ್ಯ ಕಾಯ್ದೆ, 1951, ಆದಾಯ ತೆರಿಗೆ ಕಾಯ್ದೆ, 1961 ಮತ್ತು ಕಂಪನಿ ಕಾಯ್ದೆ, 2013ನ್ನು ತಿದ್ದುಪಡಿ ಮಾಡಿತು. ಇದು ಜನವರಿ 2 ರಂದು ಒಂದು ಅಧಿಸೂಚನೆಯ ಮೂಲಕ ಜಾರಿಗೆ ಬಂದಿದೆ.

ಕಾರ್ಪೊರೇಟ್ ವಂತಿಗೆ ನಿಷೇಧಿಸದೆ ಭ್ರಷ್ಟಾಚಾರದ ವಿರುದ್ಧ ಹೋರಾಟ ಅಸಾಧ್ಯ

ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್ ವಂತಿಗೆಗಳನ್ನು ನಿಷೇಧಿಸಬೇಕು ಎಂದು ಯೆಚುರಿ ಪತ್ರಿಕಾ ಸಮ್ಮೇಳನದಲ್ಲಿ ಸಿಪಿಐ(ಎಂ)ನ ನಿಲುವನ್ನು ಪುನರುಚ್ಚರಿಸುತ್ತ ಆಗ್ರಹಿಸಿದರು. ಕಾಂಗ್ರೆಸ್ ಮತ್ತು ಬಿಜೆಪಿ ಇವೆರಡೂ ತಮಗೆ ಸಿಕ್ಕಿದ ಅಧಿಕಾರವನ್ನು ತಮ್ಮ 'ಗೆಳೆಯ' ಕಾರ್ಪೊರೇಟ್‌ಗಳಿಗೆ ಅನುಕೂಲವಾಗುವ ಧೋರಣೆಗಳನ್ನು ರೂಪಿಸಲು ಬಳಸಿವೆ, ಈ ಕಾರ್ಪೊರೇಟ್ ವಂತಿಗೆಗಳೇ ನಮ್ಮ ವ್ಯವಸ್ಥೆಯನ್ನು ಕೊರೆಯುತ್ತಿರುವ ಭ್ರಷ್ಟಾಚಾರಕ್ಕೆ ಆಹಾರ ಪೂರೈಸುವಂತದ್ದು, ಆದ್ದರಿಂದ ಕಾರ್ಪೊರೇಟ್ ವಂತಿಗೆಗಳನ್ನು ನಿಷೇಧಿಸದೆ ಈ ಸಮಸ್ಯೆಗೆ ಪರಿಹಾರ ಸಾಧ್ಯವಿಲ್ಲ ಎಂದು ಅವರು ಹೇಳಿದರು.

ಈಗ ಜಾರಿಗೆ ಬಂದಿರುವ ಚುನಾವಣಾ ಬಾಂಡಂತೂ ಈ ಭ್ರಷ್ಟಾಚಾರವನ್ನು ಕಾನೂನುಬದ್ಧಗೊಳಿಸುವ ಕ್ರಮ ಎಂದು ಅವರು ಹೇಳಿದರು. ಈ ಹಿಂದೆ ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್ ವಂತಿಗೆಯ ಮೇಲೆ ಮಿತಿಯಿತ್ತು. ಅವು ಹಿಂದಿನ ಮೂರು ವರ್ಷಗಳ ಲಾಭಗಳ 7% ದಷ್ಟು ಮಾತ್ರ ಕೊಡಬಹುದಾಗಿತ್ತು. ಆದರೆ ಈಗ ಇಂತಹ ಯಾವ ಮಿತಿಯೂ ಇಲ್ಲ, ಅಲ್ಲದೆ ವಿದೇಶಿ ಕಂಪನಿಗಳು ಕೂಡ ನೀಡಬಹುದು. ಈ ಬಾಂಡನ್ನು ಯಾರು ಯಾರಿಗೆ ನೀಡಿದ್ದಾರೆ ಎಂದು ತಿಳಿಸಬೇಕಾಗಿಲ್ಲ. ಇದು ಕಪ್ಪು ಹಣವನ್ನು ಬಿಳಿ ಮಾಡಲೆಂದೇ ರಚಿಸುವ 'ಶೆಲ್'' ಕಂಪನಿಗಳು ಹೆಚ್ಚಲು ಅವಕಾಶ ಕಲ್ಪಿಸುತ್ತದೆಯೇ ವಿನಹ ಮೋದಿ ಸರಕಾರ ಹೇಳುವಂತೆ ರಾಜಕೀಯ ವಂತಿಗೆಗಳ ಪಾರದರ್ಶಕತೆಯನ್ನು ಖಂಡಿತಾ ಹೆಚ್ಚಿಸುವುದಿಲ್ಲ. ಆದ್ದರಿಂದಲೇ ರಾಜ್ಯಸಭೆ ಯೆಚುರಿ ಮತ್ತಿತರರ ಮುತುವರ್ಜಿಯಿಂದ ಇದಕ್ಕೆ 5 ತಿದ್ದುಪಡಿಗಳನ್ನು ಸೂಚಿಸಿತು. ಆದರೆ ಇದನ್ನು ಬೇಕೆಂದೇ 'ಹಣದ ಮಸೂದೆ'(ಮನಿ ಬಿಲ್) ಎಂದು ಮಂಡಿಸಿದ್ದರಿಂದ ಲೋಕಸಭೆ ಈ ತಿದ್ದುಪಡಿಗಳನ್ನು ಗಮನಕ್ಕೆ ತೆಗೆದುಕೊಳ್ಳದಿರಲು ಸಾಧ್ಯವಾಯಿತು. ಮೇಲೆ ಹೇಳಿದಂತೆ ಈ ಜನವರಿ 2ರಿಂದ ಒಂದು ಅಧಿಸೂಚನೆಯ ಮೂಲಕ ಅದು ಜಾರಿಗೆ ಬಂದಿದೆ.

ಚುನಾವಣಾ ಬಾಂಡ್ ಇಲ್ಲದೆಯೇ 2016-17ರಲ್ಲಿ ಕಾರ್ಪೊರೇಟ್ ವಂತಿಗೆಗಳಲ್ಲಿ 89% ಈಗಿನ ಆಳುವ ಪಕ್ಷ ಬಿಜೆಪಿಗೆ ಹೋಗಿದೆ ಎಂಬ ಸುದ್ದಿ ಇತ್ತೀಚೆಗೆ ಬಂದಿದೆ. ಜತೆಗೆ ಕಳೆದ ವರ್ಷ ಉತ್ಪತ್ತಿಯಾದ ಸಂಪತ್ತಿನಲ್ಲಿ 73% ಕೇವಲ 1% ಅತ್ಯಂತ ಶ್ರೀಮಂತರ ಪಾಲಾಗಿದೆ ಎಂಬ ಸುದ್ದಿಯೂ ಬಂದಿದೆ. ಅಲ್ಲದೆ ಕಳೆದ ಮೂರುವರ್ಷಗಳಲ್ಲಿ 2ಲಕ್ಷ ಕೋಟಿ ರೂ.ಗಳಷ್ಟು ಕಾರ್ಪೊರೇಟ್ ಸಾಲಬಾಕಿಗಳನ್ನು ಲೆಕ್ಕದಿಂದ ತೆಗೆದು ಹಾಕಲಾಗಿದೆ. ಇದು ಅತ್ಯಂತ ಕೆಟ್ಟ ರೀತಿಯ ಚಮಚಾ ಬಂಡವಾಳಶಾಹಿಗೆ ಅನುವು ಮಾಡಿಕೊಡುತ್ತದೆ ಎಂಬವಾದ ಇದರಿಂದ ನಿಜವಾಗಿದೆ. ಚುನಾವಣಾ ಬಾಂಡ್ ಇದನ್ನು ಮತ್ತಷ್ಟು ಹೊಲಸಾಗಿಸುತ್ತದೆ ಎಂದು ಯೆಚುರಿ ಆತಂಕ ವ್ಯಕ್ತಪಡಿಸಿದರು.

"ಇದರ ಒಟ್ಟು ಪರಿಣಾಮವೆಂದರೆ, ವಿದೇಶಿ ಒಡೆತನದ ಕಂಪನಿಯೂ ಸೇರಿದಂತೆ, ಯಾವುದೇ ನೈಸರ್ಗಿಕ ಅಥವ ಕಾನೂನು ಗುರುತಿಸುವ ವ್ಯಕ್ತಿ, ಭಾರತದಲ್ಲಿನ ಒಂದು ರಾಜಕೀಯ ಪಕ್ಷಕ್ಕೆ ಯಾವುದೇ ಮಿತಿಯಿಲ್ಲದೆ, ಮತ್ತು ವಂತಿಗೆ ನೀಡಿದವರ ಮತ್ತು ವಂತಿಗೆ ಪಡೆದ ರಾಜಕೀಯ ಪಕ್ಷದ ಹೆಸರನ್ನು ತಿಳಿಸದೆಯೇ ಹಣಕಾಸು ಒದಗಿಸಬಹುದಾಗಿದೆ. ಇದು ಆಳುವ ಪಕ್ಷ ಯಾವುದೇ ರೀತಿಯ ವ್ಯಕ್ತಿ, ಸಂಸ್ಥೆಗಳೊಂದಿಗೆ ಎಲ್ಲ ರೀತಿಯ ಪ್ರತಿಫಲದ ವ್ಯವಸ್ಥೆಗಳನ್ನು ಮಾಡಿಕೊಳ್ಳಲು ಒಂದು ಪಕ್ವವಾದ ದಾರಿ" ಎಂದು ಈ ಕುರಿತ ಸಿಪಿಐ(ಎಂ) ಹೇಳಿಕೆ ವರ್ಣಿಸಿದೆ.

ಚುನಾವಣಾ ಬಾಂಡ್ ಎರಡು ರೀತಿಗಳಲ್ಲಿ ಸಂವಿಧಾನಕ್ಕೆ ಸವಾಲು ಹಾಕಿದೆ ಎಂದು ಸಿಪಿಐ(ಎಂ)ನ ಅರ್ಜಿ ಹೇಳಿದೆ. ಸಂವಿಧಾನದ ಕಲಮು 19ರಲ್ಲಿರುವ 'ತಿಳಿಯುವ ಹಕ್ಕ'ನ್ನು ಬದಿಗೊತ್ತಿದೆ, ಆಮೂಲಕ ಕಲಮು 14ನ್ನು ಉಲ್ಲಂಘಿಸಿದೆ. ಅಲ್ಲದೆ, ಇದನ್ನು ಕುರಿತ ಮಸೂದೆಯನ್ನು 'ಹಣಕಾಸು ಮಸೂದೆ' ಎಂದು ಅದನ್ನು ಪಾಸು ಮಾಡಿಸಿಕೊಂಡು ಸಂವಿಧಾನವನ್ನು ವಂಚಿಸಿದೆ, ಏಕೆಂದರೆ ಸಂವಿಧಾನದ ಕಲಮು 110 ರ ಪ್ರಕಾರ ಇದು ಹಣಕಾಸು ಮಸೂದೆಯಾಗಲು ಸಾಧ್ಯವಿಲ್ಲ ಎಂದು ಸೀತಾರಾಂ ಯೆಚುರಿ ವಿವರಿಸಿದರು. ಇದು ಸಂವಿಧಾನದ ಉಲ್ಲಂಘನೆ ಎಂದು ಸಾರಬೇಕೆಂಬುದೂ ಸಿಪಿಐ(ಎಂ) ಸುಪ್ರಿಂ ಕೋರ್ಟನ್ನು ಕೇಳಿದೆ.


ಯೆಚುರಿಯವರು ಈ ಪತ್ರಿಕಾಸ ಮ್ಮೇಳನದಲ್ಲಿ 2005ರಿಂದ 2010ರ ನಡುವೆ ಬಿಜೆಪಿ ಮತ್ತು ಕಾಂಗ್ರೆಸಿಗೆ ವಿದೇಶಿ ವಂತಿಗೆಗಳ ಪಟ್ಟಿಯನ್ನೂ ಬಿಡುಗಡೆ ಮಾಡಿದರು.

ಚುನಾವಣಾ ಸುಧಾರಣೆಯ ಅಗತ್ಯ

ಇದು ದೇಶದಲ್ಲಿ ಚುನಾವಣಾ ಸುಧಾರಣೆಯ ವಿಶಾಲ ಪ್ರಶ್ನೆಯ ಭಾಗ. ಇದನ್ನು ಈಗ ಕೈಗೆತ್ತಿಕೊಳ್ಳಬೇಕಾದ ತುರ್ತಿನತ್ತಲೂ ಇದು ಗಮನ ಸೆಳೆದಿದೆ ಎಂದು ಯೆಚುರಿ ಹೇಳಿದರು.

ಇದು ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್ ವಂತಿಗೆಯ ನಿಷೇಧದಿಂದಲೇ ಆರಂಭವಾಗಬೇಕು. ಈಗ 'ಕಾರ್ಪೊರೆಟ್ ಸಾಮಾಜಿಕ ಹೊಣೆಗಾರಿಕೆ' (ಸಿಎಸ್‌ಆರ್) ಎಂಬುದು ಇರುವಂತೆ ಪ್ರಜಾಪ್ರಭುತ್ವವನ್ನು ಬಲಪಡಿಸುವ ದು ನಿಧಿಯನ್ನು ಆರಂಭಿಸಬೇಕು, ಅದಕ್ಕೆ ಕಾರ್ಪೊರೇಟ್‌ಗಳು ಸಿಎಸ್‌ಆರ್ ರೀತಿಯಲ್ಲೇ ವಂತಿಗೆ ನೀಡುವಂತಾಗಬೇಕು. ಏಕಂದರೆ ಪ್ರಜಾಪ್ರಭುತ್ವವನ್ನು ಬಲಪಡಿಸುವ ಜವಾಬ್ದಾರಿ ಅವಕ್ಕೂ ಇದೆ. ಈ ನಿಧಿಯಿಂದ ಪ್ರಭುತ್ವವೇ ಚುನಾವಣಾ ವೆಚ್ಚಕ್ಕೆ ವ್ಯವಸ್ಥೆ ಮಾಡುವ ಬಗ್ಗೆ ವಿಧಿ-ವಿಧಾನಗಳನ್ನು ರೂಪಿಸಬಹುದು.

ಇದರ ಜತೆಗೆ ಭಾಗಶಃ ಆನುಪಾತಿಕ ಪ್ರಾತಿನಿಧಿತ್ವವನ್ನು ಒಳಗೊಂಡ ಮತದಾನ ವ್ಯವಸ್ಥೆಯನ್ನು ರೂಪಿಸುವ ಬಗ್ಗೆ ಚರ್ಚೆ ನಡೆಯಬೇಕಾಗಿದೆ ಎಂದು ಅವರು ಹೇಳಿದರು. ಸಿಪಿಐ(ಎಂ)ನ ಈ ಸಲಹೆಯನ್ನು ಈ ಹಿಂದೆ ಪ್ರತಿಪಕ್ಷವಾಗಿದ್ದಾಗ ಬಿಜೆಪಿ ಕೂಡ ಬೆಂಬಲಿಸಿತ್ತು. ಆದರೆ ಈಗ ಕೇವಲ 31% ಮತಗಳಿಂದ, ಮತದಾನದಲ್ಲಿ ಭಾಗವಹಿಸಿದ 69% ಮಂದಿ ವಿರೋಧಿಸಿದರೂ ಸರಕಾರ ನಡೆಸುವ ಅವಕಾಶ ಪಡೆದ ಮೇಲೆ ಅದರ ಬಗ್ಗೆ ಮಾತಾಡುತ್ತಿಲ್ಲ ಎಂದು ವ್ಯಂಗ್ಯವಾಡಿದರು.











ತ್ರಿಪುರಾ ಇಂದು– ಈಶಾನ್ಯ ಭಾರತದಲ್ಲಿ ಒಂದು ಶಾಂತಿಯ ದ್ವೀಪ

ಇಲ್ಲಿ ಶಾಂತಿ ಪ್ರಕ್ರಿಯೆ ಕೆಲಸ ಮಾಡಿತು, ಏಕೆಂದರೆ ಎಡರಂಗ ಸರಕಾರ ಇದರೊಂದಿಗೇ ಜನಸಾಮಾನ್ಯರ ಬದುಕಿನ ಪರಿಸ್ಥಿತಿಗಳನ್ನು ಉತ್ತಮ ಪಡಿಸಲು ಕೂಡ ಕೆಲಸ ಮಾಡಿತು.
ಈ ಪರಿವರ್ತನೆಯ ಮಹತ್ವವನ್ನು ನಿಜವಾಗಿಯೂ ಅರಿಯಲು ತ್ರಿಪುರಾ ಎಂತಹ ಪರಿಸ್ಥಿತಿಗಳನ್ನು ಎದುರಿಸಬೇಕಾಯಿತು ಎಂಬುದನ್ನು ನೆನಪಿಸಿಕೊಳ್ಳಬೇಕು. 1980ರ ಮಡಾಯ್ ನರಸಂಹಾರ, 1988ರ ಉಕ್ಜುನ್ ಮೈದಾನ್ ಅತ್ಯಾಚಾರಗಳನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ಇಂದು ಮತ್ತೆ ಬಿಜೆಪಿಯ ವಿಭಜನಕಾರಿ ತಂತ್ರಗಳು, ಸುಳ್ಳುಗಳ ಕಂತೆಗಳು 1988ರ ಚುನಾವಣೆಗಳ ಮೊದಲಿನ ⇨

ತ್ರಿಪುರಾ ಫೆಬ್ರುವರಿ 18 ರಂದು ಮತದಾನ ಮಾಡಲಿದೆ. ಭಾರತದ ಮೂರನೇ ಅತಿ ಸಣ್ಣ ರಾಜ್ಯ ಕಳೆದ ಇಪ್ಪತ್ತು ವರ್ಷಗಳಲ್ಲಿ ಗಮನಾರ್ಹ ಪರಿವರ್ತನೆ ಕಂಡಿದೆ. ಅತ್ಯಂತ ಮಹತ್ವದ ಸಾಧನೆಯೆಂದರೆ ಉಗ್ರಗಾಮಿತ್ವ ಮತ್ತು ಜನಾಂಗೀಯ ಕಲಹಗಳಿಂದ ಸಂಕಟ ಪಡುತ್ತಿರುವ ಈಶಾನ್ಯ ಭಾರತದಲ್ಲಿ ಒಂದು ಸಣ್ಣ ಶಾಂತಿಯ ದ್ವೀಪವಾಗಿದೆ.

2012ರಲ್ಲಿ ರಾಜ್ಯ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಸಶಸ್ತ್ರ ಪಡೆಗಳ ವಿಶೇಷ ಅಧಿಕಾರಗಳ ಕಾಯ್ದೆ(ಎಎಫ್‌ಎಸ್‌ಪಿಎ) ಇನ್ನು ಮುಂದೆ ರಾಜ್ಯದಲ್ಲಿ ಜಾರಿಯಲ್ಲಿರುವುದಿಲ್ಲ ಎಂದು ಪ್ರಕಟಿಸಿದರು. ಈ ಪ್ರಕಟಣೆಯನ್ನು ಸೇನಾಪಡೆಯಾಗಲಿ, ಕೇಂದ್ರ ಸರಕಾರವಾಗಲಿ ಯಾರೂ ವಿರೋಧಿಸಲಿಲ್ಲ, ಅದಕ್ಕೆ ಸವಾಲು ಹಾಕಲಿಲ್ಲ,

ಈ ಬದಲಾವಣೆ ತಂದದ್ದು ಕರಾಳ ಕ್ರಮಗಳಿಂದ ಅಲ್ಲ, ಏಕೆಂದರೆ ಅದರಿಂದ ಹಿಂಸಾಚಾರದ ಹೊಸ ವರ್ತುಲಗಳೇ ಹುಟ್ಟಿಕೊಳ್ಳುತ್ತವೆ. 1993ರಲ್ಲಿ ಅಧಿಕಾರ ವಹಿಸಕೊಂಡ ಎಡರಂಗ ಸರಕಾರ ಕಠಿಣ, ಆದರೆ ಪಾರದರ್ಶಕ ಆಡಳಿತ ವಿಧಾನಗಳನ್ನು ಬಳಸಿತು, ಜತೆಗೆ ಸಮುದಾಯಗಳ ನಡುವೆ ಸೇತುವೆ ಕಟ್ಟುವ ಬದ್ಧತೆಯೂ ಇತ್ತು. ಹೆಜ್ಜೆ–ಹೆಜ್ಜೆಯಾಗಿ, ಒಂದೊಂದಾಗಿ ಬುಡಕಟ್ಟು ಜನಗಳು ಮತ್ತು ಇತರರ ನಡುವೆ, ವಿವಿಧ ಧರ್ಮಗಳ, ಪ್ರದೇಶಗಳ ಜನಗಳ ನಡುವೆ ವಿಶ್ವಾಸವನ್ನು ಬೆಸೆಯುವ ಕೆಲಸದಲ್ಲಿ ಬುಡಕಟ್ಟು ಜನ, ಮಹಿಳೆಯರು, ಕಾರ್ಮಿಕರ ಮತ್ತು ರೈತರ ಸಂಘಟನೆಗಳು, ನೌಕರರು, ಅಧ್ಯಾಪಕರು, ವಿದ್ಯಾರ್ಥಿ–ಯುವಜನ ಸಂಘಟನೆಗಳು ಎಲ್ಲರೂ ಕೈಜೋಡಿಸಿದರು.

ಇದರ ಜೊತೆಗೇ ಸರಕಾರ ಜನಸಾಮಾನ್ಯರ ಜೀವನ ಪರಿಸ್ಥಿತಿಗಳನ್ನು ಉತ್ತಮ ಪಡಿಸಲು ಕ್ರಮಗಳನ್ನು ಕೈಗೊಂಡಿತು. ಬೆಟ್ಟ ಗುಡ್ಡಗಳು, ಅರಣ್ಯ ಪ್ರದೇಶಗಳಿಂದ ಕೂಡಿದ ರಾಜ್ಯದ ಭೌಗೋಳಿಕ ಪರಿಸ್ಥಿತಿಗಳು, ಬಾಂಗ್ಲಾದೇಶದೊಡನೆ ಗಡಿ, ಕೈಗಾರಿಕೆಗಳ, ರಸ್ತೆ, ವಿದ್ಯುತ್, ರೈಲು ಸಂಪರ್ಕ ಮುಂತಾದ ಮೂಲರಚನೆಗಳ ಅಭಾವ, ಬಹಳ ಕಡಿಮೆ ಸಾಕ್ಷರತೆ ಮತ್ತು ವಿಪರೀತ ಬಡತನದ ಪರಿಸ್ಥಿತಿಯಲ್ಲಿ ಈ ಕ್ರಮಗಳನ್ನು ರೂಪಿಸ ಜಾರಿಗೊಳಿಸಬೇಕಿತ್ತು.

ತ್ರಿಪುರಾದಲ್ಲಿ 30% ಬುಡಕಟ್ಟು ಜನಗಳು. ಆಗ ಹೆಚ್ಚಿನವರು ನಿರಕ್ಷರಿಗಳು, 'ಝೂಮ್ 'ಸಾಗುವಳಿಯಲ್ಲಿ ತೊಡಗಿದ್ದರು. ಅದರ ಇಳುವರಿ ಬಹಳ ಕಡಿಮೆ. ಇತ್ತೀಚಿನ ವರೆಗೂ ಅವರ ಭಾಷೆ ಕೊಕ್‌ಬೊರೊಕ್‌ಗೆ ಲಿಪಿ ಇರಲಿಲ್ಲ. ಎಡರಂಗ ಸರಕಾರದ ಆಳ್ವಿಕೆಯಲ್ಲೇ ಬುಡಕಟ್ಟು ಮಕ್ಕಳು ತಮ್ಮ ಮಾತೃಭಾಷೆಯಲ್ಲೆ ಕಲಿಯಲು ಸಾಧ್ಯವಾಗಿರುವುದು. ಅವರ ಭಾಷೆಯಲ್ಲೇ ಪಠ್ಯಪುಸ್ತಕಗಳನ್ನು ಒದಗಿಸಲಾಗಿದೆ. ದೇಶದ ವಿವಿಧ ಭಾಗಗಳಲ್ಲಿ ಬುಡಕಟ್ಟು ಸಂಸ್ಕೃತಿ, ಭಾಷೆ, ನಂಬಿಕೆಗಳು ದಾಳಿಗೆ ಒಳಗಾಗಿರುವಾಗ ಇಲ್ಲಿ ತ್ರಿಪುರಾದಲ್ಲಿ ಕೊಕ್‌ಬೊರೊಕ್ ಭಾಷೆಗೆ ಉತ್ತೇಜನೆ ಸಿಕ್ಕಿದೆ. ಜತೆಗೆ ಬುಡಕಟ್ಟು ಸಂಸ್ಕೃತಿ, ಕಲೆ ಮತ್ತು ಪರಂಪರೆಗಳನ್ನು ಉಳಿಸುವ ಸತತ ಪ್ರಯತ್ನಗಳು ನಡೆಯುತ್ತಿವೆ.

1993ರಲ್ಲಿ ದೇಶದ ಇತರ ಭಾಗಗಳೊಂದಿಗೆ ತ್ರಿಪುರಾದ ಸಂಪರ್ಕ ಒಂದು ಅಸಮರ್ಪಕ ರೈಲು ಲೈನ್, ಒಂದು ಹೆದ್ದಾರಿ ಮತ್ತು ಕೆಲವು ವಿಮಾನ ಹಾರಾಟಗಳು ಮಾತ್ರ. ಆದರೆ ಎಡರಂಗ ಸರಕಾರದ ಅಡಿಯಲ್ಲಿ ಈಗ ಹೊಸ ರೈಲ್ವೆ ಟ್ರಾಕ್‌ಗಳನ್ನು ಹಾಕಲಾಗುತ್ತಿದೆ. ಹೆದ್ದಾರಿ ವಿಸ್ತರಣೆಯಾಗಿದೆ, ಬಾಂಗ್ಲಾದೇಶ್ ಗಡಿಯ ವರೆಗೂ ತಲುಪಿದೆ, ಈ ಮೂಲಕ ತ್ರಿಪುರಾಕ್ಕೆ ಚಿತ್ತಗಾಂಗ್ ಬಂದರಿನ ಪ್ರಯೋಜನ ಪಡೆಯಲು ಸಾಧ್ಯವಾಗಿದೆ.

ಇಪ್ಪತ್ತು ವರ್ಷಗಳ ಹಿಂದೆ ತ್ರಿಪುರಾದ ವಿಮಾನ ನಿಲ್ದಾಣ ವಾರದಲ್ಲಿ 20 ಹಾರಾಟಗಳನ್ನಷ್ಟೇ ಕಾಣುತ್ತಿದ್ದ ಒಂದು ಸಣ್ಣ , ಯಾರಿಗೂ ನೆನಪಿರದ ಸ್ಥಳವಾಗಿತ್ತು. ಈಗ ವಾರಕ್ಕೆ 196 ಹಾರಾಟಗಳನ್ನು ಕಾಣುತ್ತಿದೆ. ನಿಜ, ಸಂಪರ್ಕಗಳನ್ನು ಉತ್ತಮಪಡಿಸಲು ಬಹಳಷ್ಟು ಮಾಡಬೇಕಾಗಿದೆ. ಆದರೆ ಕೇಂದ್ರ ಸರಕಾರದ ನೆರವಿಲ್ಲದೇ ಇಷ್ಟನ್ನು ಸಾಧಿಸಲಾಗಿದೆ.

ಜನಗಳ, ಅದರಲ್ಲೂ ಮಹಿಳೆಯರ ಆರೋಗ್ಯಕ್ಕೆ ಅತ್ಯಾವಶ್ಯಕವಾದ ನೀರು ಮತ್ತು ಶುಚಿತ್ವದ ವ್ಯವಸ್ಥೆಯ ಕ್ಷೇತ್ರದಲ್ಲೂ ಇಂತಹುದೇ ಸಾಧನೆಗಳಿವೆ. ಈಗ ರಾಜ್ಯದ ಪ್ರತಿಯೊಂದೂ ಹಳ್ಳಿಯಲ್ಲಿ ಕುಡಿಯುವ ನೀರು ಪೂರೈಕೆಯಿದೆ. ಪಟ್ಟಣಗಳಲ್ಲಿ ಕೊಳಾಯಿಗಳ ಮೂಲಕ ಎಲ್ಲ ನಾಗರಿಕರಿಗೂ ನೀರು ಪೂರೈಕೆಯಿದೆ.

⇨⇨⇨



ಎಡರಂಗ ಸರಕಾರ 1986ರ ಹುಸಿ ಚುನಾವಣೆಗಳ ನಂತರ 1993ರಲ್ಲಿ ಮತ್ತೆ ಭಾರೀ ಬಹುಮತ ಪಡೆದು ಗೆದ್ದು ಬಂದು, ಚುನಾವಣೆಯಿಂದ ಚುನಾವಣೆಗೆ ತನ್ನ ಸ್ಥಾನಗಳನ್ನು ಹೆಚ್ಚಿಸಿಕೊಳ್ಳುತ್ತ ಬರುತ್ತಿರಲು ಮುಖ್ಯ ಕಾರಣ ಅದು ಅನುಸರಿಸುತ್ತಿರುವ ಪರ್ಯಾಯ ದಾರಿ, 'ಜನತೆ ಮೊದಲು' ಎಂಬ ಅಭಿವೃದ್ಧಿ ಮಾದರಿ. ಜನಸಾಮಾನ್ಯರ ಏಳಿಗೆಯೇ ರಾಜ್ಯದ ಏಳಿಗೆ, ಅಥವ ದೇಶದ ಏಳಿಗೆ ಎಂಬ ಕಣ್ಣೋಟದಿಂದ ಕೆಲಸ ಮಾಡುವ ಮಾದರಿ. ಇದು ಅತ್ಯಂತ ಜಾಗರೂಕತೆಯಿಂದ, ಅತ್ಯಂತ ದಕ್ಷತೆಯಿಂದ ಧೋರಣೆಗಳನ್ನು ರೂಪಿಸಿ, ಅವು ದೂರ–ದೂರದ ಪ್ರದೇಶಗಳಲ್ಲಿ ಜೀವನ ಸಾಗಿಸುವ ಸಮುದಾಯಗಳನ್ನೂ, ಬಡವರನ್ನೂ ತಲುಪುವಂತೆ ಜಾರಿ ಮಾಡುವ, ಆಮೂಲಕ ಅವರನ್ನು ಆರ್ಥಿಕವಾಗಿಯೂ, ಸಾಮಾಜಿಕವಗಿಯೂ ಸಬಲೀಕರಿಸುವ ಮತ್ತು ಅವರ ರಾಜಕೀಯ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವ ಅಭಿವೃದ್ಧಿ ಮಾದರಿ.

ಇದು ಸಮೃದ್ಧಿ ಮತ್ತು ಅಭಿವೃದ್ಧಿ ತರಬೇಕಾದರೆ ಸಾರ್ವಜನಿಕ ವೆಚ್ಚಗಳನ್ನು ಕಡಿತ ಮಾಡಬೇಕು, ಅಗತ್ಯ ಸೇವೆಗಳನ್ನೆಲ್ಲ ಖಾಸಗೀಕರಿಸಬೇಕು, ಸರಕಾರ ಕೇವಲ ಇವಕ್ಕೆಲ್ಲ ಅನುವು ಮಾಡಿಕೊಡುವ ಕೆಲಸವನ್ನು ಮಾತ್ರ ಮಾಡಬೇಕು ಎಂಬ ಪರಿಕಲ್ಪನೆ ಸಂಪೂರ್ಣ ತಪ್ಪು ಎಂದು ಅದನ್ನು ತಿರಸ್ಕರಿಸಿರುವ ಮಾದರಿ.

ಈ ಮಾದರಿಯ ರಾಷ್ಟ್ರೀಯ ಮಹತ್ವ ಇರುವುದು ಯಾವ ಸಂದರ್ಭದಲ್ಲಿ ಅದನ್ನು ಬೆಳೆಸಲಾಗುತ್ತಿದೆ ಎಂಬುದರಲ್ಲಿ.

ಮೇಲೆ ಹೇಳಿದ ಕಣ್ಣೋಟ ತಪ್ಪು ಎಂಬುದನ್ನು ಜಗತ್ತಿನಾದ್ಯಂತ ಅನುಭವಗಳು ಸಾಬೀತು ಮಾಡಿವೆ. ಅದು ಅಸಮಾನತೆಗಳನ್ನು ವಿಪರೀತವಾಗಿ

ಪುಟ 10 ನೋಡಿ



37 ಲಕ್ಷ ಜನಸಂಖ್ಯೆಯಿರುವ ರಾಜ್ಯದಲ್ಲಿ 2016-17ರ ಒಂದು ವರ್ಷದಲ್ಲೇ 7,39, 983 ಶೌಚಾಲಯಗಳನ್ನು ಕಟ್ಟಲಾಯಿತು. ನೂರಾರು ಸಮುದಾಯಿಕ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಈ ಪುಟ್ಟ ರಾಜ್ಯ 113 ನಿರ್ಮಲ ಗ್ರಾಮ ಪುಸ್ಕಾರಗಳನ್ನು ಪಡೆದಿರುವುದರಲ್ಲಿ ಆಶ್ಚರ್ಯವೇನಿಲ್ಲ. ತ್ರಿಪುರಾದಲ್ಲೀಗ ಬಯಲು ಶೌಚ ಕಾಣಿಸುತ್ತಿಲ್ಲ.

1971ರಲ್ಲಿ ತ್ರಿಪುರಾದ ಸಾಕ್ಷರತೆ 30.98%. 2014ರಲ್ಲಿ 100% ಸಾಕ್ಷರತೆಯ ಹತ್ತಿರ ಬಂದಿದೆ. ಸಾಕ್ಷರತೆ ಎಂದರೆ ತಮ್ಮ ಹೆಸರು ಬರೆಯಲು ಕಲಿಯುವುದಷ್ಟೇ ಅಲ್ಲ. ನಿಜವಾದ ಶಿಕ್ಷಣಕ್ಕೆ ಬಾಗಿಲು ದೊಡ್ಡದಾಗಿ ತೆರೆಸಿದೆ. ಮಧ್ಯದಲ್ಲಿ ಶಾಲೆ ಬಿಡುವ ಮಕ್ಕಳ ಪ್ರಮಾಣ ತೀವ್ರವಾಗಿ ಇಳಿದಿದೆ. ಶಿಕ್ಷಣದ ಮುಂದಿನ ಹಂತಗಳಿಗೆ ಹೋಗ ಬಯಸುವವರ ಸಂಖ್ಯೆ ಹೆಚ್ಚುತ್ತಿದೆ. ಜನಗಳ ಈ ಆಕಾಂಕ್ಷೆಗಳನ್ನು ಪೂರೈಸಲು ಹಲವಾರು ಕಾಲೇಜುಗಳು, ಮೂರು ವಿಶ್ವವಿದ್ಯಾಲಯಗಳು, ವೃತ್ತಿಪರ ತರಬೇತಿಯ ವಿವಿಧ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಪ್ರಯತ್ನಿಸುತ್ತಿದೆ.

ಗಮನಾರ್ಹ ಸಂಖ್ಯೆಯಲ್ಲಿ ಬುಡಕಟ್ಟು ಜನಗಳಿರುವ ರಾಜ್ಯವಾದ ಮಧ್ಯಪ್ರದೇಶದೊಂದಿಗೆ ಹೋಲಿಕೆ ಬಹಳಷ್ಟು ಅಂಶಗಳನ್ನು ತಿಳಿಸುತ್ತದೆ.

ಈ ರಾಜ್ಯ 15 ವರ್ಷಗಳಿಂದ ಬಿಜೆಪಿ ಆಳ್ವಿಕೆಯಲ್ಲಿದೆ. ಆದರೆ ಇಲ್ಲಿ ಸಾಕ್ಷರರ ಪ್ರಮಾಣ ಕೇವಲ 41.2% (ಅಖಿಲ ಭಾರತ ಸರಾಸರಿ 59%). 57.3% ಮಂದಿ ಶಾಲೆಯನ್ನೇ ಕಂಡಿಲ್ಲ, ಅಥವ ಹೆಚ್ಚೆಂದರೆ 5ನೇ ತರಗತಿಯ ವರೆಗೆ ಓದಿದ್ದಾರೆ. ಮಹಿಳೆಯರ ನಡುವೆಯಂತೂ ಸಾಕ್ಷರರು ಕೇವಲ 28.4%.

ನಿರುದ್ಯೋಗ ತ್ರಿಪುರಾದ ಒಂದು ದೊಡ್ಡ ಸಮಸ್ಯೆಯಾಗಿತ್ತು. ಎಡರಂಗ ಸರಕಾರ ಅದಕ್ಕೆ ಆದ್ಯತೆ ನೀಡಿತು. ಈ ರಾಜ್ಯ ಮಹಾತ್ಮ ಗಾಂಧಿ ಗಾಮೀಣ ಉದ್ಯೋಗ ಖಾತರಿ ಕಾಯ್ದೆಯ ಜಾರಿಯಲ್ಲಿ ಇಡೀ ದೇಶದಲೇ ಅತ್ಯುತ್ತಮ ದಾಖಲೆ ಸ್ಥಾಪಿಸಿದೆ. ಎಲ್ಲ ಜಾಬ್ ಕಾರ್ಡ್‌ದಾರರಿಗೆ 90 ದಿನಗಳ ಕೆಲಸ ಒದಗಿಸಿದೆ. ದುರದೃಷ್ಟವಶಾತ್ ಕೇಂದ್ರ ಸರಕಾರ ಈ ಸ್ಕೀಮಿಗೆ ಹಣವನ್ನು ಕಡಿತ ಮಾಡುತ್ತಿದೆ. ರಾಜ್ಯ ಸರಕಾರ ಇದಕ್ಕೆ ತನ್ನದೇ ಅಲ್ಪ ಪ್ರಮಾಣದ ಸಂಪನ್ಮೂಲಗಳನ್ನು ಅವಲಂಬಿಸಬೇಕಾಗಿದೆ.

ಈ ರಾಜ್ಯ ಆಹಾರ ಉತ್ಪಾದನೆಯಲ್ಲಿ ಕೊರತೆ ಅನುಭವಿಸುತ್ತಿದ್ದ ರಾಜ್ಯ. ಆದರೆ ಎಡರಂಗ ಸರಕಾರ ನೀರು, ರಸಗೊಬ್ಬರ ಮತ್ತು ಕೀಟನಾಶಕಗಳ ವಿಪರೀತ ಬಳಕೆಯ 'ಹಸಿರು ಕ್ರಾಂತಿ' ವಿಧಾನಗಳಿಗೆ ಮೊರೆ ಹೋಗದೆ ರೈತರಿಂದ ಬೀಜಗಳನ್ನು ಖರೀದಿಸಿ, ಕಡಿಮೆ ನೀರು ಮತ್ತು ಸಾವಯವ ಗೊಬ್ಬರಗಳನ್ನು ಬಳಸಿ ಹೆಚ್ಚು ಇಳುವರಿ ತೆಗೆಯುವ ಕ್ರಮಗಳಿಗೆ ಉತ್ತೇಜನೆ ನೀಡಿತು. ತ್ರಿಪುರಾ ಈಗ ಅಕ್ಕಿ ತೀವ್ರತೆಯ ವ್ಯವಸ್ಥೆ(ಆರ್‌ಐಎಸ್) ಯನ್ನು ಯಶಸ್ವಿಯಾಗಿ ಅಂಗೀಕರಿಸಿದ ರಾಜ್ಯ ಎಂದು ಅಂತರ್ರಾಷ್ಟ್ರೀಯ ಖ್ಯಾತಿ ಗಳಿಸಿದೆ. ರೈತರ ಬೆಳೆಗಳಿಗೆ ಫಲದಾಯಕ ಬೆಲೆಗಳು ಸಿಗುವಂತೆ ರಾಜ್ಯ ಸರಕಾರ ನೋಡಿಕೊಳ್ಳುತ್ತಿದೆ.

ಬೇರೆ ರಾಜ್ಯಗಳಾಗುತ್ತಿರುವಂತೆ ಇಲ್ಲಿ ಅರಣ್ಯವಾಸಿಗಳನ್ನು ಒಕ್ಕಲೆಬ್ಬಿಸಲಾಗುತ್ತಿಲ್ಲ. ಅವರಿಗೆ



ಭೂಮಿಯ ಪಟ್ಟಾ ನೀಡಿ ಬೇರೆ ರೀತಿಗಳಲ್ಲೂ ಆದಾಯ ಹೆಚ್ಚಿಸಕೊಳ್ಳಲು ನೆರವು ನೀಡಲಾಗುತ್ತಿದೆ.

ಎಡರಂಗ ಸರಕಾರದ 'ಜನತೆಯೇ ಮೊದಲು' ಮಾದರಿಯಿಂದಾಗಿ ಬಡತನ ರೇಖೆಯ ಕೆಳಗಿರುವ ಜನಗಳ ಪ್ರಮಾಣವನ್ನು 14,05%ಕ್ಕೆ ಇಳಿಸಿದೆ. ಅಖಿಲ ಭಾರತ ಸರಾಸರಿ 21.92% ಇದೆ, ಕೈಗಾರಿಕೀಕೃತ ಗುಜರಾತ್ ಮತ್ತು ಮಹಾರಾಷ್ಟ್ರದಲ್ಲಿ ಕೂಡ ಇದು ಅನುಕ್ರಮವಾಗಿ 16.63% ಮತ್ತು 17.35%ಇದೆ. ಬುಡಕಟ್ಟು ಜನಗಳು ಹೆಚಾಗಿರುವ ಝಾರ್ಖಂಡ್ ಮತ್ತು ಛತ್ತಿಸ್‌ಗಡದಲ್ಲಂತೂ ಇದು 36%ಕ್ಕಿಂತಲೂ ಹೆಚ್ಚು.

ಅಂದು-ಪ್ರತ್ಯೇಕತಾವಾದಿ, ಸಂಕುಚಿತ ರಾಜಕೀಯ ಹಿಂಸಾಚಾರ ಪೀಡಿತ ರಾಜ್ಯ

ರಕ್ತಪಾತದ ದಿನಗಳನ್ನು ನೆನಪಿಗೆ ತರುತ್ತಿವೆ. ಎಡರಂಗ ಸರಕಾರ ಮತ್ತೆ ಅಧಿಕಾರಕ್ಕೆ ಬರದಂತೆ ಮಾಡಿದ ಹೊಲಸು ಪ್ರಚಾರಗಳನ್ನು ನೆನಪಿಸುತ್ತಿವೆ ಎನ್ನುತ್ತಾರೆ

ಸುಭಾಷಿಣಿ ಅಲಿ,
ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರು




ಈ ಪರಿವರ್ತನೆಯ ಮಹತ್ವವನ್ನು ನಿಜವಾಗಿಯೂ ಅರಿಯಲು ತ್ರಿಪುರಾ ಎಂತಹ ಪರಿಸ್ಥಿತಿಗಳನ್ನು ಎದುರಿಸಬೇಕಾಯಿತು ಎಂಬುದನ್ನು ನೆನಪಿಸಿಕೊಳ್ಳಬೇಕು.

ಈ ಹಿಂದೆ ಎಡರಂಗ ಸರಕಾರಗಳು 1978ರಿಂದ 1988 ರ ನಡುವೆ ಅಪಾರ ತೊಂದರೆಗಳನ್ನು ಎದುರಿಸಿ ಆಡಳಿತ ನಡೆಸಬೇಕಾಗಿತ್ತು. ಉಗ್ರಗಾಮಿ ಮತ್ತು ಪ್ರತ್ಯೇಕತಾವಾದಿ ಗುಂಪುಗಳು ಸಕ್ರಿಯವಾಗಿದ್ದವು. ಅವರಿಗೆ ಬಾಂಗ್ಲಾದೇಶದಲ್ಲಿ ಆಶ್ರಯ ದೊರೆಯುತ್ತಿತ್ತು, ಇದನ್ನು ತಪ್ಪಿಸಲು ಕೇಂದ್ರ ಸರಕಾರ ಸಂಕುಚಿತ ರಾಜಕಿಯ ಉದ್ದೇಶಗಳಿಂದಾಗಿ ರಾಜ್ಯ ಸರಕಾರದ ನೆರವಿಗೆ ಬರಲಿಲ. 1980ರಲ್ಲಿ ಮಂಡಾಯ್ ಎಂಬಲ್ಲಿ ಸಶಸ್ತ್ರ ಬುಡಕಟ್ಟು ಉಗ್ರಗಾಮಿಗಳು ಬಂಗಾಲೀ ವಸತಿಗಳಿಗೆ ದಾಳಿ ಮಾಡಿ ಪ್ರತಿಯೊಂದು ಮನೆಯನ್ನು ಸುಟ್ಟರು. 350 ಜನ ಪ್ರಾಣ ಕಳಕೊಂಡರು. ಭೀಕರ ಹಿಂಸಾಚಾರ ಮತ್ತು ರಕ್ತಪಾತಗಳು ಸಂಭವಿಸಿದವು.

ಆಗ ಕೇಂದ್ರ ಸರಕಾರ ಮಧ್ಯಪ್ರವೇಶಿಸಿದ್ದು ಗಲಭೆ ಪೀಡಿತ ಪ್ರದೇಶಗಳ ಕಾಯ್ದೆ ಮತ್ತು ಸಶಸ್ತ್ರ ಪಡೆಗಳ ವಿಶೇಷ ಆಧಿಕಾರಗಳ ಕಾಯ್ದೆ ಹಾಕಲು ಮಾತ್ರ. ಇದರಿಂದ ಶಾಂತಿಯ ಕಾರ್ಯಾಚರಣೆಗಳ ಬದಲು ಕಿರುಕುಳ, ದಮನ, ಲೈಂಗಿಕ ಹಲ್ಲೆಗಳು ಹರಡಿದವು. ಈ ಹಿನ್ನೆಲೆಯಲ್ಲೇ 1988ರಲ್ಲಿ ಕುಖ್ಯಾತ ಉಜನ್ ಮೈದಾನ್ ಪ್ರಕರಣ ನಡೆದದ್ದು. ಅಸ್ಸಾಂ ರೈಫಲ್‌ನ ಸಿಬ್ಬಂದಿ ಹಲವಾರು ಹಳ್ಳಿಗಳಿಂದ ಬುಡಕಟ್ಟು ಮಹಿಳೆಯರನ್ನು ಎಳೆತಂದು ಮೂರು ದಿನಗಳ ಕಾಲ ಅತ್ಯಾಚಾರ ನಡೆಸಿದರು. 80 ವರ್ಷದ ವೃದ್ಧೆಯನ್ನೂ ಬಿಡಲಿಲ್ಲ.

1988ರ ಚುನಾವಣೆಗಳಲ್ಲಿ ಎಡರಂಗವನ್ನು ಅಧಿಕಾರದಿಂದ ಇಳಿಸುವುದು ಕೇಂದ್ರ ಕಾಂಗ್ರೆಸ್ ಪಕ್ಷದ ಮುಖ್ಯ ಗುರಿಯಾಯ್ತು. ಅದು ಪ್ರತ್ಯೇಕತಾವಾದಿ ಟಿಎನ್‌ವಿಯ ರಾಜಕೀಯ ಅಂಗವಾದ ಟಿಯುಜೆಎಸ್ ನೊಂದಿಗೆ ಮೈತ್ರಿ ಮಾಡಿಕೊಡಿತು. ಈ ಟಿಎನ್‌ವಿ 1985ರಿಂದ 1988ರ ನಡುವೆ 300 ಮಂದಿಯನ್ನು, ಹೆಚ್ಚಾಗಿ ಬುಡಕಟ್ಟು ಜನಗಳನ್ನೇ ಕೊಂದಿತು. 1988 ಸಮೀಪಿಸುತ್ತಿದ್ದಂತೆ ಈ ಕೊಲೆ-ಸುಲಿಗೆಗಳು ಹೆಚ್ಚಿದವು. ಕೇಂದ್ರ ಮಂತ್ರಿಗಳ ಭೇಟಿಗಳು ಹೆಚ್ಚಿದವು. ಚುನಾವಣೆಯ ಸ್ವಲ್ಪವೇ ಮೊದಲು 91 ಜನರನ್ನು ಕೊಲ್ಲಲಾಯಿತು. 2500 ಎಡರಂಗ ಕಾರ್ಯಕರ್ತರನ್ನು ಬಂಧಿಸಲಾಯಿತು. ಚುನಾವಣೆ ಎಂಬುದು ಒಂದು ನಾಚಿಕೆಗೆಟ್ಟ ನಾಟಕವಾಯಿತು. ಆದರೂ ಹೆಚ್ಚಿನ ಮತಗಳನ್ನು ಪಡೆದ ಎಡರಂಗ ಸೋತಿದೆ ಎಂದು ಘೋಷಿಸಲಾಯಿತು.

ಕಾಂಗ್ರೆಸ್-ಟಿಯುಜೆಎಸ್ ಸರಕಾರ ರಚನೆಗೊಂಡಿತು. ಅದು ಐದು ವರ್ಷಗಳ ಕಾಲ ನಡೆಸಿದ್ದು ಕೊಲೆ, ಸುಲಗೆ, ಅತ್ಯಾಚಾರಗಳನ್ನೇ. ಅದರ ಕಾಲದಲ್ಲಿ ತ್ರಿಪುರಾ ಸ್ವಾಯತ್ತ ಜಿಲ್ಲಾ ಮಂಡಳಿಗೆ



ಹಣದ ಕೊರತೆಯಿಂದ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡವು.

ಬೇಸತ್ತ ತ್ರಿಪುರಾದ ಶಾಂತಿಪ್ರಿಯ ಜನತೆ 1993ರಲ್ಲಿ ಎಡರಂಗಕ್ಕೆ ಮತ್ತೆ ಭಾರೀ ಬಹುಮತ ನೀಡಿದರು. ಅಂದಿನಿಂದ ಎಡರಂಗ ಸರಕಾರ ಸತತವಾಗಿ ಭಾರಿ ಬಹುಮತದಿಂದ ಗೆದ್ದು ಬರುತ್ತಿದೆ.

ಈಗ ಮತ್ತೆ ಇಂದಿನ ಕೇಂದ್ರ ಸರಕಾರ ಈಶಾನ್ಯ ಭಾರತದಲ್ಲಿ ಶಾಂತಿಯನ್ನು ನೆಲೆಗೊಳಿಸುವುದಾಗಿ ಹೇಳುತ್ತಿದ್ದರೂ, ಅಂದಿನ ಕಾಂಗ್ರೆಸ್ ಕುಕೃತ್ಯಗಳನ್ನೇ ಅನುಸರಿಸುತ್ತಿದೆ. ಕೇಂದ್ರ ಮಂತ್ರಿಗಳು ಮತ್ತೆ-ಮತ್ತೆ ಭೇಟಿ ನೀಡುತ್ತಿದ್ದಾರೆ. ಎಡರಂಗದ ವಿರುದ್ಧ, ಸರಕಾರದ ವಿರುದ್ಧ, ಮುಖ್ಯಮಂತ್ರಿಗಳ ವಿರುದ್ಧ ಬೇಜವಾಬ್ದಾರಿಯುತ, ಸುಳ್ಳು, ಉದ್ರೇಕಕಾರಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಕಾಂಗ್ರೆಸ್ ಮೈತ್ರಿ ಮಾಡಿಕೊಂಡಿದ್ದ ಟಿಎನ್‌ವಿ-ಟಿಯುಜೆಎಸ್ ಉತ್ತರಾಧಿಕಾರಿಗಳಾದ ಐಪಿಎಫ್‌ಟಿ ಜತೆಗೆ ಮೈತ್ರಿ ಮಾಡಿಕೊಂಡಿದ್ದಾರೆ.

ಇಂದು ಐಪಿಎಫ್‌ಟಿ ಮತ್ತು ಬಿಜೆಪಿಯ ಸದಸ್ಯರಾಗಿರುವವರು ಕಾಂಗ್ರೆಸ್ ಮತ್ತು ಟಿಎನ್‌ವಿ-ಟಿಯುಜೆಎಸ್ ಗಲಭೆಕೋರರಾಗಿದ್ದವರು. 2013ರಲ್ಲಿ ಚುನಾಯಿತರಾದ ಎಲ್ಲ 6 ಕಾಂಗ್ರೆಸ್ ಶಾಸಕರು ಮೊದಲು ತೃಣಮೂಲ ಕಾಂಗ್ರೆಸಿಗೆ ಪಕ್ಷಾಂತರ ಮಾಡಿ, ಈಗ ಬಿಜೆಪಿಗೆ ಪಕ್ಷಾಂತರ ಮಾಡಿದ್ದಾರೆ. ಅವರಲ್ಲಿ ಒಬ್ಬ ಕಾಂಗ್ರೆಸಿನ ಕುಖ್ಯಾತ ಮುಖ್ಯಮಂತ್ರಿ ಸಮೀರ್ ರಂಜನ್ ಬರ್ಮನ್‌ನ ಮಗ. ಆತನೂ ನಂತರ ಕಾಂಗ್ರೆಸ್ ಬಿಟ್ಟಿದ್ದರು.

ಇನ್ನೊಬ್ಬ 1983 ಮತ್ತು 1988 ರಲ್ಲಿ ಟಿಯುಜೆಎಸ್ ಶಾಸಕನಾಗಿದ್ದಾತ, 2013ರಲ್ಲಿ ಕಾಂಗ್ರೆಸ್ ಶಾಸಕನಾಗಿದ್ದ,

ಇತ್ತೀಚೆಗೆ ಕೇಂದ್ರದ ಆಳುವ ಪಕ್ಷದ ಬೆಂಬಲ ಪಡೆದಿರುವ ಐಪಿಎಫ್‌ಟಿ ಪ್ರತ್ಯೇಕತೆಯ ಕೂಗೆಬ್ಬಿಸುತ್ತಿದೆ. ಅವರೊಂದು ಮತಪ್ರದರ್ಶನದಲ್ಲಿ ಯುವ ಪತ್ರಕರ್ತ ಶಂತನು ಭೌಮಿಕ್ ಕೊಲೆ ಮಾಡಿದರು. ಈ ಭೀಕರ ಕೃತ್ಯದಲ್ಲಿ ಶಾಮೀಲಾಗಿ ತಲೆಮರೆಸಿಕೊಂಡಿದ್ದ ಇಬ್ಬರು ಬಿಜೆಪಿ ಕಚೇರಿಯಲ್ಲಿ ಬಿಜೆಪಿ ಸೇರಿದರು. ಈಗ ಅವರಲ್ಲೊಬ್ಬ ಬಿಜೆಪಿ-ಐಪಿಎಫ್‌ಟಿ ಅಭ್ಯರ್ಥಿಯಾಗಿದ್ದಾನೆ.

ಬಿಜೆಪಿಯ ಪ್ರಚಾರ ದಿನಗಳೆದಂತೆ ಕರ್ಕಶಗೊಳ್ಳುತ್ತಿದೆ. ಅವರ ಬೆದರಿಕೆಗಳು, ವಿಭಜನಕಾರಿ ತಂತ್ರಗಳು 1988ರ ಚುನಾವಣೆಗಳ ಮೊದಲಿನ ರಕ್ತಪಾತದ ದಿನಗಳನ್ನು ನೆನಪಿಗೆ ತರುತ್ತಿವೆ. ಎಡರಂಗ ಸರಕಾರ ಮತ್ತೆ ಅಧಿಕಾರಕ್ಕೆ ಬರದಂತೆ ಮಾಡಿದ ಹೊಲಸು ಪ್ರಚಾರಗಳನ್ನು ನೆನಪಿಸುತ್ತಿವೆ.

ಆದರೆ ತ್ರಿಪುರಾದ ಜನತೆ ಆ ದಿನಗಳು ಪುನರಾವರ್ತನೆ ಗೊಳ್ಳದಂತೆ ತಡೆಯುವ ದೃಢನಿರ್ಧಾರ ಮಾಡಿದ್ದಾರೆ.

ಬಿಜೆಪಿಯ ಎನ್‌ಕೌಂಟರ್ ರಾಜಕೀಯವೂ, ಸುಳ್ಳು ಉತ್ಪಾದಿಸುವ ಯಂತ್ರಗಳೂ

"ಬಿಜೆಪಿ ಮುಖಂಡರು ತಾವು ಹೋಗುವಲ್ಲೆಲ್ಲ ಒಂದು ಮೆಶಿನ್ ಒಯ್ಯುತ್ತಾರೆ, ಅದು ಹೊಸ-ಹೊಸ ಸುಳ್ಳುಗಳ ಕಂತೆಗಳನ್ನು ಉತ್ಪಾದಿಸುತ್ತಾ ಹೋಗುತ್ತದೆ" ಎಂದು ತ್ರಿಪುರಾದಲ್ಲಿ ವ್ಯಾಪಕ ಚುನಾವಣಾ ಪ್ರಚಾರದಲ್ಲಿ ಮಗ್ನರಾಗಿರುವ ಬೃಂದಾ ಕಾರಟ್ ಮೊನ್ನೆ ಫೆಬ್ರುವರಿ 6ರಂದು ಟಿಪ್ಪಣಿ ಮಾಡಿದರು.

ಅವರು ಎರಡು ದಿನಗಳ ಹಿಂದೆ ಅಗರ್ತಲಾದಲ್ಲಿ ಬಿಜೆಪಿಯ ಚುನಾವಣಾ ಪ್ರಚಾರದ 'ವಿಜಯ ರಥ'ವನ್ನು ಬೀದಿಗಿಳಿಸುತ್ತ ಕೇಂದ್ರ ಗೃಹ ಮಂತ್ರಿಗಳು ಎಡರಂಗದ ಬಗ್ಗೆ ಮಾಡಿದ ಟೀಕೆಗಳ ಬಗ್ಗೆ ಕೇಳಿದಾಗ ನೀಡಿದ ಪ್ರತಿಕ್ರಿಯೆ ಇದು.

ತ್ರಿಪುರಾದ ಜನತೆ ಎಡರಂಗದ ಆಳ್ವಿಕೆಯ ಅಡಿಯಲ್ಲಿ ಅಭಿವೃದ್ಧಿಯಿಂದ ವಂಚಿತರಾಗಿದ್ದಾರೆ, ಕಾನೂನು ವ್ಯವಸ್ಥೆ ಇಲ್ಲವೇ ಇಲ್ಲ, ನಿರುದ್ಯೋಗ, ಭ್ರಷ್ಟಾಚಾರ ಹೆಚ್ಚಿದೆ ಇತ್ಯಾದಿ ಇತ್ಯಾದಿ ಅವರ ಉತ್ತರಪ್ರದೇಶದಲ್ಲಿ, ಪ್ರಧಾನಿಗಳ ಗುಜರಾತಿನಲ್ಲಿ, ಹರ್ಯಾಣಾದಲ್ಲಿ, ಮಧ್ಯಪ್ರದೇಶದಲ್ಲಿ ಪ್ರತಿಪಕ್ಷಗಳು ಹೇಳಿದ್ದರ ನಕಲನ್ನು ಬಾಯಿಪಾಟ ಒಪ್ಪಿಸುವಂತೆ ಹೇಳಿದರು. ಇವೆಲ್ಲ ಹಸಿ ಸುಳ್ಳುಗಳು ಎಂದು ಅವರಿಗೂ ತಿಳಿದಿರದ ಸಂಗತಿಯೇನಲ್ಲ. ಚುನಾವಣಾ ಪ್ರಚಾರದಲ್ಲಿ ಹೇಳುವುದೆಲ್ಲ 'ಜುಮ್ಲಾಗಳು' ಅಂದರೆ ಬೊಗಳೆಗಳಷ್ಟೇ ಎಂದು ಅವರು ವರ್ಷಕ್ಕೆ 2 ಕೋಟಿ

ಪುಟ 10 ನೋಡಿ



ಬಿಜೆಪಿಯ ಎನ್‌ಕೌಂಟರ್ ರಾಜಕೀಯವೂ, ಸುಳ್ಳು ಉತ್ಪಾದಿಸುವ ಯಂತ್ರಗಳೂ

ಪುಟ 9 ರಿಂದ

ಉದ್ಯೋಗಗಳು, ಎಲ್ಲರ ಖಾತೆಗೆ 15 ಲಕ್ಷ ರೂ.ಗಳು ಎಲ್ಲಿ ಎಂದು ಕೇಳಿದಾಗ ಅವರ ಅಖಿಲ ಭಾರತ ಅಧ್ಯಕ್ಷರೇ ಅಪ್ಪಣೆ ಕೊಡಿಸಿದ್ದರು ತಾನೇ?

ಈ ಬಿಜೆಪಿ ಅಧ್ಯಕ್ಷರು ದೇಶಕ್ಕೆ ಹೊಸದೊಂದು ಸ್ವರೂಪದ ರಾಜಕೀಯವನ್ನು ಪರಿಚಯಿಸಿದವರು, ಅದೆಂದರೆ ಎನ್‌ಕೌಂಟರ್ ರಾಜಕಾರಣ ಎಂದು ಈ ಹಿಂದೆ ಬೃಂದಾ ಕಾರಟ್ ಅವರೇ ಬಿಜೆಪಿಯ ರಾಜಕೀಯ ದಾರಿಯನ್ನು ವಿಶ್ಲೇಷಿಸಿದ್ದರು. ಈ ರಾಜಕೀಯದಲ್ಲಿ ಅಧಿಕಾರ ಬಾಚಿಕೊಳ್ಳಲು ಏನು ಬೇಕಾದರೂ ಮಾಡಬಹುದು, ಮೊದಲಿಗೆ ಸತ್ಯದ ಎನ್‌ಕೌಂಟರ್ ಮಾಡಬೇಕು.

ಮಾನ್ಯ ಗೃಹಮಂತ್ರಿಗಳು ತಮ್ಮ ಅಧ್ಯಕ್ಷರ ತತ್ವವನ್ನು ಚಾಚೂ ತಪ್ಪದೆ ಪಾಲಿಸಿದ್ದಾರೆ. ನಂತರ ಸ್ವತಃ ದೇಶದ ಪ್ರಧಾನ ಮಂತ್ರಿಗಳ ಯಂತ್ರ ಕೂಡ ಅದನ್ನೇ ಮಾಡಿದೆ. ಫೆಬ್ರುವರಿ 8ರಂದು ತ್ರಿಪುರಾದಲ್ಲಿ ತನ್ನ ಹೊಸ ಉತ್ಪಾದನೆಗಳನ್ನು ಮಾರಾಟಕ್ಕೆ ಬಿಟ್ಟಿದೆ. ಗುಜರಾತಿನಲ್ಲಿಎರಡಂಕಿಗಿಳಿದ, ಈಗ ರಾಜಸ್ತಾನದಲ್ಲಿ ಮೂರು ಉಪಚುನಾವಣೆಗಳನ್ನು ಕಳಕೊಂಡ ಪ್ರಧಾನಿಗಳ ಬಾಯಲ್ಲಿ ಮತದಾರರ ಶಿಕ್ಷೆಯ ಮಾತು ಬಂದದ್ದು ಸಹಜವೇ. (ಸುಳ್ಳುಗಳ ಪ್ರಮಾಣ ತಿಳಿಯಲು ಪಕ್ಕದ ಬಾಕ್ಸ್ ನೋಡಿ)

ಅದಕ್ಕಿಂತ ಹೆಚ್ಚಾಗಿ ಒಂದು ಸಣ್ಣ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರೂ ದೇಶದಲ್ಲೆಲ್ಲ ಈಗ ನಿಜವಾದ ರಾಜಕೀಯ ಮುತ್ಸದ್ದಿ ಎಂದು ಹೆಸರು ಗಳಿಸುತ್ತಿರುವ ಒಬ್ಬ ಗೌರವಾನ್ವಿತ ವ್ಯಕ್ತಿಯ ಬಗ್ಗೆ ಅಸೂಯೆ ಕೂಡ ಅಸಹಜವೇನಲ್ಲ. ಎಂದಿನಂತೆ 'ಚುನಾವೀ ಜುಮ್ಲಾಗಳು' ಉತ್ಪಾದನೆಯಾಗಿವೆ– 'ದೊಡ್ಡ ಯಕ್ಷಿಣಿಗಾರ', ಹುಸಿ ವ್ಯಕ್ತಿತ್ವ' ಇತ್ಯಾದಿ.

17 ಕೋಟಿ ಮತಗಳನ್ನು ಪಡೆದು 600 ಕೋಟಿ ಮತಗಳನ್ನು ಪಡೆದೆ ಎನ್ನುವವರ ಇಂತಹ ಮಾತುಗಳಿಗೆ ತ್ರಿಪುರಾದ ಮತದಾರರು ಎಷ್ಟು ಗಮನ ಕೊಡುತ್ತಾರೋ.

ಅಂದ ಹಾಗೆ ಮಾನ್ಯ ಗೃಹ ಮಂತ್ರಿಗಳು ಮತ್ತು ಪ್ರಧಾನ ಮಂತ್ರಿಗಳು ತ್ರಿಪುರಾದ ಎಡರಂಗದ ಭ್ರಷ್ಟಾಚಾರದ ಬಗ್ಗೆ ಅಷ್ಟೊಂದು ಮಾಹಿತಿಗಳಿದ್ದರೆ, ಅವರ ಸಿಬಿಐ, ಜಾರಿ ನಿರ್ದೇಶನಾಲಯ(ಇಡಿ), ಆದಾಯ ತೆರಿಗೆ (ಐಟಿ)ಇಲಾಖೆ ಇನ್ನೂ ಕಾರ್ಯಪ್ರವೃತ್ತವಾಗಿಲ್ಲವೇಕೆ ಎಂದೂ ತ್ರಿಪುರಾದ ಮತದಾರರು ಕೇಳಬಹುದು.

ಅದಿರಲಿ, ತ್ರಿಪುರಾದ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ಒಂದು ನೇರವಾದ ಪ್ರಶ್ನೆ ಕೇಳಿದ್ದರು. ಬಿಜೆಪಿ ಒಂದು ರಾಷ್ಟ್ರೀಯವಾದಿ ಪಕ್ಷ, ಅದು ತ್ರಿಪುರಾದಲ್ಲಿ ಒಂದು ಸಣ್ಣ ಪ್ರತ್ಯೇಕತಾವಾದಿ ಸಂಘಟನೆಯೊಂದಿಗೆ ಮೈತ್ರಿ ಮಾಡಿಕೊಂಡಿರುವುದಾದರೂ ಏಕೆ?

ಉತ್ತರ ಸ್ಪಷ್ಟ. ತ್ರಿಪುರಾದಲ್ಲಿ 2013ರ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ 60 ಸ್ಥಾನಗಳಲ್ಲಿ ಸ್ಪರ್ಧಿಸಿ ಒಂದನ್ನೂ ಗೆಲ್ಲಲಾಗಲಿಲ್ಲ. ಸುಮಾರು 2%ದಷ್ಟು ಮತಗಳನ್ನು ಪಡೆಯಿತು. ಸಿಬಿಐ, ಇಡಿ, ಐಟಿ ಇಲಾಖೆ ಬಳಸಲು ಸಾಧ್ಯವಿಲ್ಲವೆಂದಾಗ ಅಧಿಕಾರ ಗಳಿಕೆಯ ಮುಂದಿನ ಸೂತ್ರ ಶಾಸಕರನ್ನು ಖರೀದಿಸುವುದು. ಆದರೆ ಕಮ್ಯುನಿಸ್ಟ್ ಶಾಸಕರನ್ನು ಖರೀದಿಸುವುದು ಸಾಧ್ಯವಿಲ್ಲ ತಾನೇ. ನಂತರ ಬರುವುದು ಪ್ರತಿಪಕ್ಷಗಳ ಶಾಸಕರು. ಈ ಫಾರ್ಮುಲಾಕ್ಕೆ ಅನುಗುಣವಾಗಿ ಕಳೆದ ಬಾರಿ ಕಾಂಗ್ರೆಸ್ ಟಿಕೆಟಿನಿಂದ 'ಗೆದ್ದ 6 ಮಂದಿಯನ್ನು ತಮ್ಮ ಶಾಸಕರಾಗಿ ಮಾಡಿ, ಇತರ ಪಕ್ಷಗಳ ಭ್ರಷ್ಟ ಮತ್ತು ಕುಖ್ಯಾತರನ್ನು ಸೇರಿಸಿಕೊಂಡು ತ್ರಿಪುರಾದಲ್ಲಿ ಕೊನೆಗೂ ಒಂದು ನೆಲೆ ಕಂಡುಕೊಂಡಿದ್ದೇವೆ ಎಂದು ಅವರು ಭಾವಿಸಿದ್ದಾರೆ ಎನ್ನುತ್ತಾರೆ ಬೃಂದಾ ಕಾರಟ್(Tripura : A People-First Model; tripura_english_booklet.pdf ನಲ್ಲಿ ಬೃಂದಾ ಕಾರಟ್ ಮುನ್ನುಡಿ)

ಈಗ ಅಧಿಕಾರ ಕಬಳಿಸಲು ಮುಂದಿನ ಸೂತ್ರ– ಜನಗಳ ಐಕ್ಯತೆ ಮುರಿಯುವುದು. ಇದಕ್ಕೆ ಅವರ ಎಂದಿನ ಸೂತ್ರ ಧರ್ಮದ ಆಧಾರದಲ್ಲಿ ಜನಗಳಲ್ಲಿ ಒಡಕು ತರುವುದು. ಆದರೆ ತ್ರಿಪುರಾದಲ್ಲಿ ಅಲ್ಪಸಂಖ್ಯಾತ ಕೋಮಿನವರ ಪ್ರಮಾಣ ಅತಿ ಕಡಿಮೆ. ಆದರೆ ಬುಡಕಟ್ಟು ಜನಗಳ ಪ್ರಮಾಣ 31% ಇದೆ. ಆರೆಸ್ಸೆಸ್– ಬಿಜೆಪಿಗೆ ಬುಡಕಟ್ಟು ಗುಂಪುಗಳ ಉಗ್ರಗಾಮಿಗಳು ಎಡರಂಗವನ್ನು ಅಧಿಕಾರದಿಂದ ಇಳಿಸಲು ಸಹಜ ಮಿತ್ರರೆನಿಸಿದರು. ಈ ಹಿಂದೆ 1988ರಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರ ಗೆದ್ದುಕೊಂಡ ಉದಾಹರಣೆಯೂ ಅವರ ಮುಂದಿದೆ. ಈ ದಿಕ್ಕಿನಲ್ಲಿ ಆರೆಸ್ಸೆಸ್–ಬಿಜೆಪಿ ಆಗಲೇ ಕಾರ್ಯಪ್ರವೃತ್ತರಾಗಿದ್ದಾರೆ. ಈ ಸಂಚಿಕೆಯ ಪುಟ 2ರಲ್ಲಿ ಈ ಬಗ್ಗೆ ಸಿಪಿಐ(ಎಂ) ಮುಖ್ಯ ಚುನಾವಣಾ ಆಯೋಗಕಕೆ ಬರೆ ದಪತ್ರ ನೋಡಿ). ಆದರೆ ಮುಂದಿನ ಚುನಾವಣೆಯಲ್ಲೇ ಅವರು ಧೂಳೀಪಟರಾಗಿ 25ವರ್ಷಗಳಾದವು ಎಂಬುದನ್ನು ಕೂಡ ಎನ್‌ಕೌಂಟರ್ ರಾಜಕೀಯದ ಮಂದಿ ನೆನಪಿಸಿಕೊಳ್ಳಬೇಕಾಗಿದೆ.

ಎಡರಂಗದ ಚುನಾವಣಾ ಪ್ರಣಾಳಿಕೆ ಬಂದಿದೆ. ಬಿಜೆಪಿಯ 'ಜುಮ್ಲಾ' ಪಟ್ಟಿ ಬರುತ್ತದೆಯೇ?

25 ವರ್ಷಗಳ ಕಾಲ ಸತತವಾಗಿ ಅಧಿಕಾರ ನಡೆಸಿರುವ ತ್ರೊಉರಾ ಎಡರಂಗದ ಪ್ರಣಾಳಿಕೆ ಆತ್ಮ ವಿಶ್ವಾಸದಿಂದ ತುಂಬಿದೆ. ಏಕಂದರೆ ಪ್ರತ್ಯೇಕತಾವಾದಿ ಹಿಂಸಾಚಾರವನ್ನು ಯಶಸ್ವಿಯಾಗಿ ಎದುರಿಸುವುದರಿಮದ ಹಿಡಿದು ರಾಜ್ಯದ ಎಲ್ಲ ಜನವಿಭಾಗಗಳ ಸರ್ವತೋಮುಖ ಏಳಿಗೆ ಪ್ರಯತ್ನಗಳು ಮತ್ತು ಅದನ್ನು ಮುಂದುವರೆಸಿಕೊಮಡು ಹೋಗುವ ಬಗೆ, ಹೀಗೆ ಹೇಲಲು ಅವರ ಬಳಿ ಬಹಳಷ್ಟಿದೆ.



ತ್ರಿಪುರಾದ ಎಡರಂಗದ ಮುಖಂಡರಾದ ಗೌತಮ್ ದಾಸ್ ಎಡರಂಗದ ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದರು.

ಆದರೆ ಅವರಿಗೆ ಸವಾಲು ಹಾಕಿರುವ, ಈಶಾನ್ಯ ಭಾರತದಿಂದಲೂ ಎಡರಂಗವನ್ನು ಅಳಿಸುವ ಮಹತ್ವಾಕಾಂಕ್ಷೆ ಹೊತ್ತವರ ಪ್ರಣಾಳಿಕೆ ಇನ್ನೂ ಬಂದಿಲ್ಲ.

ಐಪಿಎಫ್‌ಟಿ ಬಿಡಿ, ಬಿಜೆಪಿಗೆ ನಿಜವಾಗಿಯೂ ಪೇಚಾಗಿದೆ. ಬಿಜೆಪಿ –ಆರೆಸ್ಸೆಸ್ ಗುರಿ ಬುಡಕಟ್ಟು ಅಸ್ಮಿತೆಗಳ 'ಹಿಂದೂಕರಣ'. ಐಪಿಎಫ್‌ಟಿ ಬುಡಕಟ್ಟು ಅಸ್ಮಿತೆಯ ಆಧಾರದಲ್ಲಿ ಒಂದು ಬುಡಕಟ್ಟು ರಾಜ್ಯಕ್ಕಾಗಿ ತ್ರಿಪುರಾವನ್ನು ಪಡೆಯುವುದು. ಅಧಿಕಾರ ಕಬಳಿಸಲು ಸಂದರ್ಭಸಾಧಕ ಮೈತ್ರಿಯೇ ಇವರ ಸಮಾನ ಅಂಶ. ಆದರೆ ತ್ರಿಪುರಾದ ಮತದಾರರಿಗೆ ಏನು ಭರವಸೆ ನೀಡುವುದು? ಇದು ಬಿಜೆಪಿಯ ಮುಂದಿರುವ ಗಹನವಾದ ಪ್ರಶ್ನೆ.

ಹಾಗೆ ನೋಡಿದರೆ, ಬಿಜೆಪಿ ಪ್ರಣಾಳಿಕೆಗೆ ಏನೂ ಮಹತ್ವ ಕೊಡುವಂತ ಪಕ್ಷವಲ್ಲ. ಎಲ್ಲಾ 'ಜುಮ್ಲಾ'ಗಳು ತಾನೇ? ಗುಜರಾತಿನಲ್ಲಿ ಅದು ಪ್ರಣಾಳಿಕೆ ಪ್ರಕಟಿಸಿದ್ದು ಮೊದಲ ಹಂತದ ಮತದಾನ ನಡೆಯುವ ಹಿಂದಿನ ದಿನ ತಾನೇ?



ತ್ರಿಪುರಾ ಎಡರಂಗ ಸರಕಾರದ 'ಜನತೆ ಮೊದಲು' ಮಾದರಿ

ಪುಟ 8 ರಿಂದ

ಹೆಚ್ಚಿಸಿದೆ, ಜತೆಗೆ ಆರ್ಥಿಕ ಬಿಕ್ಕಟ್ಟುಗಳನ್ನು ತಂದಿದೆ. ಆದರೂ ಈಗ ಕೇಂದ್ರದಲ್ಲಿರುವ ಸರಕಾರ ಹಿಂದಿನ ಸರಕಾರಗಳಿಗಿಂತಲೂ ಹೆಚ್ಚಿನ ರಭಸದಿಂದ ಅದೇ ದಿವಾಳಿಕೋರ ಅಭಿವೃದ್ಧಿ ಮಾದರಿಯನ್ನು ರಭಸದಿಂದ ಮುಂದುವರೆಸುತ್ತಿದೆ.

ರಾಜ್ಯಗಳಿಗೆ ಸಂವಿಧಾನಿಕವಾಗಿ ಸಲ್ಲಬೇಕಾದ ಸಂಪನ್ಮೂಲಗಳನ್ನು ಕೊಡಬೇಕಾದಾಗ ಬಳಕೆ ಶುಲ್ಕಗಳನ್ನು ಹೆಚ್ಚಿಸಬೇಕು, ವಿದ್ಯುತ್, ನೀರು ಮುಂತಾದ ಆವಶ್ಯಕ ಸೇವೆಗಳ ದರಗಳನ್ನು ಹೆಚ್ಚಿಸಬೇಕು, ಸಾರ್ವಜನಿಕ ಸಂಪನ್ಮೂಲಗಳನ್ನು ಖಾಸಗಿಯವರಿಗೆ ವರ್ಗಾಯಿಸುವ ಖಾಸಗಿ–ಸಾರ್ವಜನಿಕ ಸಹಭಾಗಿತ್ವದ ಪರಿಕಲ್ಪನೆಯನ್ನೇ ಜಾರಿಗೆ ತರಬೇಕು ಇತ್ಯಾದಿ ಶರತ್ತುಗಳನ್ನು ಹಾಕುತ್ತದೆ.

ಇದರ ಜತೆಗೆ ಈಗ ಜಿಎಸ್‌ಟಿ ರಾಜ್ಯ ಸರಕಾರದ ಹಣಕಾಸು ಅಧಿಕಾರಗಳನ್ನು, ಸಂಪನ್ಮೂಲ ಎತ್ತುವ ಸಾಮರ್ಥ್ಯವನ್ನು ಮೊಟಕು ಮಾಡಿದೆ.

ಇವೆಲ್ಲ ಅಡ್ಡಿ–ಆತಂಕಗಳ ನಡುವೆಯೂ ಎಡರಂಗ ಸರಕಾರ ಒಂದು ಪರ್ಯಾಯ ಜನತ–ಮೊದಲು ಎಂಬ ಅಭಿವೃದ್ಧಿ ಮಾದರಿಗೆ ಲಭ್ಯವಿರುವ ಎಲ್ಲ ಸಂಪನ್ಮೂಲಗಳನ್ನು ಬಳಸುವ ದಾರಿ ಅನುಸರಿಸುತ್ತಿದೆ. ಇದನ್ನು ನಾಶಪಡಿಸುವುದೇ ಬಿಜೆಪಿ–ಆರೆಸ್ಸೆಸ್ ಹುನ್ನಾರ.

ಬಡತನದ ರೇಖೆಯ ಕೆಳಗೆ(ಬಿಪಿಎಲ್) ಇರುವ ಜನಸಂಖ್ಯೆ ತ್ರಿಪುರಾದಲ್ಲಿ ಈಗ 14% ಅಖಿಲ ಭಾರತ ಮಟ್ಟವಾದ 22%ಕ್ಕಿಂತ ಎಷ್ಟೋ ಕಡಿಮೆ

ಬಿಪಿಎಲ್ ಜನಸಂಖ್ಯೆಯ ಪ್ರಮಾಣ(%)

ಅಖಿಲ ಭಾರತ	**21.92**
ತ್ರಿಪುರಾ	**14.05**
ಇತರ ರಾಜ್ಯಗಳು..	
ಗುಜರಾತ್	16.63
ಮಹಾರಾಷ್ಟ್ರ	17.35
ಉತ್ತರಪ್ರದೇಶ	29.43
ಝಾರ್ಖಂಡ್	36.96
ಛತ್ತೀಸಗಡ	39.93
ತಮಿಳುನಾಡು	11.28

ತಲಾ ಆದಾಯದ ಬೆಳವಣಿಗೆ (%) 2004/ರಿಂದ 2014/15

ತ್ರಿಪುರಾ	**10.3**
ಅಖಿಲ ಭಾರತ	**8.1**
ಇತರ ರಾಜ್ಯಗಳು..	
ತಮಿಳುನಾಡು	11.7
ಮಹಾರಾಷ್ಟ್ರ	9.5
ಮಧ್ಯಪ್ರದೇಶ	7.2
ಪಶ್ಚಿಮ ಬಂಗಾಲ	7.1
ಪಂಜಾಬ್	5.8

ಜನಸಂಖ್ಯಾ ಬೆಳವಣಿಗೆಯೊಂದಿಗೆ ಹೊಂದಿಸಿದ ಕಾರ್ಮಿಕರ ಸಂಖ್ಯೆಯ ಬೆಳವಣಿಗೆ (%)

ಅಖಿಲ ಭಾರತ	**2.07**
ತ್ರಿಪುರಾ	**11.93**
ಬೇರೆ ಕೆಲವು ರಾಜ್ಯಗಳಲ್ಲಿ..	
ಮೇಘಾಲಯ	–5.69
ಮಿಝೋರಾಂ	–19.32
ಅಸ್ಸಾಂ	8.39
ಗುಜರಾತ್	**–2.78**
ಪಂಜಾಬ್	–5.47
ಹರ್ಯಾಣ	–13.47
ಕೇರಳ	**8.08**

ಆರೋಗ್ಯಪಾಲನೆ ವ್ಯವಸ್ಥೆ:

	ತ್ರಿಪುರಾ	ಭಾರತ
ಶೇಕಡಾ ಏರಿಕೆ		
ಆರೋಗ್ಯ		
ಉಪ–ಕೇಂದ್ರಗಳು	92	6
ಪ್ರಾಥಮಿಕ ಆರೋಗ್ಯ ಕೇಂದ್ರಗಳು	29	9
ಸಮುದಾಯ ಆರೋಗ್ಯ ಕೇಂದ್ರಗಳು	100	65
ಆರೋಗ್ಯ ಫಲಿತಾಂಶಗಳು		
ಶಿಶು ಮರಣ ದರ	20	37
ಹೆರಿಗೆಯಲ್ಲಿ ಮರಣ ದರ	62	174
ಜನನ ದರ	14.7	20.8
ಮರಣ ದರ	5.2	6.5
ಒಟ್ಟು ಜನನ ದರ	1.7	2.2
ಮಕ್ಕಳಲ್ಲಿ ಲಿಂಗ ಅನುಪಾತ	957	919
ಆಸ್ಪತ್ರೆಗಳಲ್ಲಿ ಹೆರಿಗೆ	90%	79%

ಒಟ್ಟು ಶಿಕ್ಷಾರ್ಹ ಐಪಿಸಿ ಅಪರಾಧಗಳು 2010–15ರಲ್ಲಿ ಬದಲಾವಣೆ(%)

ತ್ರಿಪುರಾ	**–19**
ಅಖಿಲ ಭಾರತ	**33**
ಇತರ ಕೆಲವು ರಾಜ್ಯಗಳಲ್ಲಿ..	
ತಮಿಳುನಾಡು	1
ಗುಜರಾತ್	9
ಮಧ್ಯಪ್ರದೇಶ	25
ಮಹಾರಾಷ್ಟ್ರ	32
ಪಶ್ಚಿಮ ಬಂಗಾಳ	38

ಮಹಿಳೆಯರ ವಿರುದ್ಧ ಅಪರಾಧಗಳು 2010–15ರಲ್ಲಿ ಬದಲಾವಣೆ(%)

ತ್ರಿಪುರಾ	**–24**
ಅಖಿಲ ಭಾರತ	**53**
ಇತರ ಕೆಲವು ರಾಜ್ಯಗಳಲ್ಲಿ..	
ತಮಿಳುನಾಡು	–13
ಗುಜರಾತ್	–5
ಪಶ್ಚಿಮ ಬಂಗಾಳ	27
ಮಧ್ಯಪ್ರದೇಶ	47
ಮಹಾರಾಷ್ಟ್ರ	98



"ಇಟ್ಟಿಗೆಯಿಂದ ಇಟ್ಟಿಗೆ; ಪುಸ್ತಕದಿಂದ ಪುಸ್ತಕ"

▪ ಕೃಷ್ಣಪ್ಪ ಕೊಂಚಾಡಿ

ಮತಾಂಧ ಕ್ರೂರ ಮನಸ್ಸುಗಳು ಮನುಷ್ಯ ಜೀವಿಯನ್ನು ಮಾತ್ರವಲ್ಲ, ಗ್ರಂಥಾಲಯಗಳನ್ನು ಬಿಡುವುದಿಲ್ಲ ಎಂಬ ಕಠೋರ ಸತ್ಯ ಕೇರಳದ ಮಲಪ್ಪುರಂ ಜಿಲ್ಲೆಯಲ್ಲಿ 2016ನೇ ಮಾರ್ಚ್ ತಿಂಗಳಲ್ಲಿ ನಡೆದು ಹೋಯಿತು. ಇದಕ್ಕೆ ಪ್ರತಿಯಾಗಿ ಬೂದಿಯಿಂದ ಎದ್ದು ನಿಂತು ಹೊಸ ಸ್ವರೂಪದಲ್ಲಿ ಮತ್ತೆ ಆ ಗ್ರಂಥಾಲಯ ಡಿಸೆಂಬರ್ 23, 2017ರಂದು ಗ್ರಂಥಾಲಯಗಳ ಚರಿತ್ರೆಯಲ್ಲಿ ಒಂದು ಮಹತ್ವ ಪೂರ್ಣವಾದ ಘಟನೆಯಾಗಿದೆ.

ಕೇರಳದ ಮಲಪುರಂ ಜಿಲ್ಲೆಯ 'ತಾಲಕ್ಕೋರ' ಎಂಬ ಪುಟ್ಟ ಹಳ್ಳಿಯಲ್ಲಿ 1980ರಿಂದ ಎ.ಕೆ.ಜಿ ಮೆಮೋರಿಯಲ್ ಲೈಬ್ರರಿ ಕಾರ್ಯಾಚರಿಸುತ್ತಿತ್ತು. ಮತೀಯ ಮತ್ತು ಜಾತೀಯ ಶಕ್ತಿಗಳ ಪ್ರಾಬಲ್ಯದ ಆ ಪ್ರದೇಶದಲ್ಲಿ ಪ್ರಗತಿಪರ ಆಶಯಗಳನ್ನು ಹೊತ್ತು ಜಾತ್ಯಾತೀತ ಮೌಲ್ಯಗಳ ಮಾನವ ಸಮುದಾಯವನ್ನು ರೂಪೀಕರಿಸುವ ಕೈಂಕರ್ಯವನ್ನು ಈ ಗ್ರಂಥಾಲಯ ಸದ್ದಿಲ್ಲದೆ ನಡೆಸುತ್ತಿತ್ತು. ಸಾವಿರಾರು ಸಂಖ್ಯೆಯ ಯುವ ಸಮುದಾಯಕ್ಕೆ ಹೊಸ ಜಗತ್ತಿನ ಜ್ಞಾನದ ಪರಿಧಿಯನ್ನು ತೋರಿಸುತ್ತಿತ್ತು. 'ಅಕ್ಷರ' ಮತ್ತು 'ಜ್ಞಾನ' ಮಾನವ ಸಮಾಜದ ಪ್ರಗತಿಪರ ಬೆಳವಣಿಗೆಯಲ್ಲಿ ನಿರ್ಣಾಯಕ ಪಾತ್ರವಹಿಸುತ್ತದೆ. ಸಮಾಜದಲ್ಲಿ ಪ್ರಗತಿಪರ ಆಶ್ರಯಗಳ ಪಸರುವಿಕೆಯನ್ನು ನಿರಂತರವಾಗಿ ಪ್ರವಹಿಸುತ್ತಿರುವ ಇಂತಹ ಗ್ರಂಥಾಲಯಗಳನ್ನು ಪ್ರತಿಗಾಮಿ ಮಾನವ ವಿರೋಧಿ ಮೌಲ್ಯಗಳಲ್ಲಿ ನಂಬಿಕೆಯನ್ನು ಇಟ್ಟುಕೊಂಡಿರುವ ಮತ್ತು ಅದಕ್ಕಾಗಿ ಸಂಘಟಿತ ಕಾರ್ಯಕ್ರಮ ಮತ್ತು ಚಟುವಟಿಕೆ ನಡೆಸುತ್ತಿರುವ, ಚರಿತ್ರೆಯ ಚಕ್ರವನ್ನು ಹಿಂದಕ್ಕೆಳೆಯುತ್ತಿರುವ ಶಕ್ತಿಗಳಾಗಿರುವ ಸಂಘಪರಿವಾರಕ್ಕೆ ಇವುಗಳು ಮಹಾಗೋಡೆಯಾಗಿ ಕಂಡು ಬರುತ್ತಿತ್ತು. ಇಂತಹ ಶಕ್ತಿಗಳಿಗೆ ಅಕ್ಷರ, ಜ್ಞಾನ, ಹಳೆಯ ಸ್ಮಾರಕಗಳು ಮತ್ತು ಪಳೆಯುಳಿಕೆಗಳು ಶತ್ರುಗಳಾಗಿ ಪರಿಗಣಿಸಲ್ಪಡುತ್ತದೆ. ಆದುದರಿಂದ ಇವುಗಳ ವಿರುದ್ಧ ಸಂಘಟಿತ ಸೈದ್ಧಾಂತಿಕ ದಾಳಿ ಮತ್ತು ಆಕ್ರಮಣ ಹಾಗೂ ನಾಶ ಇವುಗಳೆಲ್ಲವು 'ಹಿಡ್ಡನ್' ಅಜೆಂಡಗಳಾಗಿರುವುದಿಲ್ಲ. ಬದಲಾಗಿ ಘೋಷಿತ ಬಹಿರಂಗ ಚಟುವಟಿಕೆಯ ಕಾರ್ಯಕ್ರಮಗಳಾಗಿರುತ್ತದೆ.

ವೈಚಾರಿಕತೆ, ವಿಶ್ಲೇಷಣೆ ಮತ್ತು ಪ್ರಶ್ನೆ ಮಾಡುವ ಮನೋಭಾವವನ್ನು ಎಂದೂ ಬಯಸದ ಈ ಶಕ್ತಿಗಳು ತನ್ನ ಸಿದ್ಧಾಂತವನ್ನು ಮೂಗಿನ ನೇರಕ್ಕೆ ರೂಪೀಕರಿಸಿ, ಅದಕ್ಕನುಗುಣವಾಗಿ ಸುಳ್ಳುಗಳನ್ನು ಉತ್ಪಾದಿಸುವ ಚಟುವಟಿಕೆಗಳನ್ನು ನಿರಂತರವಾಗಿ ನಡೆಸುತ್ತದೆ. ಇದಕ್ಕಾಗಿ ಸಾಕಷ್ಟು ಪ್ರಮಾಣದಲ್ಲಿ ಮಾನವ ಶ್ರಮ ಮತ್ತು ಹಣವನ್ನು ವಿನಿಯೋಗಿಸುತ್ತದೆ. ತನ್ನ ಪರವಾದ ಧೋರಣೆಗಳಿಗೆ ಸಮಾಜದಲ್ಲಿ ಸೂಕ್ತ ಪ್ರಮಾಣದಲ್ಲಿ ಧನಾತ್ಮಕ ಅಭಿಪ್ರಾಯಗಳು ರೂಪುಗೊಂಡಾಗ, ಪ್ರಾಯೋಗಿಕ ನೆಲೆಯಲ್ಲಿ ನೇರ ಕಾರ್ಯಾಚರಣೆಗೆ ಇಳಿಯುತ್ತದೆ. ತನ್ನ ಪರವಾದ ಮನೋಭಾವಕ್ಕೆ ಸಾರ್ವತ್ರಿಕ ಮನ್ನಣೆಗಳು ದೊರೆಯುವವ ವರೆಗೆ ಕಾಯಲು ಸಿದ್ಧವಿರದ ಈ ಶಕ್ತಿಗಳು ಒಂದು ಹಂತದಲ್ಲಿ ನೇರ ಕಾರ್ಯಾಚರಣೆಗೆ ಮುನ್ನುಗ್ಗುತ್ತಾರೆ. ಬಾಬ್ರಿ ಮಸೀದಿ ಧ್ವಂಸದ ಘಟನೆಯನ್ನು ಇದಕ್ಕೆ ಪೂರಕವಾಗಿ ಉಲ್ಲೇಖಿಸಬಹುದು. ಧಾರ್ಮಿಕ ನಂಬಿಕೆ ಮತ್ತು ಮತೀಯ ವಿಷಯಗಳನ್ನು ತನ್ನ ರಾಜಕೀಯ ಬಂಡವಾಳವನ್ನಾಗಿ ಮಾಡಿಕೊಂಡಿರುವ ಜಗತ್ತಿನ ಎಲ್ಲಾ ಮೂಲಭೂತವಾದಿ ಮತೀಯ ಸಂಘಟನೆಗಳು ಇಂತಹುದೇ ಸೈದ್ಧಾಂತಿಕ ಸ್ವರೂಪದಲ್ಲಿ ಕಾರ್ಯಾಚರಣೆ ನಡೆಸುತ್ತವೆ. ಅಫಘಾನಿಸ್ಥಾನದಲ್ಲಿ ಕಳೆದ ದಶಕದಲ್ಲಿ ತಾಲಿಬಾನ್‌ಗಳು ಸಾವಿರಾರು ವರ್ಷದ ಹಿಂದಿನ ಭಾಮಿಯಾನ ಬುದ್ಧನ ಮೂರ್ತಿಯನ್ನು ಧ್ವಂಸ ಮಾಡಿರುವ ಘಟನೆಯನ್ನು ಇದಕ್ಕೆ ಉದಾಹರಣೆಯಾಗಿ ಉಪಯೋಗಿಸಬಹುದು.

ಆದುದರಿಂದ ಸಂಘಪರಿವಾರದ ಶಕ್ತಿಗಳು ಕೇರಳದ ಮಲಪುರಂ ಜಿಲ್ಲೆಯ ಪಂಚಾಯತ್ ವ್ಯಾಪ್ತಿಯಲ್ಲಿ ಗ್ರಂಥಾಲಯಕ್ಕೆ ಬೆಂಕಿ ಕೊಟ್ಟು ನಾಶ ಮಾಡಿರುವ ಘಟನೆ 'ಕ್ರಿಯೆ'ಗೆ 'ಪ್ರತಿಕ್ರಿಯೆ' ಎಂದು ಸಾಂಕೇತಿಕವಾಗಿ ಸರಳ ತರ್ಕದ ಹಿನ್ನೆಲೆಯಲ್ಲಿ ನೋಡಬೇಕಾಗಿಲ್ಲ; ಅಥವಾ ಇದೊಂದು ಅಪ್ರಜ್ಞಾಪೂರ್ವಕ ಪುಂಡು ಪೋಕರಿಗಳ ಕೃತ್ಯವೆಂದೂ ಪರಿಗಣಿಸಬೇಕಾಗಿಲ್ಲ. ಬದಲಾಗಿ ನಿರ್ದಿಷ್ಟ ಕಾರ್ಯ ಯೋಜನೆಯ ವ್ಯವಸ್ಥಿತ ಪ್ರಜ್ಞಾಪೂರ್ವಕ ಕೃತ್ಯವಾಗಿದೆ.

ಮಲಪುರಂ ಜಿಲ್ಲೆಯ ಈ ಗ್ರಂಥಾಲಯದಲ್ಲಿ ಮಾನವ ಚರಿತ್ರೆಯ ಜ್ಞಾನ ಪ್ರಕಾರಗಳ ಬಹುಮುಖ್ಯ ಗ್ರಂಥಗಳಲ್ಲದೆ ಕಥೆ, ಕವನ, ಜೀವನ ಚರಿತ್ರೆಗಳ ಸುಮಾರು ಆರು ಸಾವಿರಕ್ಕೂ ಮಿಕ್ಕಿದ ಗ್ರಂಥಗಳಿದ್ದು ಅವುಗಳೆಲ್ಲವು ಬೆಂಕಿಯ ಕೆನ್ನಾಲಗೆಯಲ್ಲಿ ಕ್ಷಣಾರ್ಧದಲ್ಲೇ ಉರಿದು ಭಸ್ಮವಾಯಿತು. ಜಗತ್ತಿನ ಜ್ಞಾನ ಭಂಡಾರವನ್ನು ಆ ಪುಟ್ಟ ಹಳ್ಳಿಗೆ ತೋರಿಸಿದ ಗ್ರಂಥಾಲಯ ಭಸ್ಮವಾಗಿ ಹೋದಾಗ ಅಲ್ಲಿಯ ಜನತೆ ಕೇವಲ ಮೂಕವಿಸ್ಮಿತರಾಗಿ ನೋಡಲಿಲ್ಲ. ಬದಲಾಗಿ ಈ ಘಟನೆಯನ್ನು ಒಂದು ಸವಾಲು ಎಂದು ಸ್ವೀಕರಿಸಿದರು. ಸ್ಥಳೀಯ ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ಕಳೆದ ಮೂರು ದಶಕಗಳಿಂದಲೂ ಕಾರ್ಯಾಚರಿಸುತ್ತಿದ್ದ ಗ್ರಂಥಾಲಯವನ್ನು ಬೃಹತ್ ಸ್ವರೂಪದಲ್ಲಿ ಮರು–ರೂಪಿಸುವ ಜವಾಬ್ದಾರಿಯುತ ಸವಾಲನ್ನು ಸ್ಥಳೀಯ ಘಟಕದ ನಾಯಕ ಕೆ. ಮುಸ್ತಾಫ ವಹಿಸಿಕೊಂಡರು. ಅದಕ್ಕಾಗಿ ಒಂದು ಸಮಿತಿಯನ್ನು ರೂಪಿಸಿದರು. ಈ ಸಮಿತಿಯ ಘೋಷಣೆ "ಇಟ್ಟಿಗೆಯಿಂದ ಇಟ್ಟಿಗೆ; ಪುಸ್ತಕದಿಂದ ಪುಸ್ತಕ" ಎಂಬುದಾಗಿತ್ತು. ಇಂತಹ ಘೋಷಣೆಯು ರೋಮಾಂಚನಕಾರಿ ಸ್ಪಂದನೆಗೆ ಒಳಗಾಗಿ ಕೇರಳ ರಾಜ್ಯದಾದ್ಯಂತ ಪುಸ್ತಕ ಸಂಗ್ರಹಕ್ಕೆ ಮುನ್ನುಡಿ ಬರೆಯಿತು. ಫೇಸ್‌ಬುಕ್ ಗ್ರೂಪ್‌ಗಳ ಮುಖಾಂತರ ದೇಶವಿದೇಶಗಳಿಗೂ ಸಂದೇಶ ರವಾನೆಯಾಯಿತು. ಭಸ್ಮವಾದ ಆರುಸಾವಿರ ಪುಸ್ತಕದ ಬದಲು ಹದಿಮೂರು ಸಾವಿರ ಅತ್ಯಮೂಲ್ಯ ಪುಸ್ತಕಗಳ ಸಂಗ್ರಹವಾಯಿತು. ಅದಕ್ಕನುಗುಣವಾಗಿ ಆಧುನಿಕ ಗ್ರಂಥಾಲಯಗಳ ಕಣ್ಣೋಟಗಳನ್ನು ಒಳಗೊಂಡ ಭವ್ಯ ಕಟ್ಟಡಕ್ಕೆ ಸಹಾಯಧನವೂ ಹರಿದು ಬಂತು. ಗ್ರಂಥ ಭಂಡಾರದ ನಾಶದ ಕ್ರಿಯೆಗೆ ಎದ್ದು ಬಂದ ಪ್ರತಿಕ್ರಿಯೆ ವಿಶಾಲ ಸ್ವರೂಪದಲ್ಲಿ ಸಂಘ ಪರಿವಾರಕ್ಕೆ ನುಂಗಲಾರದ ತುತ್ತಾಯಿತು.

ಇಂತಹ ಈ ಗ್ರಂಥಾಲಯ ಒಂದು ವರ್ಷ ಒಂಬತ್ತು ತಿಂಗಳ ಅವಧಿಯಲ್ಲಿ ಅಂದರೆ ಕಳೆದ ಡಿಸೆಂಬರ್ 3, 2017ರಂದು ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್‌ರವರಿಂದ ಉದ್ಘಾಟನೆಯಾಯಿತು. ಈ ಸಂದರ್ಭದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸೇರಿದ ಜನಸ್ತೋಮವನ್ನು ಉದ್ದೇಶಿಸಿ ಅವರು ಕೊಟ್ಟ ಸಂದೇಶ ಕೂಡಾ ಮತ್ತೊಂದು ಚಾರಿತ್ರಿಕ ವಿಶ್ಲೇಷಣೆಯಾಗಿತ್ತು. ಅವರು "ಸಂಘಪರಿವಾರದ ಮನೋಸ್ಥಿತಿಯನ್ನು ಹೊಂದಿರುವ ಜನತೆ ಚಾರಿತ್ರಿಕವಾಗಿ ಅಕ್ಷರ ಜ್ಞಾನವನ್ನು ಜನಸಂಖ್ಯೆಯ ಬಹುದೊಡ್ಡ ಭಾಗಕ್ಕೆ ನೀಡದೆ ಶತಶತಮಾನಗಳ ಕಾಲ ವಂಚಿಸಿದ್ದಾರೆ. ಆಧುನಿಕ ಕಾಲಘಟ್ಟದಲ್ಲಿ ಸಾಮಾನ್ಯ ಜನತೆ ಅಕ್ಷರ ಜ್ಞಾನವನ್ನು ಪಡೆಯುವ ಸಂದರ್ಭಗಳನ್ನು ಅವರು ಸಹಿಸಲು ಸಿದ್ಧರಿಲ್ಲ. ಸಂಘಪರಿವಾರದ ಸಿದ್ಧಾಂತಗಳು ಅಕ್ಷರ ಜ್ಞಾನವನ್ನು ತಡೆಯುವ ಸಿದ್ಧಾಂತ" ಎಂದು ವಿಶ್ಲೇಷಿಸಿದರು. "ಗ್ರಂಥಾಲಯಗಳು ಯಾವುದೇ ಪ್ರದೇಶವೊಂದರ ಪ್ರಜ್ವಲಿಸುವ ದೀಪ"ಗಳೆಂದು ಮಾರ್ಮಿಕವಾಗಿ ವಿವರಿಸುತ್ತಾ, "ಅಕ್ಷರ ಮತ್ತು ಜ್ಞಾನ ಪಸರುವಿಕೆಯನ್ನು ತಡೆಯಲು ಜಗತ್ತಿನ ಯಾವುದೇ ಪ್ರತಿಗಾಮಿ ಶಕ್ತಿಗಳಿಂದ ಸಾಧ್ಯವಿಲ್ಲ"ವೆಂದು ಘೋಷಿಸಿದರು.

ಗ್ರಂಥಾಲಯ ಚರಿತ್ರೆಯಲ್ಲಿ ಒಮ್ಮೆ ಭಸ್ಮವಾಗಿ ಕೆಲವೇ ಕೆಲವು ಸಮಯದಲ್ಲಿ ಬೃಹತ್ ಸ್ವರೂಪದಲ್ಲಿ ಬೆಳೆದು ಬಂದ ಈ ಗ್ರಂಥಾಲಯದ ಚರಿತ್ರೆ ಕೇರಳದಲ್ಲಿ ಬೃಹತ್ ಸ್ವರೂಪದಲ್ಲಿರುವ ಗ್ರಂಥಾಲಯ ಆಂದೋಲನದಲ್ಲಿ ಒಂದು ಮಹತ್ವಪೂರ್ಣ ಘಟನೆಯಾಗಿದೆ.

ಆ ಪುಟ್ಟ ಹಳ್ಳಿಗೆ ತೋರಿಸಿದ ಗ್ರಂಥಾಲಯ ಭಸ್ಮವಾಗಿ ಹೋದಾಗ ಅಲ್ಲಿಯ ಜನತೆ ಕೇವಲ ಮೂಕವಿಸ್ಮಿತರಾಗಿ ನೋಡಲಿಲ್ಲ. ಬದಲಾಗಿ ಈ ಘಟನೆಯನ್ನು ಒಂದು ಸವಾಲು ಎಂದು ಸ್ವೀಕರಿಸಿದರು. ಅದಕ್ಕಾಗಿ ಒಂದು ಸಮಿತಿಯನ್ನು ರೂಪಿಸಿದರು. ಈ ಸಮಿತಿಯ ಘೋಷಣೆ "ಇಟ್ಟಿಗೆಯಿಂದ ಇಟ್ಟಿಗೆ; ಪುಸ್ತಕದಿಂದ ಪುಸ್ತಕ" ಎಂಬುದಾಗಿತ್ತು. ಇಂತಹ ಘೋಷಣೆಯು ರೋಮಾಂಚನಕಾರಿ ಸ್ಪಂದನೆಗೆ ಒಳಗಾಗಿ ಕೇರಳ ರಾಜ್ಯದಾದ್ಯಂತ ಪುಸ್ತಕ ಸಂಗ್ರಹಕ್ಕೆ ಮುನ್ನುಡಿ ಬರೆಯಿತು. ಭಸ್ಮವಾದ ಆರುಸಾವಿರ ಪುಸ್ತಕದ ಬದಲು ಹದಿಮೂರು ಸಾವಿರ ಅತ್ಯಮೂಲ್ಯ ಪುಸ್ತಕಗಳ ಸಂಗ್ರಹವಾಯಿತು. ಅದಕ್ಕನುಗುಣವಾಗಿ ಆಧುನಿಕ ಗ್ರಂಥಾಲಯಗಳ ಕಣ್ಣೋಟಗಳನ್ನು ಒಳಗೊಂಡ ಭವ್ಯ ಕಟ್ಟಡಕ್ಕೆ ಸಹಾಯಧನವೂ ಹರಿದು ಬಂತು. ಗ್ರಂಥ ಭಂಡಾರದ ನಾಶದ ಕ್ರಿಯೆಗೆ ಎದ್ದು ಬಂದ ಪ್ರತಿಕ್ರಿಯೆ ವಿಶಾಲ ಸ್ವರೂಪದಲ್ಲಿ ಸಂಘ ಪರಿವಾರಕ್ಕೆ ನುಂಗಲಾರದ ತುತ್ತಾಯಿತು.

ಗಜೇಂದ್ರಗಡ: ಕೃಷಿ ಕೂಲಿಕಾರರ ಸಂಘ ಪ್ರತಿಭಟನಾ ಧರಣಿ



ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ತಾಲೂಕಾ ಸಮಿತಿ ನೇತೃತ್ವದಲ್ಲಿ ಫೆ 08 ರಂದು ಸಂಘಟನೆಯ ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕು ಪತ್ರ ಉದ್ಯೋಗ ಖಾತ್ರಿ ಯೋಜನೆ ಜಾರಿಗಾಗಿ ಮತ್ತು ಬಾಕಿ ವೇತನ ಪಾವತಿಗಾಗಿ ಹಾಗೂ ಜನತಾ ಪ್ಲಾಟ್, ಉಣಚಗೇರಿಯ ಮನೆ ನಿವೇಶನ ಹಕ್ಕು ಪತ್ರಕ್ಕಾಗಿ ಒತ್ತಾಯಿಸಿ ಅನಿದಿಷ್ಟಾವಧಿ ಪ್ರತಿಭಟನಾ ಧರಣಿ ಗಜೇಂದ್ರಗಡ ತಹಶೀಲ್ದಾರ ಕಚೇರಿ ಎದುರಿಗೆ ನಡೆಸಲಾಯಿತು. ಈ ಪ್ರತಿಭಟನೆ ಮೆರವಣಿಗೆಯು ನಗರದ ಹಳೆ ಐಬಿಯಿಂದ ಪ್ರಾರಂಭವಾಗಿ ಮೆರವಣಿಗೆಯು ಗಜೇಂದ್ರಗಡದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ತಹಶೀಲ್ದಾರ ಕಚೇರಿ ಎದುರಿಗೆ ಪ್ರತಿಭಟನೆ ನಡೆಸಲಾಯಿತು. ತಾಲೂಕಾ ಕಾರ್ಯದರ್ಶಿಗಳಾದ ಶಿವು ಚವ್ಹಾಣ ಮತ್ತು ತಾಲೂಕಾ ಅಧ್ಯಕ್ಷರಾದ ಬಾಲು ರಾಠೋಡ ಮಾತನಾಡಿದರು.

ಈ ಹೋರಾಟದಲ್ಲಿ ಪೀರು ರಾಠೋಡ, ಎಂ ಎಸ್ ಹಡಪದ, ಕರಿಯಮ್ಮ ಗುರಿಕಾರ, ಶರಣಪ್ಪ ಗುರಿಕಾರ, ರಾಜು ಗಾರ್ಗಿ, ಜಗದೀಶ ಚೋಪಡೆ, ಸಿದ್ದಪ್ಪ ಕಾಡದ, ಶೋಭಾ ಚವ್ಹಾಣ, ಶರಣಪ್ಪ ಮೇಟಿ, ಪಾರವ್ವ ಕಲಾಲ, ಮಲ್ಲು ಕಾಸಾಯಿ, ಅಂಬ್ರೇಶ ಯಗರಿ, ಸರೋಜಾ ಗಾರ್ಗಿ, ಶಾಂತವ್ವ ರಾಠೋಡ, ಬಸವರಾಜ ಮಾಳೊತ್ತರ, ವೀರೇಶ ರಾಠೋಡ ಲಕ್ಕವ್ವ ಮಾಳೊತ್ತರ, ಹಾಜರಿದ್ದರು.

– ಬಾಲು ರಾಠೋಡ

ನಮ್ಮ ಚುರು-ಟ್ವೀಟ್

ಪ್ರಕಾಶ್ ರಾಜ್ @prakashraj

2014ರಲ್ಲಿ ಮಾರಾಟವಾದ ಪ್ರಾಮಿಸ್ ಟೂಥ್ ಪೇಸ್ಟ್ (ಬ್ರಶ್ ಮಾಡುವುದನ್ನು ಮರೆತುಬಿಟ್ಟಿದ್ದೆ)... ..ನನ್ನ ದೇಶದ ತೊಂದರೆಯಲ್ಲಿರುವ ರೈತರು ಮತ್ತು ನಿರುದ್ಯೋಗಿ ಯುವಕರ ಮುಖದಲ್ಲಿ ಮಂದಹಾಸವನ್ನು ತರಲಿಲ್ಲ .. ..ನಿನ್ನೆ ಕರ್ನಾಟಕದ ಪರಿವರ್ತನಾ ಯಾತ್ರೆಯಲ್ಲಿ ಮಾರಾಟವಾದ ಪ್ರಾಮಿಸ್ ಟೂತ್ ಪೇಸ್ಟ್ ಮೇಲೆ.. ..ನಿಮಗೆ ನಂಬಿಕೆ ಇದೆಯೇ?

ಫೆಬ್ರುವರಿ 5, 2018

“ಖಾಸಗೀ ಲಾಭಕೋರತನಕ್ಕೆ ಗೋವಾ ಅಚ್ಛೇ ದಿನ್ ಸರಕಾರ ಶರಣು”!



ಸುಪ್ರಿಂ ಕೋರ್ಟ್ ಫೆಬ್ರುವರಿ 7ರಂದು ಗೋವಾದ ಬಿಜೆಪಿ ಸರಕಾರ ನೀಡಿದ್ದ ಎಲ್ಲ 88 ಗಣಿಗಾರಿಕೆ ಗುತ್ತಿಗೆಗಳನ್ನು ರದ್ದು ಮಾಡಿ ತೀರ್ಪಿತ್ತಿದೆ.

ಈ ತೀರ್ಪಿನಲ್ಲಿ ಕಂಡು ಬರುವ ಸಂಗತಿಗಳು ಹೀಗಿವೆ:

* 2014ರಲ್ಲಿ ಸರಕಾರ ಗಣಿಗಳು ಮತ್ತು ಖನಿಜಗಳು(ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆಯ ಕಬ್ಬಿಣದ ಅದುರು ಮುಂತಾದವುಗಳ ಗಣಿಗಾರಿಕೆಯ ಗುತ್ತಿಗೆಯನ್ನು ಹರಾಜು ಮೂಲಕವೇ ನೀಡಬೇಕು ಎಂಬ ತಿದ್ದುಪಡಿ ಬರುವ ಸ್ವಲ್ಪವೇ ಮೊದಲು ಆತುರಾತುರವಾಗಿ 2007ರಿಂದಲೇ ಪೂರ್ವಾನ್ವಯವಾಗುವಂತೆ ಈ ಲೀಸ್‌ಗಳನ್ನು ಕೊಟ್ಟಿದೆ.
* ಖಾಸಗಿಯವರಿಗೆ ಗುತ್ತಿಗೆಗಳನ್ನು ಅತ್ಯಂತ ಅಗ್ಗ ದರದಲ್ಲಿ ಕೊಡಲಾಗಿದೆ.
* ಗೋವಾದ ಪರಿಸರದ ಬಗ್ಗೆ ನಿರ್ಲಕ್ಷ್ಯ ತೋರುವಾಗಲೇ “ಸರಕಾರದ ಆದಾಯವನ್ನು ಗರಿಷ್ಟಗೊಳಿಸುವ ಪ್ರಯತ್ನವೂ ಇರಲಿಲ್ಲ. ಬದಲಿಗೆ ಯಾವುದೇ ಸಕಾರಾತ್ಮಕ ಕಾರಣವಿಲ್ಲದೆ ಅದನ್ನು ಬಿಟ್ಟು ಕೊಡಲಾಯಿತು, ಖಾಸಗಿ ಉದ್ದಿಮೆದಾರರ ವಾಣಿಜ್ಯ ಮತ್ತು ಲಾಭದಾಸೆಯ ಮುಂದೆ ಶರಣಾಯಿತೆಂದೇ ಹೇಳಬಹುದು”
* ಕೆಲವು ಗುತ್ತಿಗೆದಾರರು 1500 ಕೋಟಿ ರೂ.ವರೆಗೂ ಸರಕಾರಕ್ಕೆ ತೆರದೆ ಇಟ್ಟು ಕೋಮಡಿದ್ದಾರೆ. ಅಂತಹ ಅಗಾಧ ಮೊತ್ತಗಳ ವಸೂಲಿಗೆ ಗಂಭಿರ ಪ್ರಯತ್ನಗಳನ್ನೂ ಮಾಡಿಲ್ಲ.
* ಗೋವಾದಲ್ಲಿನ ಪರಿಸರ ಕಾನೂನನ್ನು ಗಾಳಿಗೆ ತೂರಲಾಗಿದೆ– ಎಲ್ಲ ಪರಿಸರ, ಗಣಿ ಕಾನೂನುಗಳ ಸಾರಾಸಗಟು ಉಲ್ಲಂಘನೆಯಾಗಿದೆ.

ಈ ಎಲ್ಲ ವಿಷಯಗಳಲ್ಲಿ ರಾಜ್ಯದಲ್ಲಿ ಇದುವರೆಗೆ ನಡೆದಿರುವ ಎಲ್ಲ ಕಾನೂನುಬಾಹಿರತೆಗಳ ಬಗ್ಗೆ ವಿಶೇಷ ತನಿಖಾ ತಂಡವನ್ನು ಮತ್ತು ಚಾರ್ಟರ್ಡ್ ಅಕೌಂಟೆಂಟ್‌ಗಳ ತಂಡವನ್ನು ರಚಿಸಬೇಕು ಎಂದೂ ನ್ಯಾಯಾಲಯ ಆದೇಶ ನೀಡಿದೆ.

ಇಲ್ಲಿ ಒಂದು ಅಚ್ಛೇ ದಿನ್ ಹಗರಣದ ವಾಸನೆ ಖಂಡಿತ ಹೊಡೆಯುತ್ತಿದೆ. ಈ ಮೊಕದ್ದಮೆಯ ಅರ್ಜಿ ಸಲ್ಲಿಸಿದ್ದ ಗೋವಾ ಫೌಂಡೇಶನ್ ವಕೀಲರಾದ ಪ್ರಶಾಂತ ಭೂಷಣ್ ಇದೊಂದು ಕೋಲ್‌ಗೇಟ್ (ಕಲ್ಲಿದ್ದಲು ಗಣಿ ಗುತ್ತಿಗೆ ಹಗರಣ)ಗಿಂತಲೂ ಹೊಲಸಾದ, ದೊಡ್ಡದಾದ ಹಗರಣ ಎಂದಿದ್ದಾರೆ.

ಗುತ್ತಿಗೆ ಕಳಕೊಂಡವರಲ್ಲಿ ಬಿಲಿಯಾಧಿಪತಿ ಅನಿಲ್ ಅಗರವಾಲರ ವೇದಾಂತ ರಿಸೋರ್ಸಸ್ ಕಂಪನಿ ಯೂ ಸೇರಿದೆ ಎಂಬುದು ಗಮನಾರ್ಹ. ಬಿಜೆಪಿಯ ವಿದೇಶಿ ವಂತಿಗೆದಾರರ ಪಟ್ಟಿಯಲ್ಲಿ ಈ ಗುಂಪಿನ ಹೆಸರು ಬಹಳ ಸಲ ಬಂದಿದೆ.

ರಫೇಲ್ ವ್ಯವಹಾರದಲ್ಲಿ ಹಗರಣದ ವಾಸನೆ ಇದರೊಂದಿಗೇ ಬಂದಿರುವುದು ಕೇವಲ ಕಾಕತಾಳೀಯವಿರಬಹುದು. ಈ ಗುತ್ತಿಗೆಗಳನ್ನು ಕೊಟ್ಟ ಗೋವಾ ಮುಖ್ಯಮಂತ್ರಿಗಳು ಆಗ ದೇಶದ ರಕ್ಷಣಾ ಮಂತ್ರಿಯಾಗಿದ್ದರು.

ಕಾರ್ಮಿಕ ಕಾನೂನುಗಳ ರದ್ಧತಿ ಮತ್ತು ಗೋರಕ್ಷಣೆ ರಾಜಕೀಯದ ಪ್ರಯೋಗಾಲಯದಲ್ಲಿ ಮೂರೂ ಉಪಚುನಾವಣೆಗಳಲ್ಲಿ ಭಾರೀ ಪರಾಭವ

ರಾಜಸ್ಥಾನ ಅಚ್ಛೇ ದಿನ್‌ಗಳ ಆರಂಭದಲ್ಲಿ ಕಾರ್ಮಿಕ ಕಾನೂನುಗಳನ್ನು ‘ಸುಧಾರಿಸುವಲ್ಲಿ’ ಒಂದು ಪ್ರಯೋಗಾಲಯದಂತಾಗಿತ್ತು. ಕೇಂದ್ರದಲ್ಲಿ ತರಬೇಕೆಂದಿದ್ದ ‘ಸುಧಾರಣೆ’ಗಳನ್ನು (ಮಾಲಿಕ–ಪರ ಎಂದು ಬೇರೆ ಹೇಳಬೇಕಾಗಿಲ್ಲ) ಇಲ್ಲಿ ‘ಯಶಸ್ವಿ’ಯಾಗಿ ತರಲಾಯಿತು. ಇತ್ತೀಚಿನ ತಿಂಗಳುಗಳಲ್ಲಿ ಅದು ಆರೆಸ್ಸೆಸ್‌ನ ಗೋರಕ್ಷಣೆಯ ರಾಜಕೀಯದ ಪ್ರಯೋಗಾಲಯವೂ ಆಗಿಬಿಟ್ಟಿದೆ.

ಇಲ್ಲಿ ಕಳೆದ ವಾರ ನಡೆದ ಎರಡು ಲೋಕಸಭಾ ಉಪಚುನಾವಣೆಗಳು ಮತ್ತು ಒಂದು ವಿಧಾನಸಭಾ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಭಾರೀ ಸೋಲುಂಡಿದ್ದಾರೆ. ಕೇಂದ್ರದಲ್ಲೂ ಮತ್ತು ರಾಜ್ಯದಲ್ಲೂ ಅಧಿಕಾರದಲ್ಲಿರುವ ಪಕ್ಷ ಉಪಚುನಾವಣೆಯೊಂದರಲ್ಲಿ ಸೋಲುವುದು ಕಳೆದ 40 ವರ್ಷಗಳಲ್ಲಿ ಕಂಡಿರದ ವಿದ್ಯಮಾನ ಎನ್ನಲಾಗಿದೆ. ಗೋರಕ್ಷಕರ ಅಟ್ಟಹಾಸಗಳ ಕೇಂದ್ರವಾದ ಆಳ್ವರ್‌ನಲ್ಲಿ ಕೋಮು ಧ್ರುವೀಕರಣದ ತಂತ್ರ ವಿಫಲವಾಗಿರುವುದು ಹಲವು ಭಕ್ತರುಗಳ ಗಮನವನ್ನೂ ಸೆಳೆದಿದೆ. ಪ್ರಧಾನ ಮಂತ್ರಿಗಳು ಇಲ್ಲಿ ಪ್ರಚಾರಕ್ಕೆ ಬರಲಿಲ್ಲ ಎಂದು ಇನ್ನು ಕೆಲವು ಭಕ್ತರುಗಳು ಹೇಳುತ್ತಿದ್ದಾರೆ. ಇದು ಇತ್ತೀಚೆಗೆ ಒಂದು ಯಶಸ್ವಿ ರೈತ ಆಂದೋಲನ ನಡೆದ ರಾಜ್ಯ ಎಂಬುದನ್ನೂ ಗಮನಿಸಬೇಕು. ಕೋಮುಧ್ರುವೀಕರಣದ, ದ್ವೇಷ ರಾಜಕೀಯದ ತಂತ್ರಗಳು ಇನ್ನು ಮುಂದೆ ಫಲ ನೀಡವು ಎಂಬುದರ ಸಂಕೇತವೇ ಇದು ಎಂದು ಹಲವರು ಯೋಚಿಸುತ್ತಿದ್ದಾರೆ. ಕೋಮುಧ್ರುವೀಕರಣವನ್ನು ವಿಫಲಗೊಳಿಸುವ ದಾರಿಯತ್ತವೂ ಈ ಫಲಿತಾಂಶಗಳು ಸಂಕೇತ ನೀಡಿವೆ.

ಮಲ್ಯ ಸಾಲಬಾಕಿ ಮಾಹಿತಿ: ಹಣಕಾಸು ಇಲಾಖೆಯ ಬಳಿ ಇಲ್ಲವೇ ಅಥವ ...?

ವಿಜಯ ಮಲ್ಯರವರ ಸಾಲಬಾಕಿ ಎಷ್ಟು ಎಂದು ಮಾಹಿತಿ ಹಕ್ಕು ಕಾಯ್ದೆಯ ಅಡಿಯಲ್ಲಿ ಅರ್ಜಿ ಹಾಕಿದ್ದವರಿಗೆ ಹಣಕಾಸು ಮಂತ್ರಾಲಯ ತಮ್ಮ ಬಳಿ ಮಾಹಿತಿ ಇಲ್ಲೆಂದಿರುವುದಕ್ಕೆ ಮುಖ್ಯ ಮಾಹಿತಿ ಆಯುಕ್ತರು(ಸಿಐಸಿ) ಹಣಕಾಸು ಇಲಾಖೆಯ ಕಟ್ಟು ಟಿಪ್ಪಣಿ ಮಾಡಿದ್ದಾರೆ ಎಂದು ಪಿಟಿಐ ವರದಿ ಮಾಡಿದೆ.

ನವಂಬರ್ 2016 ರಲ್ಲಿ ನೋಟು ರದ್ದತಿ ಬಗ್ಗೆ ಸಂಸತ್ತಿನಲ್ಲಿ ಮಾತಾಡುತ್ತ ಹಣಕಾಸು ಂತ್ರಿಗಳು ವಿಜಯ ಮಲ್ಯರ ಸಾಲ ಬಾಕಿ ತಮ್ಮ ಸರಕಾರಕ್ಕೆ ಯುಪಿಎ ಸರಕಾರದಿಂ ಸಿಕ್ಕ ಬಳುವಳಿ ಎಂದಿದ್ದರು. ಇದನ್ನು ಅನುಸರಿಸಿ ಖರೆ ಎಂಬವರು ಮಲ್ಯರವರ ಸಾಲಗಳ ವಿವರಗಳನ್ನು ಕೊಡಿ ಎಂದು ಕೇಳಿದರು. ಮೊದಲಿಗೆ ಹಣಕಾಸು ಇಲಾಖೆ ಇದನ್ನು ಕೊಡಲಾಗುವುದಿಲ್ಲ, ಏಕೆಂದರೆ ಇದು ವೈಯಕ್ತಿಕ ಸುರಕ್ಷತೆ ಮತ್ತು ಸರಕಾರದ ಹಿತಾಸಕ್ತಿಗೆ ಮಾರಕ ಎಂಬ ಕಾರಣಕ್ಕೆ ಕಾಯ್ದೆಯಿಂದ ಇದಕ್ಕೆ ವಿನಾಯ್ತಿ ಇದೆ ಎಂದಿತು. ನಂತರ ಈ ಮಾಹಿತಿ ನಮ್ಮ ಬಳಿ ಇಲ್ಲ, ಸಾಲ ನೀಡಿದ ಬ್ಯಾಂಕ್ ಅಥವ ರಿಝರ್ವ್ ಬ್ಯಾಂಕ್ ಬಳಿ ಇರಬಹುದು ಎಂಬ ಉತ್ತರ ಬಂತು. ಅರ್ಜಿದಾರರು ಮಾಹಿತಿ ಆಯೋಗಕ್ಕೆ ಅಪೀಲು ಸಲ್ಲಿಸಿದರು. ಈ ಅಪೀಲಿನ ವಿಚಾರಣೆಯ ವೇಳೆಯಲ್ಲಿ ಹಣಕಾಸು ಇಲಾಖೆಯ ಉತ್ತರ ಅಸ್ಪಷ್ಟವಾಗಿದೆ ಮತ್ತು ಕಾನೂನಿನ ಪ್ರಕಾರ ಸಮರ್ಥನೀಯವಲ್ಲ ಎಂದು ಬಲವಾಗಿ ಟಿಪ್ಪಣಿ ಮಾಡಿದ ಆಯುಕ್ತರು ನಿಮ್ಮ ಬಳಿ ಮಾಹಿತಿ ಇಲ್ಲವಾದರೆ ಈ ಅರ್ಜಿಯನ್ನು ಈ ಮಾಹಿತಿ ಇರುವ ಸಾರ್ವಜನಿಕ ಪ್ರಾಧಿಕಾರಕ್ಕೆ ವರ್ಗಾಯಿಸಿ ಎಂದು ನಿರ್ದೇಶನ ನೀಡಿದರು. ಎಂದು ವರದಿಯಾಗಿದೆ.

ಪಿಎಂ ಮೋದೀಕೋ ಗುಸ್ಸಾ ಕ್ಯೋಂ ಆತಾ ಹೈ

ಇದು ಪ್ರಧಾನಮಂತ್ರಿಗಳು ಈ ವಾರ ಸಂಸತ್ತಿನಲ್ಲಿ ರಾಷ್ಟ್ರಪತಿಗಳ ಭಾಷಣದ ಮೇಲೆ ಚರ್ಚೆಗೆ ಉತ್ತರ ಕೊಡುತ್ತಾ ಮಾಡಿದ ‘ಅಮೋಘ’ ಭಾಷಣದ ಬಗ್ಗೆ ಪತ್ರಕರ್ತರೊಬ್ಬರ ಟಿಪ್ಪಣಿ. ಕಾಂಗ್ರೆಸ್ ಪಕ್ಷವನ್ನು ಹಿಗ್ಗಾಮುಗ್ಗಾ ಟೀಕಿಸಿದ ಈ ಭಾಷಣ ವಾಸ್ತವವಾಗಿ ಸಾರ್ವಜನಿಕ ಸಭೆಯಲ್ಲಿನ, ಅದೂ ಚುನಾವಣಾ ಪ್ರಚಾರ ಸಭೆಯಲ್ಲಿನ ಭಾಷಣದಂತಿತ್ತು ಎಂಬ ಟೀಕೆ ವ್ಯಾಪಕವಾಗಿ ಬಂದಿದೆ. ಚರ್ಚೆಯಲ್ಲಿ ಸಂಸದ್ ಸದಸ್ಯರು ತಮ್ಮನ್ನು ಆರಿಸಿದ ಜನಗಳ ಪರವಾಗಿ ಎತ್ತಿದ ಯಾವ ಪ್ರಶ್ನೆಗಳನ್ನೂ ಪ್ರಧಾನಿಗಳು ಎತ್ತಿಕೊಳ್ಳಲಿಲ್ಲ ಎಂಬುದಂತೂ ನಿಜ.

ಲೋಕಸಭಾ ಸದಸ್ಯರಾಗಿ ಪ್ರತಿಜ್ಞೆ ಸ್ವೀಕರಿಸಿ ಸಂಸತ್ತಿನ ಮೆಟ್ಟಿಲುಗಳಲ್ಲಿ ಸಾಷ್ಟಾಂಗ ನಮಸ್ಕಾರ ಹಾಕಿ ಸಂಸದ್ ಭವನ ಪ್ರವೇಶಿಸಿದ ಪ್ರಧಾನಿಗಳು ಸಂಸತ್ತಿನ ಚರ್ಚೆಗಳಲ್ಲಿ ಹಾಜರಿದ್ದುದೇ ಅಪರೂಪ, ಅದರಿಂದಾಗಿಯೇ ಅವರು ಸಾರ್ವಜನಿಕ ಸಭೆಯ ಭಾಷಣ ಮಾಡಿರಬಹುದು ಎನ್ನುವವರಿದ್ದಾರೆ. ಆದರೂ ಪ್ರಧಾನಿಗಳಿಗೇಕೆ ಇಷ್ಟು ಸಿಟ್ಟು ಬಂದಿದೆ ಎಂಬ ಪ್ರಶ್ನೆಗೆ ಇದು ಉತ್ತರವಾಗದು.

ಹಿರಿಯ ಪತ್ರಕರ್ತ ಪ್ರೇಮಶಂಕರ್ ಝಾ ಪ್ರಕಾರ ಇದರಲ್ಲಿ ತೀವ್ರ ಹತಾಶೆಯ ಸಂಕೇತ ಸಿಗುತ್ತದೆ. ಸಾಮಾನ್ಯವಾಗಿ ತಾವು ಒಳ್ಳೆಯ ಕೆಲಸ ಮಾಡುತ್ತೇವೆ ಎಂಬ ಆತ್ಮವಿಶ್ವಾಸವಿದ್ದಾಗ ಸರಕಾರಗಳ ಮುಖ್ಯಸ್ಥರು ತಮ್ಮ ಸಾಧನೆಗಳ ಬಗ್ಗೆ ಹೇಳಿಕೊಳ್ಳುತ್ತಾರೆ. ಹಾಗಿಲ್ಲದಿದ್ದಾಗ ತನ್ನ ಹಿಂದೆ ಆಳಿದವರ ನಿಜ ಅಥವ ಕಾಲ್ಪನಿಕ ವಿಫಲತೆಗಳ ಬಗ್ಗೆಯೇ ಮಾತಾಡುತ್ತಾರೆ. ನಮ್ಮ ಪ್ರಧಾನಿಗಳು ಈಗ ಆ ಸ್ಥಿತಿಯಲ್ಲಿರುವಂತೆ ಕಾಣುತ್ತದೆ ಎಂಬ ಅವರ ತರ್ಕವನ್ನು ಅಲ್ಲಗಳೆಯುವಂತಿಲ್ಲ.

ಗುಜರಾತಿನಲ್ಲಿ ಸುಮಾರಾಗಿ ಸೋತೇ ಹೋದರು ಎಂಬಂತಹ ಪರಿಸ್ಥಿತಿಯಿಂದ ಹೇಗೋ ಪಾರಾದ ನಂತರ ಇದು ಆರಂಭವಾಗಿದೆ. ಕಳೆದ ವಾರ ರಾಜಸ್ಥಾನದಲ್ಲಿನ ‘ಅಮೋಘ’ ಸೋಲಿನ ನಂತರ ಇದು ಇಮ್ಮಡಿಯಾಗಿದೆ ಎನ್ನುತ್ತಾರೆ ಹಲವು ಪ್ರಧಾನಿಗಳನ್ನು ಕಂಡಿರುವ ಈ ಅನುಭವೀ ಪತ್ರಕರ್ತರು. ತಮ್ಮ ಪಕ್ಷದ ವಿಶ್ವಾಸಾರ್ಹತೆ ಜನಗಳ ಕಣ್ಣಲ್ಲಿ ತಗ್ಗುತ್ತಿದೆ ಎಂದು ಕಂಡು ಬರುವಾಗ ಎದುರು ಸಿಕ್ಕಿದ್ದನ್ನೆಲ್ಲ ಚಿಂದಿ ಮಾಡುವ ಭಾವ ಇಲ್ಲಿ ಕಾಣುತ್ತದೆ ಎನ್ನುತ್ತಾರೆ ಅವರು.

ಇರಬಹುದು. ಹೀಗೆ ಮಾಡುವಾಗ ಸತ್ಯಾಂಶಗಳು ಮುಖ್ಯವಾಗುವುದೇ ಇಲ್ಲ. ಆದ್ದರಿಂದಲೇ ಅವರು ಸುಮಾರು ಎರಡು ಗಂಟೆಗಳ ಕಾಲ ಪ್ರತಿಪಕ್ಷಗಳ ಪ್ರತಿಭಟನೆಗಳು ಮತ್ತು ಆಳುವ ಪಕ್ಷದ ಸದಸ್ಯರ ಚಪ್ಪಾಳೆಗಳ ನಡುವೆ ಹೇಳಿದ್ದರಲ್ಲಿ ಹಲವರು ಹಲವು ತಪ್ಪುಗಳನ್ನು, ಸುಳ್ಳುಗಳನ್ನೂ ಕಂಡಿದ್ದಾರೆ. ಇದರಲ್ಲಿ ಹೊಸತೇನಿದ ಎಂದು ಕೇಳಬಹುದು.

ಎನ್‌ಡಿಟಿವಿಯ ಶ್ರೀನಿವಾಸನ್ ಜೈನ್ ಪ್ರಕಾರ ಇವರು ಪ್ರಧಾನಿಯಾದಾಗ ಎನ್‌ಪಿಎ ಗಳು ಅಂದರೆ ಬ್ಯಾಂಕುಗಳ ವಾಪಾಸು ಬರಲಾರದ ಸಾಲಗಳ ಪ್ರಮಾಣ 36% ಎನ್ನಲಾಗಿತ್ತು, ವಾಸ್ತವವಾಗಿ ಅದು 82% ಎಂದು ತಿಳಿದು ಬಂತು, ಈ ಸತ್ಯವನ್ನು ತಿಳಿಯಿರಿ ಎಂದರು ಪ್ರಧಾನಿಗಳು ಸಂಸತ್ ಸದಸ್ಯರಿಗೆ. ಆದರೆ ಅದು 36% ವೂ ಅಲ್ಲ, 82% ವೂ ಅಲ್ಲ ಕೇವಲ 3.8%. ಅವರು ಹೇಳಿದ 52ಲಕ್ಷ ಕೋಟಿ ರೂ. ಎನ್‌ಪಿಎ ಅಲ್ಲ, ಬದಲಿಗೆ ಸಾರ್ವಜನಿಕ ವಲಯದ ಬ್ಯಾಂಕುಗಳು ನೀಡಿದ ಒಟ್ಟು ಸಾಲ ಎಂದು ರಿಝರ್ವ್ ಬ್ಯಾಂಕ್ ಮಾಹಿತಿಯನ್ನು ಆಧರಿಸಿ ಆಳು ವ ಪಕ್ಷದ ವಕ್ತಾರರಿಂದ ‘ಸ್ಪಷ್ಟೀಕರಣ ಕೇಳಿದ ನಂತರ ಬಿಜೆಪಿಯ ಅಧಿಕೃತ ಟ್ವಿಟರ್‌ನಲ್ಲಿ ಪ್ರಧಾನಿಗಳ ಈ ಅಮೋಘ ಸತ್ಯವನ್ನು ತೆಗೆಯಲಾಯಿತು. ಅಂದರೆ ಈಗ ಸಂಸತ್ ಸದಸ್ಯರು ಮತ್ತು ನಾವು ನಾಗರಿಕರು ತಿಳಿಯಬೇಕಾದ ಸತ್ಯವೇ ಬೇರೆ ಎಂದಂತಾಯಿತು. 600 ಕೋಟಿ ಭಾರತೀಯರ ಮತಗಳಂತೆ!

ಸರದಾರ ಪಟೇಲರು ಪ್ರಧಾನ ಮಂತ್ರಿಯಾಗಿದ್ದರೆ ಕಾಶ್ಮೀರ ಸಮಸ್ಯೆಯೇ ಇರುತ್ತಿರಲಿಲ್ಲ ಎಂಬ ಅವರ ಸತ್ಯಶೋಧನೆಯೂ ಇದೇ ವರ್ಗಕ್ಕೆ ಸೇರಿದ್ದು ಎಂದು ಹಲವು ಪರಿಣಿತರು ಹೇಳಿದ್ದಾರೆ. ಬಹುಶಃ ಜಮ್ಮು–ಕಾಶ್ಮೀರ ಭಾರತದ ಭಾಗವಾಗುತ್ತಲೇ ಇರಲಿಲ್ಲ ಎಂದೊಬ್ಬರು ಹೇಳಿದ್ದಾರೆ.


ಅಂದರೆ ನಾವು ತಿಳಿಯಬೇಕಾದ ಸತ್ಯ ಪ್ರಧಾನಿಗಳಿಂದ ಸಿಗುವ ಸಂಭವ ಬಹಳ ಕಡಿಮೆಯಾಗುತ್ತಿದೆ, ಅವರ ಪಕ್ಷದ ಇತರ ಮುಖಂಡರಿಂದಂತೂ ಇನ್ನೂ ಕಡಿಮೆ ಎಂಬುದು ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ.

ಈ ನಡುವೆ ಪ್ರಧಾನಿಗಳ ಸಂಸತ್ ಭಾಷಣ ದೇಶದ ವ್ಯಂಗ್ಯಚಿತ್ರಕಾರರಿಗೆ ಔತಣವೇ ಆದಂತಿದೆ ಎಂದು ಸ್ಕ್ರಾಲ್.ಇನ್ ಕಂಡು ಹಿಡಿದಿದೆ. ಅವುಗಳಲ್ಲಿ ಎರಡು ಇಲ್ಲಿವೆ.

ನಮ್ಮ ಪ್ರಧಾನ ಮಂತ್ರಿಗಳನ್ನು ಗ್ರಂಥಕಕರ್ತರೂ ಆಗಿಸಿರುವ ಅವರ ಪುಸ್ತಕ ‘ಎಕ್ಸಾಮ್ ವಾರಿಯರ್ಸ್’ (ಪರೀಕ್ಷಾ ಯೋಧರು) ವಿದೇಶಾಂಗ ಮಂತ್ರಿಗಳು ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಿಗಳಿಂದ ಬಿಡುಗಡೆಗೊಂಡಿದೆ. ಇದು ಪರೀಕ್ಷಾರ್ಥಿವಿದ್ಯಾರ್ಥಿಗಳಿಗೆಂದೇ ಬರೆದ 25 ಮಂತ್ರಗಳಿರುವ ಪುಸ್ತಕ–ಸುದ್ದಿ



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಸಿಫಿ.ಕಾಂ



ವ್ಯಂಗ್ಯಚಿತ್ರ:ಮಂಜುಲ್, ಫಸ್ಟ್‌ಪೋಸ್ಟ್

ಬಜೆಟ್ 2018 – ಬಿಡಿಕಾಸು ಕೊಡದೆ ಭರ್ಜರಿ ಯೋಜನೆಗಳ ಭರಾಟೆ

– ಪ್ರಭಾತ ಪಟ್ನಾಯಕ್ (ಅನುವಾದ: ಎಂ.ಜಿ. ವೆಂಕಟೇಶ್)



ಈ ವರ್ಷದ ಬಜೆಟ್‌ನಲ್ಲಿ ಅನುಸರಿಸಲಾಗುತ್ತಿರುವ ತಂತ್ರವೆಂದರೆ – "ರೈತರ ಪರ", "ಬಡವರ ಪರ" "ಮಹಿಳೆಯರ ಪರ" ಎಂದು ಹೆಚ್ಚಿನ ಗದ್ದಲ ಮಾಡುವುದು, ಈ ದಿಸೆಯಲ್ಲಿ ಬಜೆಟ್‌ನಲ್ಲಿ ಒಂದು ಕಾಸನ್ನು ನೀಡದೆ ಬಜೆಟಿನ ಆಚೆಗಿರುವ ಮೂಲಗಳಿಂದ ಅಂಗೈನಲ್ಲೇ ಆಕಾಶ ತೋರಿಸುವುದು., ಜಿ.ಎಸ್.ಟಿ.ಯಿಂದ ಕಡಿಮೆಯಾದ ಆದಾಯವನ್ನು ವೆಚ್ಚದ ಕಡಿತದ ಮುಖಾಂತರ ವಿತ್ತೀಯ ಕೊರತೆಯನ್ನು ತುಂಬಿಕೊಳ್ಳುವುದು.

2018–19ನೇ ಸಾಲಿನ ಕೇಂದ್ರ ಬಜೆಟ್ ನಂಬಲಾಗದ ಯೋಜನೆಗಳನ್ನು ರೂಪಿಸುವಲ್ಲಿ ಹೊಸ ದಾಖಲೆಯನ್ನೇ ಸ್ಥಾಪಿಸಿದೆ. ಎಲ್ಲಾ ಬಜೆಟ್‌ಗಳಲ್ಲೂ ಸ್ವಲ್ಪ ಮಟ್ಟಿನ ಸತ್ಯವನ್ನು ಮರೆಮಾಚುವ ಚಾತುರ್ಯವಿದ್ದರೂ, ಭರ್ಜರಿ ಯೋಜನೆಗಳನ್ನು ಘೋಷಿಸಿ ಅದಕ್ಕೆ ಸಮರ್ಪಕವಾದ ಸಂಪನ್ಮೂಲವನ್ನೇ ಒದಗಿಸದಿರುವುದು, ಬಜೆಟ್ ತಯಾರಿಯಲ್ಲಿ ಹಿಂದೆಂದೂ ಕಾಣದ ಸಂಗತಿ. ಉದಾಹರಣೆಗೆ ಹೇಳುವುದಾದರೆ, ಬಜೆಟ್‌ನಲ್ಲಿ ಘೋಷಿಸಲಾದ "ವಿಶ್ವದ ಬಹುದೊಡ್ಡ ಆರೋಗ್ಯಸೇವಾ ಕಾರ್ಯಕ್ರಮ" ದೇಶದ 40% ಭಾಗ ಜನಸಂಖ್ಯೆ ಹೊಂದಿರುವ 10 ಕೋಟಿ ಕುಟುಂಬಗಳಿಗೆ ತಲಾ 5 ಲಕ್ಷ ವಿಮಾ ಸುರಕ್ಷೆಯನ್ನು ಒದಗಿಸುವ ಉದ್ದೇಶ ಹೊಂದಿರುತ್ತದೆ. ಇಂತಹ ಯೋಜನೆಗೆ ಒದಗಿಸಿರುವುದು ಬರಿಯ 2,000 ಕೋಟಿ. ಇದು ಹಿಂದಿನ (ರೂ. 1 ಲಕ್ಷ ವಿಮಾ ಸುರಕ್ಷೆ ಕೊಟ್ಟ) ಯೋಜನೆಗಿಂತ 672 ಕೋಟಿ ಹೆಚ್ಚಾಗಿದ್ದು (ಅದು ಸಹ ಪೂರ್ಣವಾಗಿ ಖರ್ಚಾಗಿಲ್ಲ).

ವಿಮಾ ಸೇವೆಯ ಮೂಲಕ ಆರೋಗ್ಯಸೇವೆ ಒದಗಿಸುವ ಮಾರ್ಗ ಅದರ ಉದ್ದೇಶಕ್ಕೆ ವ್ಯತಿರಿಕ್ತವಾಗಿ ಕೆಲಸ ಮಾಡುತ್ತದೆ. ಅದು ಕೇವಲ ಖಾಸಗಿ ಆಸ್ಪತ್ರೆ ಮತ್ತು ವಿಮಾ ಕಂಪನಿಗಳ ಆದಾಯ ಹೆಚ್ಚಿಸುತ್ತದೆಯೆಂದು ಪರಿಣಿತರು ಸರಿಯಾಗಿಯೇ ಗ್ರಹಿಸಿದ್ದಾರೆ. ರಾಷ್ಟ್ರೀಯ ಆರೋಗ್ಯ ಸೇವಾ ಮುಖಾಂತರ ಆರೋಗ್ಯ ರಕ್ಷಣೆಯನ್ನು ಸಾರ್ವಜನಿಕ ಕ್ಷೇತ್ರದಲ್ಲಿ (ಹಲವು ಯೂರೋಪ್ ರಾಷ್ಟ್ರಗಳಲ್ಲಿರುವಂತೆ) ಒದಗಿಸುವುದೇ ಇರುವ ಏಕೈಕ ವಿವೇಕಯುತ ಮಾರ್ಗ. ಅಮೇರಿಕಾದಲ್ಲಿ ಆರೋಗ್ಯರಕ್ಷಣೆಗಾಗಿ ಯೂರೋಪ್ ದೇಶಗಳಿಗಿಂತ ಬಜೆಟ್‌ನ ಹೆಚ್ಚುಪಾಲು ಖರ್ಚುಮಾಡುತ್ತಿದ್ದರೂ ಅದರ ಸಾಧನೆ ತೀರಾ ಕಳಪೆಯಾಗಿರುವುದಕ್ಕೆ ಕಾರಣ, ರಾಷ್ಟ್ರೀಯ ಆರೋಗ್ಯ ಸೇವೆಗೆ ಬದಲಾಗಿ ವಿಮಾ ಮಾರ್ಗ ಅನುಸರಿಸುವುದೇ.

ಈ ವಿಷಯವನ್ನು ಒಂದು ಕ್ಷಣ ಪಕ್ಕಕ್ಕಿಡೋಣ. ವಿಮಾ ಯೋಜನೆ'ಗೂ ಸರ್ಕಾರ ಬಜೆಟ್‌ನಲ್ಲಿ ನಿಗದಿಪಡಿಸಿರುವ ಮೊತ್ತ ಅವಶ್ಯಕತೆಗೆ ಹೋಲಿಸಿದರೆ ತೀರಾ ಕಡಿಮೆಯಿದೆ. ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನಾ' (ಆರ್.ಎಸ್.ಬಿ.ವೈ. – ಈ ಹೊಸ ಯೋಜನೆಯ ಹಳೆ ಆವೃತಿ) ಪ್ರಾರಂಭವಾದಾಗ ಗರಿಷ್ಟ ಪರಿಹಾರ ಪ್ರತಿ ಕುಟುಂಬಕ್ಕೆ ರೂ.30,000 ಆಗಿತ್ತು. ಇದಕ್ಕೆ ಪ್ರೀಮಿಯಂ ಪ್ರತಿ ಕುಟುಂಬಕ್ಕೆ ಬಹುಪಾಲು ರಾಜ್ಯಗಳಲ್ಲಿ ರೂ. 500 ಆಗಿದ್ದು ಇದು ಒಟ್ಟು ಮೊತ್ತದ ಅರವತ್ತನೇ ಒಂದು ಭಾಗವಾಗಿತ್ತು.

ಇದೇ ಕ್ರಮವನ್ನು ಅಂದರೆ ಹಳೆ ದರದಂತೆ (ಮತ್ತು ಹಿಂದಿನ ಯೋಜನೆಯಷ್ಟೇ ಒರಮಾಣಧ ಕುಟುಂಬಗಳನ್ನು ಯೋಜನೆ ಮುಟ್ಟುತ್ತದೆ ಎಂದು ಕೊಂಡರೆ) ಅನ್ವಯಿಸಿದರೆ 5 ಲಕ್ಷ ಗರಿಷ್ಟ ಮೊತ್ತವನ್ನು ಪಡೆಯಲು ಪ್ರೀಮಿಯಂ ಮೊತ್ತ ರೂ. 8,300 ಆಗಬೇಕು ಮತ್ತು 10 ಕೋಟಿ ಕುಟುಂಬಗಳಿಗೆ ಒಟ್ಟು ಪ್ರೀಮಿಯಂ ರೂ. 83,000 ಕೋಟಿಯಾಗುತ್ತದೆ. ಈ ಪ್ರೀಮಿಯಂ ವೆಚ್ಚ ಕೇಂದ್ರ ಮತ್ತು ರಾಜ್ಯ 60:40 ಅನುಪಾತದಲ್ಲಿ ಭರಿಸಿದರೂ (ಈಶಾನ್ಯ ರಾಜ್ಯ 90:10 ಅನುಪಾತ ಮುಂತಾದವನ್ನು ನಿರ್ಲಕ್ಷಿಸಿ) ಮತ್ತು ಎಲ್ಲ ರಾಜ್ಯಗಳು ಈ ಅನುಪಾತವನ್ನು ಒಪ್ಪಿಕೊಂಡರೂ ಕೇಂದ್ರ ಸರ್ಕಾರದ ಬಜೆಟ್ ರೂ. 50,000 ಕೋಟಿಯಾಗಬೇಕಿತ್ತು.

2,000 ಕೋಟಿ ಮೀಸಲಿಡುವ ಮುಖಾಂತರ ಕೇಂದ್ರ ಸರ್ಕಾರ ಈ ಯೋಜನೆಯಲ್ಲಿ ನೋಂದಣಿಯಾಗುವರ ಸಂಖ್ಯೆ ತೀರಾ ಕಡಿಮೆಯಿರುತ್ತದೆ ಎಂದು ನಂಬಿದಂತೆ ಕಾಣುತ್ತದೆ. ನಿಧಾನಗತಿಯ ಅಥವಾ ಪ್ರಾರಂಭವೇ ಆಗದಿರುವ ಯೋಜನೆಗೆ ಇಷ್ಟು ಹಣ ಸಾಕೆಂದು ಭಾವಿಸಿದಂತೆ ಕಾಣುತ್ತದೆ. ಆದರೂ ಈ ಮುಖಾಂತರ ಭರ್ಜರಿ ಪ್ರಚಾರ ಪಡೆಯಲು ಯೋಚಿಸಿರುವುದನ್ನು ಗಮನಿಸಿದರೆ, ಬಡವರ ಬಗ್ಗೆ ಸರಕಾರಕ್ಕೆ ಇರುವ ಕಾಳಜಿ ಎಂತಹುದೆಂದು ತಿಳಿಯುತ್ತದೆ.

ಇದು ಮೊದಲನೇಯ ವರ್ಷವಾಗಿರುವುದರಿಂದ 2,000 ಕೋಟಿ ನಿಗದಿಪಡಿಸಿರುವುದು ಮತ್ತು ಯೋಜನೆ ಕಾರ್ಯಾರಂಭ ಮಾಡುವುದಕ್ಕೆ ವೇಳೆ ತೆಗೆದುಕೊಳ್ಳುವುದರಿಂದ ಸಾಂಕೇತಿಕವೇ ಎಂದು ವಾದಿಸಲಾಗುತ್ತಿದೆ. ಸರ್ಕಾರ ಸುಮ್ಮನೆ ನೀತಿ ಆಯೋಗ ಮತ್ತು ಆರೋಗ್ಯ ಮಂತ್ರಾಲಯದ ಅಧಿಕಾರಿಗಳು ಸಿದ್ಧಪಡಿಸಿದ ಅಂಕಿ ಅಂಶಗಳನ್ನು ಗಿಳಿಪಾಠ ಒಪ್ಪಿಸುತ್ತಿದೆ. ಅವರ ಪ್ರಕಾರ ವಾರ್ಷಿಕ ಪ್ರೀಮಿಯಂ ಕುಟುಂಬಕ್ಕೆ ಕೇವಲ 1,100 ರಿಂದ 1,200, ಅಂದರೆ (ಹಿಂದಿನ ಯೋಜನೆಯ) ಗರಿಷ್ಟ ಸೌಲಭ್ಯ ಸುಮಾರು 17 ಪಟ್ಟಾದರೂ ಪ್ರೀಮಿಯಂ ಕೇವಲ ಎರಡರಷ್ಟು. ಇದರಿಂದ ಎರಡು ತೀರ್ಮಾನಗಳಿಗೆ ಮಾತ್ರ ತಲುಪಬಹುದು. ಒಂದೋ ನೀತಿ ಆಯೋಗ ಮತ್ತು ಆರೋಗ್ಯ ಮಂತ್ರಾಲಯಗಳಿಗೆ ಈ ವಿಷಯದ ಬಗ್ಗೆ ಏನೂ ಗೊತ್ತಿಲ್ಲ, ಅಥವಾ ಮತ್ತು "ವಿಶ್ವದ ಅತಿದೊಡ್ಡ ಆರೋಗ್ಯ ರಕ್ಷಣಾ ಯೋಜನೆ" ಎಂದು ಭರ್ಜರಿ ಪ್ರಚಾರ ಮಾಡಿದರೂ, ಬರಿಯ ಜನರ ಮೂಗಿಗೆ ತುಪ್ಪ ಸವರುವ ಕಾರ್ಯಕ್ರಮವಾಗಿಯೇ ಅದನ್ನು ತಯಾರಿಸಲಾಗಿದೆ.


ಮತ್ತೊಂದು ಚರ್ಚೆಗೆ ಒಳಗಾಗುತ್ತಿರುವ ವಿಷಯವೆಂದರೆ ಬಜೆಟ್ ಕೃಷಿ ಪರವಾಗಿದೆ ಎಂಬುದು. ಸಾಂಸ್ಥಿಕ ಸಾಲವನ್ನು ರೂ. 10 ಲಕ್ಷ ಕೋಟಿಯಿಂದ ರೂ. 11 ಲಕ್ಷ ಕೋಟಿಗೆ ಏರಿಸಿರುವುದು: ಖರೀಫ್ ಬೆಳೆಗಳಿಗೆ ಕೃಷಿಗೆ ಕನಿಷ್ಟ ಬೆಂಬಲ ಬೆಲೆಯನ್ನು ಒಟ್ಟು ಉತ್ಪಾದನಾ ವೆಚ್ಚದ 50% ರಷ್ಟು ಹೆಚ್ಚಿಸುವುದು – ಎರಡು ಪ್ರಮುಖ ಬಜೆಟ್ ಆಶ್ವಾಸನೆಗಳು.

ಈ ಎರಡೂ ವಿಷಯಗಳು ಬಜೆಟ್ ಪರಿಧಿಗೆ ಬರುವ ವಿಷಯವೇ ಅಲ್ಲ. ಸಾಲದ ಮಿತಿಯನ್ನು ನಿರ್ಧರಿಸುವುದು ಬ್ಯಾಂಕ್‌ಗಳ ಹೊಣೆ. ಸರ್ಕಾರ ಬ್ಯಾಂಕ್‌ನ ಆಡಳಿತದಲ್ಲಿ ಕೈಯಾಡಿಸುವಂತಿಲ್ಲ, ಹೆಚ್ಚೆಂದರೆ ಆದ್ಯತಾ ವಲಯವನ್ನು ಗುರುತಿಸಬಹುದು ಮತ್ತು ಈಗಾಗಲೇ ಬ್ಯಾಂಕ್‌ಗಳು ಈ ಕೆಲಸವನ್ನೂ ಮಾಡುತ್ತಲೇ ಬಂದಿವೆ ಎನ್ನಲಾಗಿದೆ. ಕೃಷಿ ಅದ್ಯತಾ ವಲಯವನ್ನು ಎಷ್ಟು 'ವಿಶಾಲವಾಗಿ' ಗುರುತಿಸಲಾಗಿದಯೆಂದರೆ, ರೂ. 11 ಲಕ್ಷ ಕೋಟಿ ಮೂಲಕ ಸಾಲದ ರೂಪದಲ್ಲಿ "ಕೃಷಿರಂಗ"ಕ್ಕೆ ತಲುಪಬಹುದೇ ಹೊರತು ರೈತರಿಗಲ್ಲ.

ಕನಿಷ್ಟ ಬೆಂಬಲ ಬೆಲೆಯನ್ನು ಒಟ್ಟು ನಿರ್ವಹಣಾ ವೆಚ್ಚದ $1\frac{1}{2}$ ಪಟ್ಟು ಎಂದು ಘೋಷಿಸಿರುವುದಕ್ಕೂ ಯಾವುದೇ ಅರ್ಥವಿಲ್ಲ. ಕಾರಣ ರೈತರ ಉತ್ಪಾದನೆಯನ್ನು ಸರ್ಕಾರ ನೇರವಾಗಿ ಖರೀದಿಸುವುದಿಲ್ಲ. ದುರಂತವೆಂದರೆ ಕೃಷಿರಂಗದಲ್ಲಿ ಬೆಲೆ ಕುಸಿತದ ಬಗೆ ದೇಶಾದ್ಯಂತ ಹೋರಾಟ ನಡೆದಿದ್ದು, ಉತ್ತರ ಪ್ರದೇಶದಲ್ಲಿ ಆಲುಗೆಡ್ಡೆ ಬೆಳೆಗಾರರು ಮುಖ್ಯಮಂತ್ರಿಯವರ ಅಂಗಳದಲ್ಲಿ ಆಲುಗೆಡ್ಡೆ ಸುರಿದು ಪ್ರತಿಭಟನೆ ನಡೆಸಿದ್ದರೂ, ಜೇಟ್ಲಿಯವರು ಮುಂಗಾರು ಬೆಳೆಗೆ ಕನಿಷ್ಟ ಬೆಂಬಲ ಬೆಲೆಯನ್ನು ಅವರ ಉತ್ಪಾದನಾ ವೆಚ್ಚದ $1\frac{1}{2}$ ಪಟ್ಟು ಕೊಟ್ಟಿರುವುದಾಗಿ ಹೇಳುತ್ತಿರುವುದು, ಬಜೆಟಿನ ಘೋಷಣೆಯ ಟೊಳ್ಳನ್ನು ಬಯಲು ಮಾಡುತ್ತದೆಯಷ್ಟೇ.

ಈ ಟೊಳ್ಳು ಮತ್ತೊಂದು ರೂಪದಲ್ಲಿ ಕಾಣಬರುವುದು ಅವರ "ಉತ್ಪಾದನಾ ವೆಚ್ಚ"ದ ಪರಿಕಲ್ಪನೆಯಲ್ಲಿ. ಇಲ್ಲಿ ಎರಡು ವಿಧಾನಗಳಿವೆ. ಒಂದು ವಿಧಾನದಲ್ಲಿ ಬೆಳೆಗಾಗಿ ನೇರ ನಗದು ಅಥವಾ ಬೇರೆ ರೂಪದಲ್ಲಿ ಮಾಡುವ ವೆಚ್ಚಗಳು ಮಾತ್ರ ಸೇರುತ್ತವೆ. ಇನ್ನೊಂದರಲ್ಲಿ ಬೆಳೆಯ ವೆಚ್ಚ, ಹಾಗೂ ಭೂಮಿಯ ಮೇಲಿನ ಬಾಡಿಗೆ (ಸ್ವಂತದಾದರೂ) ಮತ್ತು ಬಂಡವಾಳದ ಮೇಲಿನ ಬಡ್ಡಿ ಹಣಗಳನ್ನು ಒಳಗೊಂಡಿದೆ.

ಮೋದಿ ಸರ್ಕಾರ ಕನಿಷ್ಠ ಬೆಲೆಗೆ ಬೆಂಬಲ ಸೂಚಿಸಿದ್ದರೂ ಅದು ಮೊದಲ ರೀತಿಯ ವಿಧಾನಕ್ಕೆ. ಆದರೆ ಎಂ.ಎಸ್. ಸ್ವಾಮಿನಾಥನ್ ಕಮಿಟಿ ವರದಿ ಎರಡನೇಯ ವಿಧಾನವನ್ನು ಅವಲಂಬಿಸಿತ್ತು. ಭತ್ತದಲ್ಲಿ ಮೊದಲ ವಿಧಾನಕ್ಕಿಂತ ಎರಡನೇ ವಿಧಾನದ ವೆಚ್ಚ ಶೇ. 50 ರಷ್ಟು ಹೆಚ್ಚಿದೆ. ಅಂದರೆ ಮೋದಿ ಸರ್ಕಾರ ಸೂಚಿಸಿರುವ ಕನಿಷ್ಟ ಬೆಂಬಲ ಬೆಲೆ ಎರಡನೇ ವಿಧಾನದ ವೆಚ್ಚವನ್ನೂ ಭರಿಸುವುದಿಲ್ಲ



ಕೃಪೆ: ಸತೀಶ್ ಆಚಾರ್ಯ

ಇನ್ನುಳಿದಂತೆ ರೈತರಿಗೆ ಹೆಚ್ಚು ಬೆಲೆ ಸಿಗುವಂತಾದರೆ, ಅದರಿಂದ ಸಾಮಾನ್ಯ ಗ್ರಾಹಕರಿಗೂ ತೊಂದರೆಯಾಗದಿರಬೇಕಾದರೆ, ಸರ್ಕಾರದ ಸಬ್ಸಿಡಿ ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆ ಬಲವಾಗಬೇಕು. ಆದರೆ ಅಂತಹ ಚಿಂತನೆ ಸರ್ಕಾರ ಮಾಡುತ್ತಿದೆ ಎಂಬುದಕ್ಕೆ ಯಾವ ಕುರುಹು ಇರುವುದಿಲ್ಲ. ಆದರೆ ಮಾತಿನಲ್ಲಿ ರೈತರ ಆದಾಯ 2 ಪಟ್ಟು ಹೆಚ್ಚಾಗಲಿದೆ. ಬೆಲೆ ಉತ್ಪಾದನಾ ವೆಚ್ಚಕ್ಕಿಂತ 50% ಹೆಚ್ಚಲಿದೆ ಹೇಳಲಾಗುತ್ತಿದೆ. ಇವು ಅರ್ಥಹೀನ ಘೋಷಣೇ ಬಿಟ್ಟರೆ ಬೇರೇನೂ ಅಲ್ಲ.

ಕನಿಷ್ಟ ಬೆಂಬಲ ಬೆಲೆಗೂ ಬಜೆಟ್‌ಗೂ ಯಾವ ಸಂಬಂಧವೂ ಇಲ್ಲ. ಕಳೆದ ವರ್ಷದ ಬಜೆಟ್‌ನಲ್ಲಿ ಕೃಷಿ ಇಲಾಖೆ ಅನುದಾನದಲ್ಲಿ ಕೃಷಿಕರ ಕಲ್ಯಾಣಕ್ಕೆ ಮೀಸಲಿಟ್ಟಿದ್ದಕ್ಕಿಂತ 7% ಮಾತ್ರ ಹೆಚ್ಚಳ ಇದೆ. ಕೃಷಿ ಅನುದಾನವನ್ನು ಜಿಡಿಪಿ ಪ್ರಮಾಣದಲ್ಲಿ ನೋಡಿದರೆ, ಅದು ಕಡಿಮೆಯಾಗಿದೆ. "ರೈತ–ಪರ ಬಜೆಟ್" ಬರಿಯ ಪ್ರಚಾರ ವೈಖರಿ ಅಷ್ಟೆ.

ಮನರೇಗಾ (ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ) ಮೀಸಲಿಟ್ಟಿರುವ 55,000 ಕೋಟಿ ಅನುದಾನದಲ್ಲಿ ಯಾವ ಬದಲಾವಣೆಯಿರುವುದಿಲ್ಲ. ಇದರಲ್ಲಿ ಸಂಬಳ ಬಾಕಿಯಾಗಲಿ ಅಥವಾ ಏರುತ್ತಿರುವ ಬೆಲೆಗಳಾಗಲಿ ಯಾವುದೂ ಪರಿಗಣಿಸಿರುವುದಿಲ್ಲ. ಸಮಗ್ರ ಮಕ್ಕಳ ಅಭಿವೃದ್ಧಿಗಾಗಿ ಹಿಂದಿನ ವರ್ಷಕ್ಕಿಂತ ಕೇವಲ 7% ಮಾತ್ರ ಹೆಚ್ಚಾಗಿದೆ. ತತ್ಪರಿಣಾಮ ಎನ್‌ಡಿಎ ಸರ್ಕಾರದಲ್ಲಿ ಸಾಮಾಜಿಕ ವಲಯದಲ್ಲಿ ವೆಚ್ಚ ಕುಂಠಿತವಾಗುತ್ತಲೇ ಸಾಗಿದೆ. ಇವೆಲ್ಲ ಜಿಡಿಪಿಯ ಪ್ರಮಾಣದಲ್ಲಿ ಕಡಿಮೆನೇ ಆಗಿವೆ.

ಈ ವರ್ಷದ ಬಜೆಟ್‌ನಲ್ಲಿ ಅನುಸರಿಸಲಾಗುತ್ತಿರುವ ತಂತ್ರವೆಂದರೆ – "ರೈತರ ಪರ", "ಬಡವರ ಪರ" "ಮಹಿಳೆಯರ ಪರ" ಎಂದು ಹೆಚ್ಚಿನ ಗದ್ದಲ ಮಾಡುವುದು, ಈ ದಿಸೆಯಲ್ಲಿ ಬಜೆಟ್‌ನಲ್ಲಿ ಒಂದು ಕಾಸನ್ನು ನೀಡದೆ ಬಜೆಟಿನ ಆಚೆಗಿರುವ ಮೂಲಗಳಿಂದ ಅಂಗೈನಲ್ಲೇ ಆಕಾಶ ತೋರಿಸುವುದು., ಜಿ.ಎಸ್.ಟಿ.ಯಿಂದ ಕಡಿಮೆಯಾದ ಆದಾಯವನ್ನು ವೆಚ್ಚದ ಕಡಿತದ ಮುಖಾಂತರ ವಿತ್ತೀಯ ಕೊರತೆಯನ್ನು ತುಂಬಿಕೊಳ್ಳುವುದು.

ಕಳೆದ ವರ್ಷಕ್ಕಿಂತ ವೆಚ್ಚದಲ್ಲಿ 10% ಹೆಚ್ಚಿದ್ದರೂ ಜಿಡಿಪಿಯ ಸಾಮಾನ್ಯ ಬೆಳವಣಿಗೆಯನ್ನು ಪರಿಗಣಿಸಿದಾಗ ಅದು ಕಡಿಮೆಯಾಗಿರುತ್ತದೆ. ಜಿಡಿಪಿ ಬೆಳವಣಿಗೆ ಕುಂಟುತ್ತಿರುವಾಗ ಇಂತಹ ಕುಂಠಿತ ಬಜೆಟ್ ವಿಚಿತ್ರವೆನಿಸಬಹುದು. ಆದರೆ ನವ–ಉದಾರವಾದಿ ಆಳ್ವಿಕೆ ಇದನ್ನು ಹೊರಿಸುತ್ತದೆ. ಎನ್.ಡ.ಎ. ಸರಕಾರ ಅದನ್ನು ಶಿಸ್ತಿನಿಂದ ಒಪ್ಪಿಕೊಂಡಿದೆ ಕೂಡಾ

ದೀರ್ಘಾವದಿ ಬಂಡವಾಳ ಗಳಿಕೆ ತೆರಿಗೆಯನ್ನು ಮತ್ತೆ ತರುವ ಮೂಲಕ ಹೊಸ ಹೆಜ್ಜೆಯಿಟ್ಟರೂ ಶೇರು ಮಾರುಕಟ್ಟೆ ತನ್ನ ತೀವ್ರ ಅಸಂತೃಪ್ತಿಯನ್ನು ಯಾವ ಮುಲಾಜಿಲ್ಲದೇ ಹೊರಹಾಕಿದೆ. ಹಿಂದೆ ಪ್ರಣಬ್ ಮುಖರ್ಜಿಯವರು "ಮಾರಿಷಸ್ ಮಾರ್ಗದ" ಮುಖಾಂತರ ಕಾರ್ಪೋರೇಟ್ ಕಂಪನಿಗಳು ತೆರಿಗೆ ವಂಚನೆ ಮಾಡುವುದನ್ನು ತಡೆದಿದ್ದಾಗ ಅದೇ ಆಗಿತ್ತು.

ಈ ಸರ್ಕಾರವೂ ಈ ಕ್ರಮವನ್ನು ಹಿಂದಿನ ಸರ್ಕಾರದಂತೆ ಕೈ ಬಿಡುತ್ತದೆ. ನವ ಉದಾರವಾದಿ ಸರ್ಕಾರ ಅಲ್ಪ ಸಂಖ್ಯಾತರನ್ನು ಪೀಡಿಸುವ ಸ್ವಾತಂತ್ರ ಹೊಂದಿರುತ್ತದೆ ಹೊರತು, ಕಾರ್ಪೋರೇಟ್ ಲಾಭದ ಮೇಲೆ ತೆರಿಗೆ ಹೊರಿಸುವ ಸ್ವಾತಂತ್ರ್ಯ ಅದಕ್ಕಿಲ್ಲ. ■

ಕೇರಳ ಎಲ್‌ಡಿಎಫ್ ಬಜೆಟ್: ನೋಟು ರದ್ದತಿ, ಜಿಎಸ್‌ಟಿಯ ಪ್ರತಿಕೂಲ ಪರಿಣಾಮಗಳ ನಡುವೆಯೂ ಜನಪರ ಕ್ರಮಗಳಿಗೆ ಹೆಚ್ಚಿನ ಹಣ



ಕೇರಳ ಹಣಕಾಸು ಮಂತ್ರಿ ಡಾ. ಟಿ.ಎಂ. ಥಾಮಸ್ ಐಸಾಕ್ ಜನಪರವಾದ ಎಲ್‌ಡಿಎಫ್ ಬಜೆಟ್ ಮಂಡಿಸಿದ್ದಾರೆ. ಓಖಿ ಸುಂಟರಗಾಳಿಯಿಂದ ಬಾಧಿತರಿಗೆ ಪರಿಹಾರ, ಎಲ್ಲರಿಗೂ ವಸತಿ ಒದಗಿಸುವ ಯೋಜನೆ ಮತ್ತು ಆಹಾರ ಭದ್ರತೆಯ ಯೋಜನೆಗೆಗೆ ಪ್ರಧಾನ ಒತ್ತು ಈ ಬಜೆಟಿನ ಮುಖ್ಯ ಅಂಶಗಳು.

ಎಲ್ಲರಿಗೂ ವಸತಿಗೆ 2500 ಕೋಟಿರೂ.

ಈ ಗುರಿಯಿಟ್ಟುಕೊಂಡಿರುವ ಲೈಫ್ ಮಿಶನ್‌ಗೆ ಬಜೆಟಿನಲ್ಲಿ 2500 ಕೊಟಿ ರೂ.ಗಳನ್ನು ಒದಗಿಸಲಾಗಿದೆ. 2018–19ರಲ್ಲಿ ಸ್ವಂತ ಜಮೀನಿದ್ದು ಮನೆಯಿಲ್ಲದ 1.76 ಲಕ್ಷ ಮಂದಿಗೆ 4ಲಕ್ಷರೂ.ಗಳ ಮನೆ ಮತ್ತು ಭೂಹೀನ ವಸತಿಹೀನರಿಗೆ 10ಲಕ್ಷ ರೂ. ಮೌಲ್ಯದ ಅಪಾರ್ಟ್‌ಮೆಂಟ್‌ಗಳನ್ನು ಒದಗಿಸಲಾಗುವುದು. ಈ ಸಮುಚ್ಚಯಗಳಲ್ಲಿ ಅಂಗನವಾಡಿ, ಕೌಶಲ ಅಭಿವೃದ್ಧಿ ಮುಂತಾದ ಸೌಲಭ್ಯಗಳನ್ನೂ ಒದಗಿಸುವ ಯೋಜನೆ ರೂಪಿಸಲಾಗಿದೆ ಎಂದು ಹಣಕಾಸು ಮಂತ್ರಿಗಳು ಹೇಳಿದರು.

2000 ಕೋಟಿ ರೂ.ಓಖಿ ಪ್ಯಾಕೇಜ್

ಇತ್ತೀಚೆಗೆ ಕೇರಳದ ಕರಾವಳಿ ಪ್ರದೇಶಗಳಲ್ಲಿ ಧ್ವಂಸಕಾರ್ಯ ನಡೆಸಿದ ಓಖಿ ಸುಂಟರಗಾಳಿ ಪೀಡಿತರಿಗೆ ಪರಿಹಾರ ಮತ್ತು ಈ ಹಿನ್ನೆಲೆಯಲ್ಲಿ ಕರಾವಳಿ ಪ್ರದೇಶಗಳಲ್ಲಿ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ರೂ.2000 ಕೋಟಿ ಪ್ಯಾಕೇಜ್‌ನ್ನು ಬಜೆಟ್ ಪ್ರಕಟಿಸಿದೆ. ಮೀನುಗಾರಿಕೆ ಹಳ್ಳಿಗಳು ಮತ್ತು ಮೀನುಗಾರರಿಗೆ ಎಚ್ಚರಿಕೆ ವ್ಯವಸ್ಥೆ ಮತ್ತು ತುರ್ತು ರಕ್ಷಣಾ ಯೋಜನೆಗಳು ಇದರಲ್ಲಿ ಸೇರಿವೆ.

ರೂ.100 ಕೋಟಿ ಕರಾವಳಿ ಪ್ರದೇಶಗಳಿಗೆ ಮತ್ತು ಮೀನುಗಾರಿಕಾ ದೋಣಿಗಳಿಗೆ ಸಂಪರ್ಕ ಉಪಗ್ರಹ ವ್ಯವಸ್ಥೆಗೆ, ರೂ. 150 ಕೋಟಿ ಕರಾವಳಿ ಕರೆಯ 50 ಮೀಟರ್ ಒಳಗೆ ವಾಸಿಸುವ ಎಲ್ಲ ಕುಟುಂಬಗಳಿಗೆ ಪುನರ್ವಸತಿ ಯೋಜನೆಗೆ, ರೂ. 10 ಕೋಟಿ ಕರಾವಳಿ ಅಭಿವೃದ್ಧಿ ಪ್ಯಾಕೇಜ್‌ಗೆ ಡಿಪಿಆರ್ ಮಾಡಲು, ರೂ.600 ಕೋಟಿ ಮೀನುಗಾರಿಕಾ ವಲಯಕ್ಕೆ ಅಂದಾಜು, ರೂ. 240 ಕೋಟಿ ಒಳನಾಡು ಮೀನುಗಾರಿಕೆ ಸೇರಿದಂತೆ ಮೀನುಗಾರಿಕಾ ಯೋಜನೆಗೆ ಮತ್ತು ರೂ.238 ಕೊಟಿ ಕರಾವಳಿ ಅಭಿವೃದ್ಧಿಗೆ – ಈ ಪ್ಯಾಕೇಜಿನ ಅಂಶಗಳು.

ಹಸಿವು–ಮುಕ್ತ ಕೇರಳ

ರಾಜ್ಯವನ್ನು ಮುಂದಿನ ಮೂರು ವರ್ಷಗಳಲ್ಲಿ ಹಸಿವು ಮುಕ್ತಗೊಳಿಸುವ ಯೋಜನೆಯೊಂದನ್ನು ಅಲಪುಳ ದಲ್ಲಿ ಪ್ರಯೋಗಾರ್ಥವಾಗಿ ಆರಂಬಿಸಲಾಗಿತ್ತು. ಅದನ್ನು ಈಗ ಇಡೀ ರಾಜ್ಯಕ್ಕೆ ವಿಸ್ತರಿಸಲಾಗುತ್ತದೆ.

ಇದರ ಜೊತೆಗೆ ಕೇರಳವನ್ನು ತರಕಾರಿಗಳು ಮತ್ತು ಹಾಲು ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಿಸುವ 'ಉತ್ತಮ ಆಹಾರ ಕಾರ್ಯಕ್ರಮ'ವನ್ನು ಕೈಗೆತ್ತಿಕೊಳ್ಳಲಾಗಿದೆ. ಪ್ರತಿಯೊಂದು ಪಂಚಾಯತಿನಲ್ಲಿ 'ಕುಡುಂಬಶ್ರೀ' ಸ್ಕೀಮಿನ ಅಡಿಯಲ್ಲಿ ಕೋಳಿಸಾಕಣೆ ಫಾರ್ಮುಗಳನ್ನು ಆರಂಭಿಸಲಾಗುತ್ತದೆ.

ದುರ್ಬಲ ವಿಭಾಗಗಳ ಯೋಜನೆಗಳಿಗೆ ಹೆಚ್ಚಿನ ಹಣ

ಪರಿಶಿಷ್ಟ ಜಾತಿ ಉಪಯೋಜನೆಗೆ ನೀಡಿಕೆಯನ್ನು 2599 ಕೋಟಿ ರೂ.ನಿಂದ 2859 ಕೋಟಿ ರೂ. ಗೇರಿಸಲಾಗಿದೆ. ಇದು ಒಟ್ಟು ಯೋಜನಾ ವೆಚ್ಚದ 9.8%. ರಾಜ್ಯದಲ್ಲಿ ಪರಿಶಿಷ್ಟಜಾತಿಗಳ ಜನಸಂಖ್ಯೆಯ ಪ್ರಮಾಣ 9.1%. ಪರಿಶಿಷ್ಟ ಬುಡಕಟ್ಟು ಉಪಯೋಜನೆಯ ಮೊತ್ತವನ್ನು 751 ಕೋಟಿರೂ.ಗಳಿಂದ ರೂ.826 ಕೋಟಿರೂ.ಗಳಿಗೆ ಏರಿಸಲಾಗಿದೆ. ಇದು ಒಟ್ಟು ಯೋಜನಾ ವೆಚ್ಚದ 2.83%. ರಜ್ಯದಲ್ಲಿ ಪರಿಶಿಷ್ಟ ಬಡಕಟ್ಟುಗಳ ಜನಸಂಖ್ಯಾ ಪ್ರಮಾಣ 1.45%.

ಹೀಗೆ ಕೇಂದ್ರದ ಮೋದಿ ಸರಕಾರದ ಧೋರಣೆಗೆ ತದ್ವಿರುದ್ಧವಾಗಿ, ಈ ಎರಡು ದುರ್ಬಲ ವಿಭಾಗಗಳಿಗೆ ಮೀಸಲಿಟ್ಟ ಯೋಜನೆಗಳಿಗೆ ಅವುಗಳ ಜನಸಂಖ್ಯಾ ಪ್ರಮಾಣಕ್ಕಿಂತ ಹೆಚ್ಚಿನ ಹಣವನ್ನು ಒದಗಿಸಲಾಗಿದೆ.

ಈ ಬಾರಿಯ ಕೇಂದ್ರ ಬಜೆಟಿನಲ್ಲಿ ದೇಶದ ಜನಸಂಖ್ಯೆಯಲ್ಲಿ 16% ದಷ್ಟಿರುವ ಪರಿಶಿಷ್ಟ ಜಾತಿಗಳ ಜನರ ಕಲ್ಯಾಣಕ್ಕೆ ಕೊಟ್ಟಿರುವ ಹಣ ಕೇವಲ 2.3%. ಅದೇ ರೀತಿ, 8% ದಷ್ಟಿರುವ ಪರಿಶಿಷ್ಟ ಬುಡಕಟ್ಟುಗಳಿಗಾಗಿ ಕೊಟ್ಟಿರುವ ಹಣ ಕೇವಲ 1.6% ಎಂಬುದನ್ನು ಇಲ್ಲಿ ಗಮನಿಸಬಹುದು.

ಲಿಂಗ ಬಜೆಟ್

ಈ ಬಜೆಟ್ ರೂ.1267 ಕೋಟಿ ಮಹಿಳಾ ಕಲ್ಯಾಣಕ್ಕೆ ಒದಗಿಸಿದೆ. ಇದರಲ್ಲಿ 'ಶಿ–ಲಾಜ್', ದುಡಿಯುವ ಮಹಿಳೆಯರಿಗೆ ತಾತ್ಕಾಲಿಕ ವಸತಿ, ಮಹಿಳೆಯರ ಮೇಲೆ ಹಲ್ಲೆಗಳನ್ನು ತಡೆಯುವ ಕ್ರಮಗಳಿಗೆ ಇತ್ಯಾದಿಗಳು ಸೇರಿವೆ.

ಆಶಾ ಕಾರ್ಯಕರ್ತೆಯರಿಗೆ ರೂ. 2000 ಏರಿಕೆ ಪ್ರಕಟಿಸಲಾಗಿದೆ ಮತ್ತು 13.6% ಬಜೆಟ್ ವೆಚ್ಚಗಳು ಮಹಿಳಾ–ಕೇಂದ್ರಿತ ಕ್ರಮಗಳಿಗಾಗಿ ಇರುತ್ತವೆ.

ಆರೋಗ್ಯ ವಲಯದಲ್ಲಿ

ಮಲಬಾರ್ ಕ್ಯಾನ್ಸರ್ ಕೇಂದ್ರಕ್ಕೆ ಪ್ರಾದೇಶಿಕ ಕ್ಯಾನ್ಸರ್ ಕೇಂದ್ರ (ಆರ್‌ಸಿಸಿ) ಸ್ಥಾನಮಾನ, ವೈದ್ಯಕೀಯ ಕಾಲೇಜುಗಳಲ್ಲಿ ಹೆಚ್ಚು ಡಾಕ್ಟರುಗಳು ಮತ್ತು ನರ್ಸ್‌ಗಳು, ಜಿಲ್ಲಾ ಆಸ್ಪತ್ರೆಗಳಲ್ಲಿ ಹೃದಯ–ಸಂಬಂಧಿ ವಿಭಾಗಗಳು, ತಾಲೂಕು ಆಸ್ಪತ್ರೆಗಳಲ್ಲಿ ಆಘಾತ ಚಿಕಿತ್ಸೆ(ಟ್ರೌಮ ಕೇರ್) ಕೇಂದ್ರಗಳು ಮತ್ತು ಸಾರ್ವಜನಿಕ ಆರೋಗ್ಯ ಸೇವೆಗಳಿಗೆ ರೂ.1685 ಕೋಟಿ ಪ್ರಕಟಿಸಲಾಗಿದೆ. ಉಬೆರ್ ಮಾದರಿಯಲ್ಲಿ ಒಂದು ಅಂಬುಲೆನ್ಸ್ ಸೇವೆ ಶೀಘ್ರದಲ್ಲಿ ಆರಂಭಿಸಲಾಗುವುದು ಎಂದು ಹೇಳಿದರು.

ಮೂಲರಚನೆ ಹೂಡಿಕೆ ಮಂಡಳಿ

ಎಲ್‌ಡಿಎಫ್ ಸರಕಾರ ಬಂದ ಮೇಲೆ ಮೂಲರಚನೆಗಳನ್ನು ಉತ್ತಮಗೊಳಿಸಲು 'ಕೇರಳ ಮೂಲರಚನೆ ಹೂಡಿಕೆ ನಿಧಿ ಮಂಡಳಿ(ಕೆಐಐಎಫ್‌ಬಿ) ರಚಿಸಲಾಯಿತು. ಹಿಂದಿನ ಬಜೆಟಿನಲ್ಲಿ ಇದಕ್ಕೆ 54,000 ಕೋಟಿ ರೂ.ಗಳ ಪ್ರಸ್ತಾವಗಳನ್ನು ಮುಂದಿಡಲಾಗಿತ್ತು. ಈ ಮಂಡಳಿ ಅದರಲ್ಲಿ 20,000 ಕೋಟಿರೂ.ಗಳ ಹಣವನ್ನು ಒದಗಿಸಿದೆ. ಇನ್ನೂ 10,000 ಕೋಟಿ ರೂ.ಗಳನ್ನು ಒದಗಿಸಲಾಗುವುದು, ಉಳಿದದ್ದನ್ನು 2018–19ರಲ್ಲಿ ಒದಗಿಸಲಾಗುವುದು ಎಂದ ಕೇರಳ ಹಣಕಾಸು ಮಂತ್ರಿಗಳು ಇಷ್ಟೊಂದು ಮಟ್ಟದ ಹೂಡಿಕೆ ಇಲ್ಲಿ ಅಭೂತಪೂರ್ವ, ಇದು ದೇಶದಲ್ಲಿ ಆರ್ಥಿಕ ಮಂದಗತಿಯ ಸಂದರ್ಭದಲ್ಲೂ ಕೇರಳದ ಅರ್ಥಿಕತೆಗೆ ಉತ್ತೇಜನೆ ನೀಡುತ್ತದೆ ಎಂದು ಹೇಳಿದರು.

45,000 ಹೈಟೆಕ್ ತರಗತಿ ಕೋಣೆಗಳು

ಶಿಕ್ಷಣದ ವಿಸ್ತರಣೆಗೆ ಈ ಬಾರಿಯ ಬಜೆಟ್ ಕೂಡ ಹೆಚ್ಚಿನ ಗಮನ ನೀಡಿದೆ. 4775 ಶಾಲೆಗಳಲ್ಲಿ ಹೈಟೆಕ್ ಕ್ಲಾಸ್‌ರೂಂ ಗಳನ್ನು ನಿರ್ಮಿಸಲಾಗುವುದು. 138 ಶಾಲೆಗಳಿಗೆ 614 ಕೋಟಿರೂ., ಒದಗಿಸಲಾಗಿದೆ. 1000ಕ್ಕೂ ಹೆಚ್ಚು ಮಕ್ಕಳಿರುವ 70 ಶಾಲೆಗಳಿಗೆ 210 ಕೋಟಿ ರೂ.ಗಳನ್ನು ಕೆಐಐಎಫ್‌ಬಿ ಇಂದ ಅವನ್ನು ಉತ್ಕೃಷ್ಟತೆಯ ಕೇಂದ್ರಗಳಾಗಿ ಮಾಡಲು ನೀಡಲಾಗಿದೆ. ಕೆಐಐಎಫ್‌ಬಿ ಎಲ್ಲ ಪ್ರಾಥಮಿಕ ಮತ್ತು ಉಚ್ಚ ಪ್ರಾಥಮಿಕ ಶಾಲೆಗಳಲ್ಲಿ ಕಂಪ್ಯೂಟರ್ ಲ್ಯಾಬ್‌ಗಳನ್ನು ನಿರ್ಮಿಸಲು ಕೂಡ 300 ಕೋಟಿ ರೂ.ಗಳನ್ನು ನೀಡುತ್ತದೆ.

ಎಲ್‌ಡಿಎಫ್ ಸರಕಾರ ಶಿಕ್ಷಣಕ್ಕೆ ನೀಡಿರುವ ಮಹತ್ವವನ್ನು ಕೇರಳದ ಜನತೆ ಸ್ವಾಗತಿಸಿದ್ದಾರೆ ಎಂಬುದಕ್ಕೆ ಈ ವರ್ಷ 1.4 ಲಕ್ಷ ವಿದ್ಯಾರ್ಥಿಗಳು ಅನುದಾನರಹಿತ ಅಂದರೆ ಖಾಸಗಿ ಶಾಲೆಗಳಿಂದ ಟಿ.ಸಿ. ತಗೊಂಡು ಸಾರ್ವಜನಿಕ ಶಾಲೆಗಳಿಗೆ ಸೇರಿದ್ದಾರೆ ಎಂಬುದೇ ಸಾಕ್ಷಿ. ಇದುವರೆಗೆ, ಕಳೆದ 25 ವರ್ಷಗಳಲ್ಲಂತೂ ತಂದೆ–ತಾಯಂದಿರು ತಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಲೆಂದು ಸರಕಾರೀ ಶಾಲೆಗಳಿಂದ ಖಾಸಗಿ ಶಾಲೆಗಳತ್ತ ಹೋಗುತ್ತಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಸರಕಾರೀ ಶಾಲೆಗಳ ಗುಣಮಟ್ಟವನ್ನು ಈ ಸರಕಾರ ಹೆಚ್ಚಿಸುತ್ತದೆ ಎಂಬಬಗ್ಗೆ ಈಗ ಜನಗಳಲ್ಲಿ ಭರವಸೆ ಇಡುತ್ತಿರುವುದನ್ನು ಇದು ತೋರಿಸುತ್ತದೆ, ಎಲ್‌ಡಿಎಫ್ ಸರಕಾರ ಈ ನಿರೀಕ್ಷೆಯನ್ನು ಈಡೇರಿಸುತ್ತದೆ ಎಂದು ಹಣಕಾಸು ಮಂತ್ರಿಗಳು ಹೇಳಿದರು.

ನೋಟುರದ್ಧತಿ ಮತ್ತು ಜಿಎಸ್‌ಟಿ

ನೋಟುರದ್ಧತಿ ದೇಶದ ಆರ್ಥಿಕಕ್ಕೆ ಓಖಿ ಸುಂಟರಗಾಳಿಯಂತೆ– ಒಂದೇ ವ್ಯತ್ಯಾಸವೆಂದರೆ, ಅದು ನೈಸರ್ಗಿಕ ವಿಪತ್ತು, ಇದು ಮಾನವ–ನಿರ್ಮಿತ ಎಂದು ಬಜೆಟ್ ಮಂಡಿಸುತ್ತ ಡಾ.ಐಸಾಕ್ ಟಿಪ್ಪಣಿ ಮಾಡಿದರು.

ಅದೇ ರೀತಿ ಜಿಎಸ್‌ಟಿ ಸಂಗ್ರಹ ಕೇರಳದಂತಹ ರಾಜ್ಯಗಳಿಗೆ ನಿರೀಕ್ಷಿತ ಸಂಗ್ರಹವನ್ನು ತಂದು ಕೊಟ್ಟಿಲ್ಲ, ಇದಕ್ಕೆ ಅಡ್ಡಿಯಾಗಿರುವ ಸಂಗತಿಯನ್ನು ಕೇಂದ್ರದ ಗಮನಕ್ಕೆ ತಂದರೂ ಅದನ್ನು ನಿವಾರಿಸುವ ಕ್ರಮಕ್ಕೆ ಅದು ಮುಂದಾಗಿಲ್ಲೆಂದೂ ಅವರು ಹೇಳಿದರು.

ಜಿಎಸ್‌ಟಿಯ ಇದುವರೆಗಿನ ಈ ಅನುಭವ ಇದು ರಾಜ್ಯಗಳ ತೆರಿಗೆ ಸಂಗ್ರಹದ ಅಧಿಕಾರವನ್ನು ಮೊಟಕು ಮಾಡಿದೆ, ತೆರಿಗೆ ದರಗಳು ಮಾತ್ರವಲ್ಲ, ತೆರಿಗೆ ಸಂಗ್ರಹದ ನಿರ್ವಹಣೆಯನ್ನು ಕೂಡ ರಾಜ್ಯ ಸರಕಾರಗಳಿಂದ ಕಿತ್ತುಕೊಳ್ಳಲಾಗಿದೆ ಎಂಬುದನ್ನು ಸಾಬೀತು ಮಾಡಿದೆ.

2016–17ರಲ್ಲಿ ಕೇರಳ ಆರ್ಥಿಕ ಬೆಳವಣಿಗೆ 7.41% ಇದ್ದು, ಇದು ಅಖಿಲ ಭಾರತ ದರವಾದ 7.1% ಕ್ಕಿಂತ ಮೇಲಿದೆ ಎಂದೂ ಅವರು ಹೇಳಿದರು.

ಪಶ್ಚಿಮ ಬಂಗಾಲ: ಈ ಬಾರಿಯೂ ವೋಟ್ ಲೂಟಿ

ಪಶ್ಚಿಮ ಬಂಗಾಲದಲ್ಲಿ ಉಲುಬೇರಿಯ ಲೋಕಸಭಾ ಉಪಚುನಾವಣೆ ಮತ್ತು ನೊವಪಾರ ವಿಧಾನಸಭಾ ಉಪಚುನಾವಣೆ ಎರಡರಲ್ಲೂ ಟಿಎಂಸಿ 'ಭಾರೀ ಮತ'ಗಳಿಂದ ಗೆದ್ದಿದೆ ಎಂದು ವರದಿಯಾಗಿದೆ. ಉಲುಬೇರಿಯಾದಲ್ಲಿ 4 ಲಕ್ಷಕ್ಕಿಂತಲೂ ಹೆಚ್ಚು ಮತಗಳಿಂದ ಮತ್ತು ನೊವಾಪಾರದಲ್ಲಿ 63 ಸಾವಿರಕ್ಕಿಂತಲೂ ಹೆಚ್ಚು ಮತಗಳಿಂದ ಟಿಎಂಸಿ ಅಭ್ಯರ್ಥಿಗಳು ಗೆದ್ದಿದ್ದಾರೆ ಎಂದು ಘೋಷಿಸಲಾಗಿದೆ. ಇದು ಮಮತಾ ಸರಕಾರದ ಅಭಿವೃದ್ಧಿ ಪರ ಧೋರಣೆಗಳಿಗೆ ಸಿಕ್ಕಿರುವ ದೊಡ್ಡ ವಿಜಯ ಎನ್ನಲಾಗಿದೆ. ಜಾತ್ಯತೀತ ರಾಜಕೀಯ ಶಕ್ತಿಗಳಿಗೂ ಈ 'ಅಗಾಧ' ಅಂತರ ಆಶ್ಚರ್ಯ ತಂದಿದೆ.

ವಾಸ್ತವ ಸಂಗತಿಯೇನು? ಈ ಎರಡೂ ಕ್ಷೇತ್ರಗಳಲ್ಲಿ, ಇಲ್ತ ಮತ್ತು ನ್ಯಾಯಯುತ ಮತದಾನ ನಡೆಯಲೇ ಇಲ್ಲ ಎಂಬುದೇ ವಾಸ್ತವ ಸಂಗತಿ. ನೂರಾರು ಸಶಸ್ತ್ರ ಟಿಎಂಸಿ ಕಾರ್ಯಕರ್ತರೆಂಬವರನ್ನು ಮತ್ತು 'ನತದಾರರಯ' ಎಂಬವರನ್ನೂ ಹೊರಗಡೆಯಿಂದ ಆಮದು ಮಾಡಲಾಯಿತು. ಮುಂಜಾನೆಯಿಂದಲೇ ಮತಗಟ್ಟೆಗಳೀಂದ ಎಡರಂಗದ ಪೋಲಿಂಗ್ ಏಜೆಂಟರನ್ನು ಹೊಡದೋಡಿಸಲಾಯಿತು. ಮತದಾರರು ಸಾಲುಗಟ್ಟುತ್ತಿದ್ದಂತೆ ಅವರನ್ನೂ ಬೆದರಿಸಿ ಓಡಿಸಲಾಯಿತು. ಕೆಲವೆಡೆಗಳಲ್ಲಿ ಮತದಾರರನ್ನು ನಿಷ್ಕರುಣೆಯಿಂದ ಥಳಿಸಲಾಯಿತು. ಸಾವಿರಾರು ಮಂದಿಯುನ್ನು ಮತಗಟ್ಟೆಗಳ ಹತ್ತಿರ ಬರಲೂ ಬಿಡಲಿಲ್ಲ.

ವಿವಿಧ ಮತಗಟ್ಟೆಗಳಲ್ಲಿ ಮತಗಳ ಪ್ರಮಾಣ ನಿಜವಾಗಿ ನಡೆದಿರುವುದೇನು ಎಂಬುದಕ್ಕೆ ಸಾಕ್ಷಿಯಾಗಿದೆ. ಬಹಳಷ್ಟು ಮತಗಟ್ಟೆಗಳಲ್ಲಿ ಟಿಎಂಸಿಗೆ 500 ಕ್ಕಿಂತಲು ಹೆಚ್ಚು ಮತಗಳು ಬಿದ್ದಿದ್ದರೆ, ಸಿಪಿಐ(ಎಂ)ಗೆ 1,2,3 ಹೀಗೆ ಮತಗಳಷ್ಟೇ ದಾಖಲಾಗಿವೆ.

ಮಲೆಯಾಲಂ ಕವಿ ಕುರೀಪುಳ ಶ್ರೀಕುಮಾರ್ ಮೇಲೆ ಆರೆಸ್ಸೆಸ್–ಬಿಜೆಪಿ ಹಲ್ಲೆ



ಕೇರಳದಲ್ಲಿ ಆರೆಸ್ಸೆಸ್–ಬಿಜೆಪಿ ತಮ್ಮ ಮೇಲ್ಜಾತಿ ಪರ ಚರ್ಯೆಯನ್ನು ಮತ್ತೊಮ್ಮೆ ಪ್ರದರ್ಶಿಸಿದ್ದಾರೆ. ಮಲೆಯಾಳಂನ ಪ್ರಸಿದ್ಧ ಕವಿ ಕುರೀಪುಳ ಶ್ರೀಕುಮಾರ್ ಅವರು ಕೊಳ್ಳಂ ಜಿಲ್ಲೆಯ ಕೊಟ್ಟುಕಲ್‌ನಲ್ಲಿ ಕೈರಾಳಿ ಲೈಬ್ರರಿ ಫೆ. 5ರಂದು ಸಂಘಟಿಸಿದ್ದ ಒಂದು ಸಭೆಯಲ್ಲಿ ಭಾಗವಹಿಸಿ ಹಿಂದಿರುಗುತ್ತಿದ್ದಾಗ ಸುಮಾರು 15 ಮಂದಿಯಿದ್ದ ಆರೆಸ್ಸೆಸ್–ಬಿಜೆಪಿ ಹಿಂಡು ಅವರನ್ನು ಅಡ್ಡಗಟ್ಟಿ ಹಲ್ಲೆ ಮಾಡಿತು. ಶ್ರೀಕುಮಾರ್ ಗೆಳೆಯರ ನೆರವಿನಿಂದ ತಪ್ಪಿಸಿಕೊಂಡು ಮನೆ ತಲುಪಿದರು. ಈ ಹಲ್ಲೆ ನಡೆಸಿದವರಲ್ಲಿ ಆರು ಮಂದಿಯನ್ನು ಪೋಲೀಸರು ಬಂಧಿಸಿದ್ದಾರೆ. ಅವರಲ್ಲಿ ಒಬ್ಬ ಬಿಜೆಪಿಯ ಪಂಚಾಯತ್ ಸದಸ್ಯರೂ ಇದ್ದಾರೆ.

ಶ್ರೀಕುಮಾರ್ ತನ್ನ ಭಾಷಣದಲ್ಲಿ ಹಿಂದುತ್ವ ಮಂದಿಯ ಧೋರಣೆಗಳನ್ನು ವಿಮರ್ಶಿಸುತ್ತ ಕೊಚ್ಚಿಯ ಬಳಿ ವಡಯಂಬಾಡಿಯ ಜನತೆ ದಲಿತರ ವಿರುದ್ಧ ಸಾರ್ವಜನಿಕ ಸ್ಥಳದಲ್ಲಿ ದಲಿತರು ಮತ್ತು ದಲಿತೇತರರ ನಡುವೆ 'ಜಾತಿ ಗೋಡೆ'ಯನ್ನು ಕಟ್ಟಿರುವುದರ ವಿರುದ್ಧ ಪ್ರತಿಭಟಿಸುತ್ತಿರುವುದನ್ನು ಪ್ರಸ್ತಾಪಿಸಿದ್ದೇ ಈ ಹಲ್ಲೆಗೆ ಕಾರಣ ಎನ್ನಲಾಗಿದೆ.

ಕೇರಳ ವಿಧಾನಸಭೆಯಲ್ಲಿ ಆರು ಮಂದಿಯ ಬಂಧನದ ಮಾಹಿತಿ ನೀಡುತ್ತ ಇದು ಫ್ಯಾಸಿಸ್ಟ್ ಹಲ್ಲೆ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಖಂಡಿಸಿದರು.

ದೇಶದಲ್ಲಿ ಇತ್ತೀಚೆಗೆ ಅಸಹಿಷ್ಣು ಕೋಮುವಾದಿ ಶಕ್ತಿಗಳು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಹಲ್ಲೆ ಮಾಡುತ್ತಿವೆ. ಇವುಗಳ ನಡುವೆ ಆಶಾದೀಪದಂತಿರುವ ಕೇರಳ ರಾಜ್ಯದಲ್ಲಿಯೂ ಈ ಮೊದಲು ಪ್ರಸಿದ್ಧ ಲೇಖಕ ಎಂ ಟಿ ವಾಸುದೇವನ್ ನಾಯರ್ ಮತ್ತು ಚಲನಚಿತ್ರಕಾರ ಕಮಲ್ ಮೇಲೆ ಕೂಡ ಹಲ್ಲೆಗಳು ನಡೆದಿವೆ. ಇದು ಮರುಕಳಸಲು ಬಿಡುವುದಿಲ್ಲ, ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಮುಖ್ಯ ಮಂತ್ರಿಗಳು ಹೇಳಿದರು.

ತಮ್ಮ ಮೇಲಿನ ದಾಳಿಯ ಬಗ್ಗೆ ಮಾತಾಡುತ್ತ ಶ್ರೀಕುಮಾರ್ ಅದು ಜಾತ್ಯತೀತ ಚಿಂತನೆ ಮತ್ತು ತತ್ವದ ಮೇಲೆ ಧಾರ್ಮಿಕ ಉಗ್ರವಾದಿಗಳ ಹಲ್ಲೆ ಎಂದು ವರ್ಣಿಸಿದರು. "ನನ್ನ ಭಾಷಣ ಸಾರ್ವಜನಿಕ ಸ್ಥಳಗಳನ್ನು ಮುಂದಿನ ಪೀಳಿಗೆಗಗಾಗಿ ಉಳಿಸುವ ಮಹತ್ವದ ಬಗ್ಗೆ ಆಗಿತ್ತು. ಇಂದು ಸಾರ್ವಜನಿಕ ಸ್ಥಳಗಳನ್ನು ಧರ್ಮದ ಹೆಸರಲ್ಲಿ ಆಕ್ರಮಿಸಿಕೊಳ್ಳಲಾಗುತ್ತಿದೆ. ಸಾರ್ವಜನಿಕ ಸ್ಥಳಗಳಲ್ಲಿ ಧಾರ್ಮಿಕ ಪೂಜಾಸ್ಥಳಗಳನ್ನು ಕಟ್ಟಿ ನಿರ್ದಿಷ್ಟ ಜಾತಿಗಳ, ಧರ್ಮಗಳ ಜನಗಳಿಗೆ ಅಲ್ಲಿ ಪ್ರವೇಶ ಇಲ್ಲ ಎಂದು ಬೋರ್ಡ್ ಹಾಕಲಾಗುತ್ತಿದೆ. ಜನಗಳು ಎಚ್ಚೆತ್ತು ಈ ಪ್ರಶ್ನೆಗಳತ್ತ ಕಣ್ಣು ತೆರೆಯಬೇಕು, ತಾವು ಯಾವುದೇ ಜಾತಿಗೆ, ಧರ್ಮಕ್ಕೆ ಸೇರಿದ್ದರೂ ಇಂತಹ ಜಾತಿ–ಧರ್ಮ ಆಧರಿತ ಪಕ್ಷಪಾತಗಳ ವಿರುದ್ಧ ಹೋರಾಡಬೇಕು. ಆದರೆ ಕೇವಲ ಎಡಶಕ್ತಿಗಳಷ್ಟೇ ವಡಯಂಪಾಡಿಯ ಬೆಳವಣಿಗೆಗಳ ವಿರುದ್ಧ ಕ್ರಮ ಕೈಗೊಳ್ಳಲು ಮುಂದಾಗಿದ್ದಾರೆ" ಎಂದು ವಡಯಂಪಾಡಿಯಲ್ಲಿನ ಬೆಳವಣಿಗೆಯನ್ನು ಶ್ರೀಕುಮಾರ್ ಪ್ರಸ್ತಾಪಿಸಿದ್ದರು.

ಅಫ್ಘಾನಿಸ್ತಾನ

'ಸ್ವಾತಂತ್ರ್ಯ'ದ ನೆಪದಲ್ಲಿ ನಿರಂತರ ಯುದ್ಧ

ಅಮೆರಿಕನ್ ಪಡೆಗಳು 'ಅಫ್ಘಾನ ಜನರಿಗೆ ಸ್ವಾತಂತ್ರ್ಯ ತಂದುಕೊಡುವ' ವಾಗ್ದಾನವು ಹುಸಿಯಾಗಿದೆ. ಇಲ್ಲಿ ಕಾಲಿಟ್ಟು 16 ವರ್ಷಗಳು ಕಳೆದು ಹೋಗಿವೆ. ಆದಾಗ್ಯೂ ತಾಲಿಬಾನ್ ಉಗ್ರರನ್ನು ನಿಗ್ರಹಿಸಲು ಸಾಧ್ಯವಾಗಿಲ್ಲ. ಎಂಬುದು ವಾಸ್ತವ. ಇಡೀ ದೇಶದಲ್ಲಿ ಸುಮಾರು 4 ರಷ್ಟು ಪ್ರತಿಶತದಷ್ಟು ಪ್ರದೇಶಗಳು ಇನ್ನು ತಾಲಿಬಾನ್ ಉಗ್ರರ ನಿಯಂತ್ರಣದಲ್ಲಿಯೇ ಇದೆ. ಜೊತೆಗೆ 70 ಕ್ಕಿಂತ ಹೆಚ್ಚು ಜಿಲ್ಲೆಗಳಲ್ಲಿ ತಾಲಿಬಾನ್ ಸಕ್ರಿಯ ನೆಲೆಗಳನ್ನು ಹೊಂದಿದೆ ಎಂಬ ಮಾಹಿತಿಯನ್ನು ಬಿಬಿಸಿ ಅಂದಾಜು ಮಾಡಿದೆ. ಆದರೆ, ಅಮೆರಿಕ ಮತ್ತು ನ್ಯಾಟೋ ಅಧೀನದಲ್ಲಿರುವ ಸರ್ಕಾರದ ಪಡೆಗಳು ಮೇಲುಗೈ ಹೊಂದಿವೆ ಎಂದು ಯುಎಸ್ ನ ಅಧ್ಯಕ್ಷ ಟ್ರಂಪ್ ಜಂಬ ಕೊಚ್ಚಿಕೊಳ್ಳುತ್ತಿದ್ದಾರೆ.

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಕಳೆದ 16 ವರ್ಷಗಳಿಂದ ಎಡೆಬಿಡದೆ ನಿರಂತರವಾಗಿ ಸಾಮ್ರಾಜ್ಯಶಾಹಿ ಅಮೆರಿಕ ನೇತೃತ್ವದ ಸೇನಾಪಡೆಗಳು "ಆಪರೇಷನ್ ಎಂಡ್ಯೂರಿಂಗ್ ಫ್ರೀಡಂ" (ಓ.ಇ.ಎಫ್ – "ಸ್ವಾತಂತ್ರ್ಯಕ್ಕಾಗಿ ನಿರಂತರ ಕಾರ್ಯಾಚರಣೆ") ಹೆಸರಿನಲ್ಲಿ ಅಫ್ಘಾನಿಸ್ತಾನದಲ್ಲಿ ಸಾವು ಮತ್ತು ಹತ್ಯೆಗಳು, ಹಿಂಸಾತ್ಮಕ ಕೃತ್ಯಗಳನ್ನು ನಡೆಸುತ್ತಿರುವುದು ದೈನಂದಿನ ಸುದ್ದಿಯಾಗಿದೆ. ಅಲ್ಲಿನ ಜನತೆ ಶಾಂತಿ ಮತ್ತು ಸ್ಥಿರತೆಯ ಬದುಕಿಗಾಗಿ ಹುಡುಕಾಟ ನಡೆಸುತ್ತಲೆ ಇದ್ದಾರೆ. ಆದ್ಯಾಗ್ಯೂ ಹತ್ಯಾಕಾಂಡಗಳಿಂಗೆ, ಕ್ರೂರ ದಾಳಿಗಳಿಗೆ ಸಾವು–ನೋವುಗಳಿಗೆ ಕೊನೆಯೇ ಇಲ್ಲವಾಗಿದೆ. ಅಮೆರಿಕನ್ ಸೇನಾ ಪಡೆಗಳ ಆಕ್ರಮಣಗಳಿಂದ ಅಫ್ಘಾನಿಸ್ಥಾನದ ಜನತೆ ಕಂಗಾಲಾಗಿ ನಲುಗಿ ಹೋಗಿದ್ದಾರೆ. ಆರ್ಥಿಕತೆ, ಜನರ ಜೀವನ, ದೇಶದ ಪ್ರಗತಿ ಈ ಘೋರ ಹಿಂಸಾತ್ಮಕತೆಯಿಂದ ಮಂಕು ಕವಿದ ವಾತಾವರಣದಲ್ಲಿ ಮುಳುಗಿದೆ.

ಓ.ಇ.ಎಫ್. ಅಫ್ಘಾನಿಸ್ತಾನಕ್ಕೆ ಸ್ವಾತಂತ್ರ್ಯವನ್ನು ಸಾಧಿಸಿಕೊಡುವ ವಾಗ್ದಾನವನ್ನು ಜಗತ್ತಿಗೆ ನೀಡಿತ್ತು. 2001 ರ, ಸೆಪ್ಟೆಂಬರ್ 11 ರ ಘಟನೆಯ ನಂತರ ಈ ಓ.ಇ.ಎಫ್. ಅಮೆರಿಕನ್ ಸೇನಾ ಪಡೆ ಅಫ್ಘಾನಿಸ್ತಾನಕ್ಕೆ ಕಾಲಿಟ್ಟಿತು. ಅಕ್ಟೋಬರ್ 7, 2001 ರಿಂದ ತನ್ನ ಸೇನಾ ಪಡೆಗಳಿಂದ ಮೊದಲ ದಾಳಿಯನ್ನು ಆರಂಭಿಸಿತು. ಅಂದಿನಿಂದ ಇಲ್ಲಿಯವರೆವಿಗೂ, ನೂರಾರು ಪ್ರಮುಖ ದಾಳಿಗಳನ್ನು ಹಾಗೂ ಸಾವಿರಾರು ಸಣ್ಣ–ಪುಟ್ಟ ಆಕ್ರಮಣಗಳನ್ನು ನಡೆಸುತ್ತಿರುವ ಈ ಸೇನಾ ಪಡೆಯ ಕಾರ್ಯಾಚರಣೆ ಸಾಕಷ್ಟು ಹಿಂಸಾತ್ಮಕ ಬಾಂಬುಗಳ ದಾಳಿಗಳಿಂದ ಅಫ್ಘಾನಿಸ್ತಾನದಲ್ಲಿ ಮಾರಣಹೋಮ ನಡೆಸುತ್ತಿರುವುದನ್ನು – ಇಡೀ ಜಗತ್ತೇ ನೋಡುತ್ತಿದೆ. ಸ್ವಾತಂತ್ರ್ಯ ತಂದುಕೊಡುವ ಮಾತಿರಲಿ, ಬದಲಿಗೆ ತನ್ನ ಕಾರ್ಯಾಚರಣೆಯನ್ನೂ ತೀವ್ರಗೊಳಿಸಲು ಮತ್ತಷ್ಟು ಹೆಚ್ಚಿನ ಮಿಲಿಟರಿಯನ್ನು ಅಲ್ಲಿಗೆ ಕಳಿಸುತ್ತಿದೆ.

ಹೆಚ್ಚಾಗಿರುವ ಉಗ್ರಗಾಮಿ ದಾಳಿಗಳು

ಕಳೆದ ಎರಡು ವಾರಗಳಿಂದೀಚೆಗೆ ನಾಲ್ಕು ಉಗ್ರಗಾಮಿ ದಾಳಿಗಳು ನಡೆದು ಅನೇಕ ಜನರನ್ನು ಬಲಿತೆಗೆದುಕೊಂಡು ಜನ ಮತ್ತಷ್ಟು ಗಾಬರಿಗೊಳ್ಳುವಂತಾಗಿದೆ. ಅಫ್ಘಾನಿಸ್ತಾನದ ರಾಜಧಾನಿಯಾದ 'ಕಾಬೂಲ್' ನಗರದ ಹೃದಯ ಭಾಗದಲ್ಲಿಯೇ ಈ ವಿಧ್ವಂಸಕ ಬಾಂಬ್ ದಾಳಿ ನಡೆದಿದೆ. ಕಳೆದ ಕಳೆದ ಸೋಮವಾರವಷ್ಟೆ (29 ರಂದು) ಕಾಬೂಲಿನಲ್ಲಿರುವ 'ಮಾರ್ಷಲ್' ಫಾಹಿಮ್ ಮಿಲಿಟರಿ ಅಕಾಡೆಮಿ ಮೇಲೆ ನಡೆದ ಈ ಬಾಂಬು ದಾಳಿಯಲ್ಲಿ 11 ಮಂದಿ ಕೊಲ್ಲಲ್ಪಟ್ಟಿದ್ದಾರೆ. ಅದರ ಹಿಂದಿನ ಶನಿವಾರವಷ್ಟೆ ಸ್ಫೋಟಕಗಳನ್ನು ಹೊಂದಿದ್ದ ಅಂಬ್ಯೂಲೆನ್ಸ್ ಚೆಕ್‌ಪಾಯಿಂಟ್ ಬಳಿ ಸ್ಫೋಟಗೊಂಡು 100 ಕ್ಕಿಂತ ಹೆಚ್ಚು ಜನರು ಸಾವನ್ನಪ್ಪಿದ್ದಾರೆ. ಇದಕ್ಕೆ ಒಂದು ವಾರದ ಮುಂಚೆ, ಉಗ್ರಗಾಮಿಗಳು ಕಾಬೂಲಿನ 'ಇಂಟರ್ ಕಾಂಟಿನೆಂಟಲ್ ಹೋಟೆಲ್' ಮೇಲೆ ಆಕ್ರಮಣ ನಡೆಸಿದ್ದರು. ಅಂದು ಸುಮಾರು 12 ಗಂಟೆಗಳ ಕಾಲ 'ಭದ್ರತಾ ಪಡೆಗಳೊಂದಿಗೆ ಸೆಣಸಾಟ ನಡೆಸಿದ ಉಗ್ರಗಾಮಿಗಳು 12 ವಿದೇಶಿಯರನ್ನು ಒಳಗೊಂಡಂತೆ, ಕನಿಷ್ಟ 18 ಜನರನ್ನು ಕೊಂದು ಹಾಕಿದ್ದರು. ಈ ದಾಳಿ ನಡೆಸಿದ ಮರುದಿನವೇ, ಪೂರ್ವ ಅಫ್ಘಾನಿಸ್ಥಾನದ ಜಲಾಲಾಬಾದ್ ನಗರದಲ್ಲಿನ ಬ್ರಿಟಿಷ್ ನೆರವು ಸಂಸ್ಥೆಯಾದ 'ಮಕ್ಕಳಾ ರಕ್ಷಣಾ ಸಂಸ್ಥೆ' ಮೇಲೆ ಬಾಂಬು ದಾಳಿ ನಡೆಸಿ, 4 ಮಂದಿಯನ್ನು ಕೊಂದು ಒಂದು ಡಜನ್ ಗಿಂತಲೂ ಹೆಚ್ಚಿನ ಜನರನ್ನು ಗಾಯಗೊಳಿಸಲಾಗಿತ್ತು.

ತಾಲಿಬಾನ್ ಉಗ್ರರನ್ನು ನಿಗ್ರಹಿಸುವಲ್ಲಿ ವಿಫಲ

ಅಂಕಲ್ ಸ್ಯಾಮ್ ಪಡೆಗಳು 'ಅಫ್ಘಾನ ಜನರಿಗೆ ಸ್ವಾತಂತ್ರ್ಯ ತಂದುಕೊಡುವ' ವಾಗ್ದಾನವು ಹುಸಿಯಾಗಿದೆ. ಇಲ್ಲಿ ಕಾಲಿಟ್ಟು 16 ವರ್ಷಗಳು ಕಳೆದು ಹೋಗಿವೆ. ಆದಾಗ್ಯೂ ತಾಲಿಬಾನ್ ಉಗ್ರರನ್ನು ನಿಗ್ರಹಿಸಲು ಸಾಧ್ಯವಾಗಿಲ್ಲ. ಎಂಬುದು



ವಾಸ್ತವ. ಇಡೀ ದೇಶದಲ್ಲಿ ಸುಮಾರು 4 ರಷ್ಟು ಪ್ರತಿಶತದಷ್ಟು ಪ್ರದೇಶಗಳು ಇನ್ನು ತಾಲಿಬಾನ್ ಉಗ್ರರ ನಿಯಂತ್ರಣದಲ್ಲಿಯೇ ಇದೆ. ಜೊತೆಗೆ 70 ಕ್ಕಿಂತ ಹೆಚ್ಚು ಜಿಲ್ಲೆಗಳಲ್ಲಿ ತಾಲಿಬಾನ್ ಸಕ್ರಿಯ ನೆಲೆಗಳನ್ನು ಹೊಂದಿದೆ ಎಂಬ ಮಾಹಿತಿಯನ್ನು ಬಿಬಿಸಿ ಅಂದಾಜು ಮಾಡಿದೆ. ಆದರೆ, ಅಮೆರಿಕ ಮತ್ತು ನ್ಯಾಟೋ ಅಧೀನದಲ್ಲಿರುವ ಸರ್ಕಾರದ ಪಡೆಗಳು ಮೇಲುಗೈ ಹೊಂದಿವೆ ಎಂದು ಯುಎಸ್ ನ ಅಧ್ಯಕ್ಷ ಟ್ರಂಪ್ ಜಂಬ ಕೊಚ್ಚಿಕೊಳ್ಳುತ್ತಿದ್ದಾರೆ.

ಮಂಕು ಕವಿದ ಅಫ್ಘಾನ್ ಆರ್ಥಿಕತೆ

ಅಫ್ಘಾನಿಸ್ತಾನದ ಅಧ್ಯಕ್ಷರಾದ ಅಶ್ರಫ್ ಘಾನಿಯವರೆ ಸ್ವತಃ; ದೇಶದ ಅನೇಕ ಬಾಗಗಳಲ್ಲಿ ಬಾಂಬು ದಾಳಿಗಳನ್ನು ಮತ್ತು ಅದರ ನಿಯಂತ್ರಣ ಮಾಡುವುದರಲ್ಲಿ ಸರ್ಕಾರ ಅಮೆರಿಕನ್ ಸೈನ್ಯ ಪಡೆಗಳ ಬೆಂಬಲವಿಲ್ಲದಿದ್ದರೆ ಎದುರಿಸಲು ಅಸಾಧ್ಯವೆಂಬುದನ್ನು ಒಪ್ಪಿಕೊಳ್ಳುತ್ತಾರೆ. ಏಕೆಂದರೆ, ಯು.ಎಸ್. ಪಡೆಗಳ ಬೆಂಬಲವಿಲ್ಲದಿದ್ದರೆ, ನಮ್ಮ ರಾಷ್ಟ್ರೀಯ ಸೈನ್ಯ ಆರು ತಿಂಗಳುಗಳ ಕಾಲ ಸಹ ಉಳಿಯಲಾರವು. ಅಫ್ಘಾನಿಸ್ತಾನದ ವಾರ್ಷಿಕ ಬಜೆಟ್‌ನಲ್ಲಿ ಶೇಕಡ 70 ರಷ್ಟು ರಕ್ಷಣಾ ವೆಚ್ಚಕ್ಕಾಗಿಯೇ ಬಳಸಲಾಗುತ್ತಿದೆ. ಇದರಿಂದ ಅಲ್ಲಿನ ಆರ್ಥಿಕತೆ ಮಂಕು ಭ್ರಮೆಯಲ್ಲಿಯೇ ಮುಳುಗಿದೆ. ವಿದೇಶಿ ನೆರವಿನ ಮೇಲೆ ಹೆಚ್ಚು ಅವಲಂಬಿತವಾಗಿದೆ. ಈ ನೆರವು ಹೆಚ್ಚಾಗಿ ಯುದ್ಧದ ಸಾಮಗ್ರಿಗಳ ಮೂಲಕ ಒದಗುತ್ತಿವೆ. ಸುಸ್ಥಿರ ಬೆಳವಣಿಗೆಗೆ ಹಾಗೂ ಬಡತನ, ಹಸಿವುಗಳನ್ನು ನಿಯಂತ್ರಿಸಲು ಈ ನೆರವು ಒದಗುತ್ತಿಲ್ಲ. ಇದು ಸರ್ಕಾರಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದೆ.

ಇಲ್ಲಿ ಕೆಲಸಮಾಡುತ್ತಿರುವ ಎನ್.ಜಿ.ಓ.ಗಳು ಮತ್ತು ಮಾನವೀಯ ಸಹಾಯ ಸಂಸ್ಥೆಗಳಿಗೆ ವಿದೇಶಿ ನೆರವು ಬರುತ್ತಿದೆಯಾದರೂ, ಅವುಗಳು ವಾಸ್ತವವಾಗಿ, ಯು.ಎಸ್. ಸೇನೆಯೊಂದಿಗೆ ಸೇರಿಕೊಂಡು 'ಗುಪ್ತಚರ ಮಾಹಿತಿ' ಒದಗಿಸಲು, ಲಕ್ಷಾಂತರ ರೂ. ಗಳನ್ನು ಪಡೆಯುತ್ತಿದ್ದಾರೆ. ಅಂದರೆ ಯುದ್ಧದ ವಾತಾವರಣಕ್ಕೆ ಮತ್ತಷ್ಟು ಪುಷ್ಟಿ ಒದಗಿಸುವ ಕೆಲಸದಲ್ಲಿ ನಿರತರಾಗಿದ್ದಾರೆ. ಮತ್ತೊಂದು ಕಡೆ, ಅಫೀಮು ಆರ್ಥಿಕತೆಯು ಹೆಚ್ಚಾಗುತ್ತಿದೆ. ಇದರ ಬೆಳೆಯಲ್ಲಿ ಸಾರ್ವಕಾಲಿಕ ಹೆಚ್ಚಳವಾಗಿದೆ. ಲಭ್ಯವಿರುವ ಮಾಹಿತಿ ಪ್ರಕಾರ, ಅಫ್ಘಾನಿಸ್ತಾನದಲ್ಲಿ ಪಾಪ್ಪಿ (ಅಫೀಮು ತಯಾರಿಯ ಮೂಲವಸ್ತು) ಬೆಳೆಯುವ ಪ್ರದೇಶದಲ್ಲಿ ಶೇ. 63 ರಷ್ಟು ಹೆಚ್ಚಳವಾಗಿದ್ದು, ಅದನ್ನು 3.28 ಲಕ್ಷ ಹೆಕ್ಟೇರ್‌ನಷ್ಟು ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಹೀಗಾಗಿ ಅಫೀಮಿನ ಉತ್ಪಾದನೆ ಒಂದು ಅಂದಾಜಿನಂತೆ ಶೇ. 87 ರಷ್ಟು ಹೆಚ್ಚಾಗಿ, ಒಟ್ಟು 9000 ಮೆಟ್ರಿಕ್ ಟನ್ ರಷ್ಟು ಆಗಿದೆ. ಇದರ ಜೊತೆಗೆ ಯು.ಎಸ್. ಪಡೆಗಳ ಸಹಾಯದಿಂದ ಯುದ್ಧಕೋರ ಮಾಲೀಕರ ಬೊಕ್ಕಸಗಳನ್ನು ಉತ್ತೇಜಿಸುವ ಮೂಲಕ ಅಫೀಮು ವ್ಯಾಪಾರಸ್ಥರು, ಸರ್ಕಾರದ ಮೇಲೆ ಬಲವಾದ ಪ್ರಭಾವವನ್ನು ಹೊಂದಿದ್ದಾರೆ. ಹಾಗೂ ಇವರು ಜನತೆಯ ಮೇಲೆ ಅನೇಕ ದಾಳಿಗಳನ್ನೂ ನಡೆಸಲು ಕಾರಣರಾಗಿದ್ದಾರೆ.

ಯುದ್ಧ–ಪ್ರೀತಿವೊಂದೇ ಅಮೆರಿಕದ ಬಯಕೆ

ಇತ್ತೀಚೆಗೆ ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತಷ್ಟು ಯುದ್ಧ ವಿಮಾನಗಳನ್ನು ಮತ್ತು ಶಸ್ತ್ರಾಸ್ತ್ರ ಪಡೆಗಳನ್ನು ಅಫ್ಘಾನಿಸ್ತಾನಕ್ಕೆ ಕಳುಹಿಸುವ ಘೋಷಣೆ ಮಾಡಿದ್ದಾರೆ. ಲುಡ್ವಿಗ್ ವಾನ್ ಮಿಸಸ್ ಸಂಸ್ಥೆಯ ನಿರ್ದೇಶಕರಾದ ಲೆವ್ ರಾಕ್ವೆಲ್ ಪ್ರಕಾರ, ಅಮೆರಿಕಾದ ಪಡೆಗಳಿಗೆ ಅಫ್ಘಾನಿಸ್ತಾನದಲ್ಲಿ ಏನೂ ಕೆಲಸವಿಲ್ಲ. ಆದಾಗ್ಯೂ, ಅದು ಯುದ್ಧವನ್ನು ಮಾತ್ರ ಪ್ರೀತಿಸುತ್ತದೆ ಮತ್ತು ಇನ್ನು 17 ವರ್ಷಗಳ ಕಾಲ ಬಾಂಬು ದಾಳಿಗಳನ್ನು ನಡೆಸುವ ಮೂಲಕ ಮತ್ತಷ್ಟು ಸಾವಿರಾರು ಜನರನ್ನು ಕೊಲ್ಲುವ ಬಯಕೆಯನ್ನು ಮಾತ್ರ ಅದು ಹೊಂದಿದೆ ಎನ್ನುತ್ತಾರೆ.

ವಿದೇಶಿಗರು ತಮ್ಮನ್ನು ಆಳುವುದಾಗಲಿ, ತಮ್ಮ ಮೇಲೆ ಅಧಿಕಾರ ಚಲಾಯಿಸುವುದಾಗಲಿ ಅಫ್ಘಾನರುರು ಎಂದೂ ಇಷ್ಟಪಡುವುದಿಲ್ಲ. ತಾಲಿಬಾನ್‌ರೊಂದಿಗೆ ಶಾಂತಿ ಒಪ್ಪಂದದ ಮಾತುಕತೆ ನಡೆಸಿ, ಅಮೆರಿಕದ ಮಿಲಿಟರಿ ಅಫ್ಘಾನಿಸ್ತಾನದಿಂದ ಹೊರ ನಡೆದು, ಅಫ್ಘಾನ್ ಸರ್ಕಾರ ದೇಶದ ಆಡಳಿತ ನಡೆಸಲು ಬಿಡುವುದೊಂದೇ ಇರುವ ಪ್ರಮುಖ ಪರಿಹಾರ ಎಂಬುದು ಹಲವರ ಅಭಿಪ್ರಾಯ.

ಅಫ್ಘಾನಿಸ್ತಾನ : ಶಸ್ತ್ರಾಸ್ತ್ರಗಳ ಪರೀಕ್ಷಾ ಮೈದಾನ

ಅಮೆರಿಕಾವು, ಅಫ್ಘಾನಿಸ್ತಾನವನ್ನು ತನ್ನ ಮಿಲಿಟರಿ ಪ್ರಭಾವ ಬೀರುವ ಸಲುವಾಗಿ, ತನ್ನ ಶಸ್ತ್ರಾಸ್ತ್ರಗಳ ಪರೀಕ್ಷಾ ಮೈದಾನವನ್ನಾಗಿ ಪರಿಗಣಿಸಿದೆ. ಪ್ರಪಂಚಾದ್ಯಂತ ತನ್ನ ಯುದ್ಧ ಶಸ್ತ್ರಾಸ್ತ್ರಗಳನ್ನು ಮಾರಲು ಈ ಮೈದಾನ ಸಹಕಾರಿಯಾಗಿದೆ. ಹೆಚ್ಚು ಜನರನ್ನೂ ಕೊಲ್ಲುವಂತ ವಿವಿಧ ಬಗೆಯ ಡ್ರೋನ್‌ಗಳು, ಅದಕ್ಕಿಂತ ಹೆಚ್ಚು ಪರಿಣಾಮಕಾರಿ ಹಾಗೂ 'ಬಾಂಬುಗಳಲ್ಲಿ ತಾಯಿ ಬಾಂಬೆಂದು' ಅಡ್ಡ ಹೆಸರು ಹೊಂದಿರುವ "ಜೆ.ಬಿ.ಯು–43/ಬಿ ಬೃಹತ್ ಆರ್ಡನೆನ್ಸ್ ಏರ್ ಬ್ಲಾಸ್ಟ್ ಬಾಂಬ್" – ಇವೆಲ್ಲವನ್ನು ಮೊಟ್ಟ ಮೊದಲ ಬಾರಿಗೆ ಅಫ್ಘಾನಿಸ್ತಾನದಲ್ಲಿ ಬಳಸಿ ಪರೀಕ್ಷಿಸಲಾಯಿತು.

ಯು.ಎಸ್. ನ ವಾಯು ಪಡೆಯ ಮಾಹಿತಿ ಪ್ರಕಾರ, 2016 ರಲ್ಲಿ ಒಟ್ಟು 1337 ಬಾಂಬುಗಳನ್ನು ಮತ್ತು 2017 ರಲ್ಲಿ 4300 ಬಾಂಬುಗಳನ್ನು (ಅಂದರೆ ಮೂರು ಪಟ್ಟು ಹೆಚ್ಚಾಗಿ) ಅಫ್ಘಾನಿಸ್ಥಾನದ ಮೇಲೆ ಎಸೆಯಲಾಗಿದೆ. ಇದರಿಂದಾಗಿ 2016 ಕ್ಕಿಂತ ಶೇ. 43 ರಷ್ಟು ಹೆಚ್ಚು ಸಾವು – ನೋವುಗಳ ಸಂಖ್ಯೆ 2017 ರಲ್ಲಿ ಆಗಿದೆ. ಮೇಲಿನ ಪುಟಗಳಲ್ಲಿ ಗೊತ್ತಾಗಿರುವ ಸಂಗತಿ ಎಂದರೆ – ಟ್ರಂಪ್ ಆಡಳಿತವು ಅಫ್ಘಾನಿಸ್ತಾನದಲ್ಲಿ ಯುದ್ಧವನ್ನು ಅಂತ್ಯಗೊಳಿಸುವ ಯಾವುದೇ ರಾಜಕಾರಣ ಅಥವಾ ರಾಜತಾಂತ್ರಿಕ ನೀತಿಯನ್ನು ಅನುಸರಿಸುವ ಬಯಕೆ ಹೊಂದಿಲ್ಲದಿರುವುದು ಹಾಗೂ ಹಿಂಸಾಚಾರದ ಮೂಲಕ ತನ್ನ ಮಿಲಿಟರಿ ಪ್ರಾಬಲ್ಯವನ್ನು ಜಗತ್ತಿಗೆ ತೋರಿಸುವ ತಂತ್ರವಾಗಿದೆ ಎಂಬ ಸತ್ಯ. ಇದೀಗ 16 ವರ್ಷ ಕಳೆದಿದೆ. ಆದಾಗ್ಯೂ ಸ್ವಾತಂತ್ರ್ಯ ತಂದು ಕೊಡುವ ಮಾತು ಮಾತ್ರ ಹುಸಿಯಾಗಿಯೆ ಉಳಿದಿದೆ. ಮತ್ತಷ್ಟು ಬಾಂಬುಗಳ ದಾಳಿ ನಡೆಸುವುದೇ ಇದರ ಆದ್ಯತೆಯಾಗಿದೆ ಎಂದು ಜಸ್ಟ್ ವಿದೇಶಿ ನೀತಿ ಗುಂಪಿನ ನೀತಿ ನಿರ್ದೇಶಕರಾದ ರಾಬರ್ಟ್ ನೇಮನ್ ರವರ ಪ್ರಬಲ ಅಭಿಪ್ರಾಯವಾಗಿದೆ.

ಟ್ರಂಪ್ ಹೇಳಿಕೆ: ಹಾಸ್ಯಾಸ್ಪದ ಹಾಗೂ ಘೋರ ಸಂಚು

ಟ್ರಂಪ್ ನ ಇತ್ತೀಚಿನ ಹೇಳಿಕೆಯ ಪ್ರಕಾರ, ತಾಲಿಬಾನ್ ಮತ್ತು ಇಸ್ಲಾಮಿಕ್ ಸ್ಟೇಟ್ ಉಗ್ರ ಪಡೆಗಳನ್ನು ಹಿಮ್ಮೆಟಿಸಲು ಕಾರ್ಯಾಚರಣೆ ಮುಂದುವರಿಯುತ್ತಿದೆ. ಆದರೆ 16 ವರ್ಷಗಳಿಂದ ಇದು ಏಕೆ ಸಾಧ್ಯವಾಗಿಲ್ಲ? ಎಂಬ ಪ್ರಶ್ನೆಗೆ ಯು.ಎಸ್. ನಿಂದ ಸೂಕ್ತ ಉತ್ತರವಿಲ್ಲ. 16 ವರ್ಷಗಳಿಂದಲೂ ಇದೇ ಜಂಬದ ಮಾತುಗಳನ್ನೂ ಹೇಳುತ್ತಲೇ ಬಂದಿದೆ.

ಈ ಹಿನ್ನೆಲೆಯಲ್ಲಿ ಅಫ್ಘಾನಿಸ್ತಾನಕ್ಕೆ ಈಗಾಗಲೇ ಹೆಚ್ಚಿನ ಸೈನ್ಯವನ್ನು ಕಳುಹಿಸಲಾಗಿದೆ. ಮತ್ತಷ್ಟು ಸೈನ್ಯವನ್ನು ಕಳುಹಿಸುವ ಘೋಷಣೆಯನ್ನೂ ಟ್ರಂಪ್ ಮಾಡಿದ್ದಾರೆ. ಮತ್ತೊಂದೆಡೆ ತಾಲಿಬಾನ್ ತನ್ನ ದಾಳಿಗಳನ್ನು ಹೆಚ್ಚು ಗೊಳಿಸುತ್ತಿದೆ. ಜೊತೆಗೆ ಇಸ್ಲಾಮಿಕ್ ಸ್ಟೇಟ್ (ಐಎಸ್‌ಎಸ್) ಉಗ್ರರು ಮಧ್ಯಪ್ರಾಚ್ಯದಲ್ಲಿ ಹಾಗೂ ಇತರೆ ಭಾಗಗಳಲ್ಲಿ ನಾಶ ಹೊಂದುತ್ತಿರುವ ನಿಟ್ಟಿನಲ್ಲಿ, ಹತಾಶೆಯೊಂದಿಗೆ ದಾಳಿಗಳನ್ನು ನಡೆಸುತ್ತಿದ್ದಾರೆ. ಇದರಿಂದ ಅಫ್ಘಾನಿಸ್ತಾನದ ಜನತೆಯ ಸ್ವಾತಂತ್ರ್ಯವಿರಲಿ; ಬದಲಿಗೆ ಮತ್ತಷ್ಟು ಸಾವುಗಳು, ಹತ್ಯೆಗಳು ಹಾಗೂ ನೋವುಗಳು ಕೊನೆಗೊಳ್ಳುವ ಬಯಕೆಗಳು ಹುಸಿಯಾಗುತ್ತಿವೆ.

ಅಮೆರಿಕನ್ ಪಡೆಗಳು ವಾಪಸ್ಸು ಆಗಲೇಬೇಕು

ಅಮೆರಿಕನ್ ಸೇನಾ ಪಡೆಗಳು ಅಫ್ಘಾನಿಸ್ತಾನದಲ್ಲಿ ಬೀಡು ಬಿಟ್ಟಿರುವವರೆಗೂ ಯುದ್ಧಕೋರ ಪರಿಸ್ಥಿತಿಯ ಉಲ್ಬಣತೆ ಹೀಗೆಯೇ ಮುಂದುವರಿಯುತ್ತದೆ ಎಂಬ ಭಾವನೆಯನ್ನು ಬ್ರಿಟನ್ನಿನ ಕ್ರೈಸಿಸ್ ರಿಸರ್ಚ್ ಸಂಸ್ಥೆಯ ನಿರ್ದೇಶಕ ಮಾರ್ಕ್ಸ್ ಅಲ್ಲಿಂಡ್ ಹೇಳಿಕೆ ನೀಡಿದ್ದಾರೆ. ಅಮೆರಿಕದ ಅಧ್ಯಕ್ಷ ಟ್ರಂಪ್ ಮತ್ತಷ್ಟು ಪಡೆ ಕಳುಹಿಸುವ ನಿರ್ಧಾರ ಮತ್ತಷ್ಟು ಮಾರಕವಾಗುತ್ತದೆ. ಎಂದಿದ್ದಾರೆ.

ಅಫ್ಘಾನಿಸ್ತಾನದ ಪ್ರಸಿದ್ಧ ತನಿಖಾ ಪತ್ರಕರ್ತ ಆಂಡ್ರೋ ವಿಟ್‌ಚೆಕ್ ಪ್ರಕಾರ "ಅಫ್ಘಾನಿಸ್ಥಾನ ಇದೀಗ ಮಾರಣಾಂತಿಕ ಅಪಾಯವನ್ನು ಎದುರಿಸುತ್ತಿದೆ".

JANASHAKTHI KANNADA VARA PATRIKE Feb 12-18, 2018 Price : Rs. 10/- Date of Publication : 9 February 2018 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಚಳಿ, ಮಳೆಯಲ್ಲೂ ಬಿಸಿಯೂಟ ತಾಯಂದಿರ ಹೋರಾಟ



ಮಹಿಳೆಯರ ಹಕ್ಕುಗಳ ಪಡೆಯಲು ಯಾವಾಗಲೂ ಅಹೋರಾತ್ರಿ ಹೋರಾಟದ ಪ್ರಯಾಣವೊಂದೇ ದಾರಿಯೋ ಏನೋ. ಕನಿಷ್ಟ ವೇತನ, ಕೆಲಸದ ಖಾಯಂಗೆ ಆಗ್ರಹಿಸಿ ಮತ್ತು ಬಿಸಿಯೂಟದ ಖಾಸಗೀಕರಣ ವಿರೋಧಿಸಿ ರಾಜಧಾನಿ ಬೆಂಗಳೂರಿನಲ್ಲಿ ಶಾಲೆಗಳಲ್ಲಿ ಮಕ್ಕಳಿಗೆ ಬಿಸಿಯೂಟ ಮಾಡಿ ಬಡಿಸುವ ಸಾವಿರಾರು ತಾಯಂದಿರು ಕೆಂಬಾವುಟ ಹಿಡಿದು ನ್ಯಾಯ ಕೇಳಿ ಬೀದಿಗಿಳಿದಿದ್ದಾರೆ. ಬೀದಿಯಲ್ಲೆ ಚಳಿ, ಮಳೆಯೆನ್ನದೆ ಮಲಗಿದ್ದಾರೆ. ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘ (ಸಿಐಟಿಯು) ಅದಕ್ಕೆ ನೇತೃತ್ವ ನೀಡಿದೆ.

ಫೆ.8 ರಿಂದ ರಾಜ್ಯಾದ್ಯಂತ ಬಿಸಿಯೂಟ ಬಂದ್ ಮಾಡಿ ಬಿಸಿಯೂಟ ತಾಯಂದಿರು ಬೆಂಗಳೂರಿಗೆ ಬಂದಿದ್ದಾರೆ. ಫ್ರೀಡಂ ಪಾರ್ಕಿನಲ್ಲಿ ಸಾವಿರಾರು ಕಾರ್ಯಕರ್ತೆಯರು ಪ್ರತಿಭಟನೆ ನಡೆಸುತಿದ್ದಾರೆ. ರೈಲ್ವೆ ನಿಲ್ದಾಣದಿಂದ ಫ್ರೀಡಂ ಪಾರ್ಕಿನ ವರೆಗೆ ಬೃಹತ್ ರ್‍ಯಾಲಿಯಲ್ಲಿ ತೆರಳಿದ ಅವರು, ಕನಿಷ್ಟ ವೇತನದ ತಮ್ಮ ಬೇಡಿಕೆ ಈಡೇರುವವರೆಗೂ ಹೋರಾಟವನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ ಎಂದಿದ್ದಾರೆ. ಬಿಸಿಯೂಟ ಯೋಜನೆ ಕಾರ್ಯಕರ್ತೆಯರು ನಿರಂತರ ಪ್ರತಿಭಟನೆ ನಡೆಸಿದರೂ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡದ ಹಿನ್ನೆಲೆಯಲ್ಲಿ ಕೆರಳಿರುವ ಕಾರ್ಯಕರ್ತೆಯರೆಲ್ಲರೂ ತಮ್ಮ ಬೇಡಿಕೆ ಈಡೇರುವ ವರೆಗೆ ಕದಲುವುದಿಲ್ಲ ಎಂದು ಪಣ ತೊಟ್ಟಿದ್ದಾರೆ. ಇದರಿಂದ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಶಾಲೆಗಳಲ್ಲಿ ಓದುತ್ತಿರುವ ಸುಮಾರು 60 ಲಕ್ಷ ಮಕ್ಕಳ ಮಧ್ಯಾಹ್ನದ ಬಿಸಿಯೂಟ ವಿತರಣೆಯಲ್ಲಿ ವ್ಯತ್ಯಯವಾಗಿದೆ.

ಬೋರ್ಡ ಡೈರೆಕ್ಟರ್ ಸುಂಮಗಲಾ, ಜಂಟಿ ನಿರ್ದೇಶಕರು ಮಾರುತಿ, ಪ್ರೈಮರಿ ಡೈರೆಕ್ಟರ್ ಹೀಗೆ ಹಿರಿಯ ಅಧಿಕಾರಿಗಳು ಫೆ.8 ರಂದು ಬಂದ್ರು. ಅಯ್ಯೋ ನೀವು ಆರೋಗ್ಯ ಹಾಳು ಮಾಡಿಕೊಳ್ಳಬೇಡಿ, ಶಾಲಾ ಮಕ್ಕಳಿಗೆ ಬಿಸಿಯೂಟ ನಿಲ್ಲಿಸಬೇಡಿ, ನಿಮ್ಮ ಕೆಲಸದಿಂದಲೇ ಈ ಬಿಸಿಯೂಟ ಅಕ್ಷರದಾಸೋಹ ಯಶಸ್ವಿಯಾಗಿದೆ, ಪ್ಲೀಸ್ ಮನೆಗೆ ಹೋಗಿ, ಕೆಲಸಕ್ಕೆ ಹಾಜರಾಗಿ ಎಂದು ಪರಿಪರಿಯಾಗಿ ಅಲವತ್ತುಕೊಂಡರು. ಆದರೆ ಇದು ಸ್ವಾಭಿಮಾನಿ ಹೋರಾಟ. ಈ ಮಹಿಳೆಯರು ದಿನವೂ ಬೆಂಕಿ ಮುಂದೆ ಮತ್ತು ಮುಗ್ಧ ಮಕ್ಕಳ ಮುಂದೆ ಕೆಲಸ ಮಾಡುವವರು ಜೊತೆಗೆ ಊರ ಸ್ಥಾಪಿತ ಹಿತಾಸಕ್ತಿಗಳ ಎದುರು ಹಾಕಿಕೊಂಡು ಬದುಕು ಕಂಡುಕೊಳ್ಳಲು ಅನ್ನ ಉಳಿಸುವ ಹೋರಾಟದ ನಿರ್ಧಾರ ದಿಂದ ಬಂದವರು. ಹಾಗಾಗಿ ರಾತ್ರಿ ಮತ್ತು ಹಗಲು ಒಂದಾಗಿ ಬೀದಿಯೇ ಮನೆಯಾಗಿ ಬಾನೇ ಹೊದಿಕೆಯಾಗಿ ಮಂಜು ಹನಿದರೂ ಕಾರ್ಯಕರ್ತೆಯರು ಹಠ ಬಿಟ್ಟಿಲ್ಲ.

ಎರಡನೇ ದಿನಕ್ಕೆ ಮುಂದುವರಿದ ಹೋರಾಟದ ಸ್ಥಳಕ್ಕೆ ಮಾಜಿ ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರಾದ ಜಗದೀಶ ಶೆಟ್ಟರ್ ಮತ್ತು ಶೃಂಗೇರಿ ಶಾಸಕರಾದ ಜೀವರಾಜ್ ಆಗಮಿಸಿದ್ದರು. ಸಂಘಟನೆಯ ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಷ್ಮಿ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಮಾಲಿನಿ ಮೇಸ್ತ ಮಾತನಾಡಿ ಮನವಿ ಓದಿ ಹೇಳಿದರು. ಸಿಐಟಿಯು ರಾಜ್ಯ ಕಾರ್ಯದರ್ಶಿ ಉತ್ತರ ಕನ್ನಡ ಜಿಲ್ಲಾ ಅಧ್ಯಕ್ಷರಾದ ಯಮುನಾ ಗಾಂವ್ಕರ್ ನಿರ್ವಹಿಸಿದರು. ಕೇಂದ್ರ ಬಿಜೆಪಿ ಸರ್ಕಾರ ತನ್ನ ಬಜೆಟ್ಟಿನಲ್ಲಿ ಗೌರವ ಧನ ಹೆಚ್ಚಳ ಮಾಡದೇ ಇರುವ ಕುರಿತು ಜಗದೀಶ್ ಶೆಟ್ಟರ್ ಗಮನಕ್ಕೆ ತಂದು ಕೇಂದ್ರ ಸರ್ಕಾರದ ವಂಚನಾತ್ಮಕ ಬಜೆಟ್ ಖಂಡಿಸಲಾಯಿತು.

ಫೆ. 8 ಮತ್ತು 9ರಂದು ಎರಡೂ ದಿನ ಹಲವು ಸಂಘಟನೆಗಳು ಸೌಹಾರ್ದ ಬೆಂಬಲ, ಹಾಡು, ಭಾಷಣಗಳ ಮೂಲಕ ಹೋರಾಟಗಾರರನ್ನು ಹುರಿದುಂಬಿಸಿದ್ದಾರೆ. ಫೆ.9 ರ ರಾತ್ರಿ ಬಹುಭಾಷಾ ನಟರಾದ ಚಿಂತಕ ಪ್ರಕಾಶ್ ರೈ ಪ್ರತಿಭಟನಾ ಸ್ಥಳಕ್ಕೆ ಬಂದು ಬೆಂಬಲ ಸೂಚಿಸಿದ್ದಾರೆ.





ಬಿಸಿಯೂಟ ತಾಯಂದಿರ ಕೆಲವು ಪ್ರಮುಖ ಬೇಡಿಕೆಗಳು:

1. ರಾಜ್ಯ ಸರ್ಕಾರಕ್ಕೆ ಇಲಾಖೆಯಿಂದ ಶಿಫಾರಸ್ಸು ಆಗಿರುವ 5000/– ರೂ ಕೂಡಲೇ ಜಾರಿ ಆಗಬೇಕು.
2. ಕೇಂದ್ರ ಸರ್ಕಾರ ಬಿಸಿಯೂಟ ಯೋಜನೆಗೆ ಕಡಿತ ಮಾಡಿರುವ ಅನುದಾನ ವಾಪಾಸ್ ನೀಡಬೇಕು.
3. ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಪೂರಕವಾಗಿರುವ ಬಿಸಿಯೂಟ ಯೋಜನೆಯನ್ನು ಯಾವುದೇ ಸಂಘ–ಸಂಸ್ಥೆಗಳಿಗೆ ನೀಡಬಾರದು. ಈಗಾಗಲೇ 53 ಸ್ವಯಂಸೇವಾ ಸಂಸ್ಥೆಗಳಿಗೆ ಕೊಟ್ಟಿರುವುದನ್ನು ವಾಪಸ್ ಪಡೆಯಬೇಕು.
4. ಅನುದಾನದಲ್ಲಿ ಉಳಿದಿರುವ ಹಣದಲ್ಲಿ ಸಾಮಾಜಿಕ ಭದ್ರತೆಯ ಭಾಗವಾಗಿ ಪೆನ್ಷನ್ ನೀಡಲು ಸರ್ಕಾರ ಮುಂದಾಗಬೇಕು.
5. ಬಿಸಿಯೂಟ ನೌಕರರನ್ನು "ಡಿ"ಗ್ರೂಪ್ ನೌಕಕರೆಂದು ಪರಿಗಣಿಸಬೇಕು ಮತ್ತು ನೇಮಕಾತಿ ಪತ್ರ ನೀಡಬೇಕು.
6. ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು.
7. ನೌಕರರನ್ನು ಹಾಜರಾತಿ ನೆಪವೊಡ್ಡಿ ಕೆಲಸದಿಂದ ಕೈ ಬಿಡಬಾರದು.
8. ಬಿಸಿಯೂಟ ನೌಕರರನ್ನು ಶಾಲಾ ಸಿಬ್ಬಂದಿಯೆಂದು ಪರಿಗಣಿಸಬೇಕು.

ಬಿಸಿಯೂಟ ತಾಯಂದಿರ ಪಾಡು

ಮಧ್ಯಾಹ್ನದ ಬಿಸಿಯೂಟ ಯೋಜನೆ ರಾಜ್ಯದಲ್ಲಿ ಕಳೆದ 16 ವರ್ಷಗಳಿಂದ ಯಶಸ್ವಿಯಾಗಿ ನಡೆಯುತ್ತಿದೆ. ಈ ಯೋಜನೆಯಿಂದ ಲಕ್ಷಾಂತರ ಬಡ ಮಕ್ಕಳಿಗೆ ಶಾಲಾ ಶಿಕ್ಷಣಕ್ಕೆ ಅನುಕೂಲವಾಗಿದೆ. ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಓದುತ್ತಿರುವ 60 ಲಕ್ಷ ಮಕ್ಕಳಿಗೆ ಪ್ರತಿದಿನ ಅಡುಗೆ ಮಾಡಿ ಬಡಿಸುತ್ತಾರೆ. ಆದರೆ ಈ ಯೋಜನೆಯಡಿಯಲ್ಲಿ ಕೆಲಸ ಮಾಡುತ್ತಿರುವ ಬಡ ಕಾರ್ಮಿಕರಾದ ಈ ಮಹಿಳೆಯರು ತಿಂಗಳಿಗೆ ಕೇವಲ 2000 ರೂ. ಗಳಿಗೆ ದುಡಿಯುತ್ತಿದ್ದಾರೆ.

ಪ್ರತಿದಿನ ಬೆಳಿಗ್ಗೆ 9.30 ಕ್ಕೆ ಶಾಲೆಗಳಲ್ಲಿ ಹಾಜರಿದ್ದು ಅಡುಗೆ ಮನೆ ಕೆಲಸದ ಜೊತೆಗೆ ಕೆಲವು ಕಡೆ ಶಾಲೆಗಳನ್ನೂ ಸ್ವಚ್ಛಗೊಳಿಸಿ 10 ಗಂಟೆಗೆ ಶಾಲಾ ಮಕ್ಕಳಗೆ ಹಾಲು ಕೊಟ್ಟು, 1.30 ರೊಳಗೆ ಅಡುಗೆ ಮಾಡಿ ಮಕ್ಕಳಿಗೆ ಬಿಸಿಯೂಟ ಬಡಿಸಬೇಕು. ಅಡುಗೆ ಪಾತ್ರೆಗಳನ್ನು ಅಡುಗೆ ಮನೆಯನ್ನು ಸ್ವಚ್ಛಗೊಳಿಸಬೇಕು. ಶಾಲೆಯಲ್ಲಿ ನೀರಿಲ್ಲದಿದ್ದರೆ ದೂರದ ಪ್ರದೇಶಗಳಿಂದ ಹೊತ್ತುಕೊಂಡು ಬರಬೇಕು. ಬೇಸಿಗೆ ರಜೆಯಲ್ಲಿ ಬರಗಾಲದ ಪ್ರದೇಶಗಳಲ್ಲಿ ಅಡುಗೆ ಮಾಡಬೇಕು. ಮಾತ್ರವಲ್ಲ ರಾಷ್ಟ್ರೀಯ ಹಬ್ಬಗಳು ಚುನಾವಣೆಗಳು ಗ್ರಾಮಗಳಲ್ಲಿ ನಡೆಯುವ ಸಮಾರಂಭಗಳಿಗೂ ಅಡುಗೆ ಮಾಡಿ ಬಡಿಸಬೇಕು. ಶಾಲೆಗೆ ಭೇಟಿಕೊಡುವ ಅಧಿಕಾರಿಗಳಿಗೆ ಪ್ರತ್ಯೇಕವಾದ ಅಡುಗೆ ಮಾಡಬೇಕು. ತಿಂಗಳಿಗೆ 26 ದಿನ ದುಡಿಯುವ ಕೆಲಸದ ಭದ್ರತೆ ಇಲ್ಲದ 1 ಲಕ್ಷ 19 ಸಾವಿರ ಮಧ್ಯಮ ವಯಸ್ಸಿನ ಮಹಿಳೆಯರು ನಿವೃತ್ತಿ ತಲುಪುತ್ತಿರುವ ಮಹಿಳೆಯರು ಇದ್ದರೂ ಕೂಡ ಇದೂವರೆಗೂ ನಿವೃತ್ತಿ ಸೌಲಭ್ಯ ಇಲ್ಲದೇ ದುಡಿಯುತ್ತಿದ್ದಾರೆ.

ಮಕ್ಕಳ ಹಾಜರಾತಿ ಕಡಿಮೆಯಾದರೆ ಶಾಲಾಭಿವೃದ್ಧಿ ಸಮಿತಿ, ಗ್ರಾಮಪಂಚಾಯ್ತಿ ಸದಸ್ಯರು ಊರಿನ ಜನರಿಗೆ ಇವರು ಉತ್ತರಿಸಬೇಕು. ಇಂತಹ ಪರಿಸ್ಥಿತಿಯಲ್ಲಿ ಹಿಂದುಳಿದ ವರ್ಗಗಳಿಗೆ ಸೇರಿದವರು, ವಿಧವೆಯರು, ಪರಿತ್ಯಕ್ತೆಯರು ಎಂಬುದನ್ನು ಪರಿಗಣಿಸದೇ ಕೆಲಸದಿಂದ ತೆಗೆಯಲಾಗುತ್ತಿದೆ. ಇವರ ವೇತನ ಹೆಚ್ಚಳ ಇತರ ಬೇಡಿಕೆಗಳನ್ನು ಈಡೇರಿಸುವ ಕುರಿತು ಹಲವಾರು ಬಾರಿ ಸರ್ಕಾರದ ಜೊತೆ ಮಾತುಕತೆಗಳು ನಡೆದಿದೆ. ಮುಖ್ಯವಾಗಿ ಶಿಕ್ಷಣ ಸಚಿವರ ಜೊತೆ ಎರಡು ಬಾರಿ (13/06/2016 ಮತ್ತು 14/9/2017) ನಡೆದ ಮಾತುಕತೆಯ ಹಿನ್ನಲೆಯಲ್ಲಿ ಅವರ ಮಾತಿಗೆ ಗೌರವಿಸಿ ನಮ್ಮ ಎರಡು ಬಾರಿಯ ಹೋರಾಟವನ್ನು ಹಿಂದೆ ಪಡೆದುಕೊಂಡಿದ್ದೆವು. ಆದರೂ ಸರಕಾರ ಈ ವರೆಗೆ ಸ್ಪಂದಿಸಿಲ್ಲ. ಆದ್ದರಿಂದ ಈ ಹೋರಾಟಕ್ಕೆ ಪುನಃ ಇಳಿಯಬೇಕಾಯಿತು ಎಂದು ಸಂಘಟನೆಯ ಮುಖಂಡರಾದ ಎಸ್. ವರಲಕ್ಷ್ಮಿ ಮತ್ತು ಮಾಲಿನಿ ಮೆಸ್ತ ಹೇಳಿದ್ದಾರೆ.



ಹೋರಾಟ ವಾಪಸ್

ಫೆ.9 ತಡರಾತ್ರಿಯಲ್ಲಿ ಬಂದ ಸುದ್ದಿಯಂತೆ, ಬಿಸಿಯೂಟ ನೌಕರರ ಹೋರಾಟವನ್ನು ವಾಪಸು ಪಡೆಯಲಾಗಿದೆ. ಫೆ.9 ರಂದು ಹಲವು ಸುತ್ತಿನ ಹಲವು ಹಂತಗಳ (ಇಲಾಖೆ ಅಧಿಕಾರಿಗಳು, ಸಚಿವರು, ಮುಖ್ಯಮಂತ್ರಿಗಳು) ಹಾಗೂ ಇತರ ಪ್ರಮುಖರ ಬೆಂಬಲದೊಂದಿಗೆ ಸುದೀರ್ಘ ಮಾತುಕತೆಗಳ ನಂತರ, ಕೆಲವು ಬೇಡಿಕೆಗಳನ್ನು ಕೂಡಲೇ ಈಡೇರಿಸುವ, ಇತರ ಬೇಡಿಕೆಗಳ ಬಗ್ಗೆ ಕೊಡಲಾದ ಆಶ್ವಾಸನೆಗಳು ಹಾಗೂ ಮಾತುಕತೆಗಳ ಸಂದರ್ಭಧಲ್ಲಿ ಕಂಡುಬಂದ ನಡಾವಳಿಗಳ ಆಧಾರದ ಮೇಲೆ ಹೋರಾಟವನ್ನು ವಾಪಸು ಪಡೆಯಲಾಗಿದೆ. ಸರಕಾರ ಈ ಬಾರಿ ತನ್ನ ಆಶ್ವಾಸನೆಗಳನ್ನು ಪೂರೈಸುತ್ತದೆ ಎಂದು ನಮ್ಮ ನಿರೀಕ್ಷೆ ಎಂದು ಸಂಘಟನೆ ಮುಖಂಡರು ಹೇಳಿದ್ದಾರೆ.

JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**